ಸುದ್ದಿಗಳ ಹೊನಲು

# ಸಂಜೆ ಮುಗಿಲು

ಸಂಪುಟ: 21, ಸಂಚಿಕೆ: 131, ಪುಟಗಳು: 8, ಮಂಗಳವಾರ, 20 ಫೆಬ್ರವರಿ 2024 RNI NO. KARKAN/2002/08054

epaper: www.sanjemugilu.com

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ



ವೇಣು ಸಾರಥ್ಯದಲ್ಲಿ...

ಸುಭಾಷಿತ

ಸ್ವಲ್ಪ ಉಳ್ಳವನು ಬಡವನಲ್ಲ;
ಇನ್ನೂ ಬೇಕೆನ್ನುವವನು ಬಡವ

। ಸೆಬೇಕಾ

## ಪಂಚಾಂಗ

(ಮಂಗಳವಾರ 20, ಫೆಬ್ರವರಿ -2024)

- ಶ್ರೀ ಶೋಭಕೃತ ನಾಮ ಸಂವತ್ಸರ,
- ಉತ್ತರಾಯಣ, ಶಿಶಿರ ಋತು,
- ಮಾಘ ಮಾಸ, ಶುಕ್ಲಪಕ್ಷ,
- ದ್ವಾದಶಿ: ತಿಥಿ
- ಕೃತಿಕಾ ನಕ್ಷತ್ರ / ರೋಹಿಣಿ ನಕ್ಷತ್ರ
- ರಾಹುಕಾಲ: 03 : 30 PM -04 : 59 PM
- ಗುಳಿಕಕಾಲ: 12 : 32 PM - 02 : 01 PM
- ಯಮಗಂಡಕಾಲ: 09 : 34 AM - 11 : 03 AM

# ಕಿಮ್ ಜಾಂಗ್ ಉನ್‌ಗೆ ಕಾರನ್ನು ಉಡುಗೊರೆಯಾಗಿ ಕೊಟ್ಟ ರಷ್ಯಾ ಅಧ್ಯಕ್ಷ

**ರಷ್ಯಾ:** ಉಭಯ ದೇಶಗಳ ನಡುವೆ ಎಷ್ಟು ಪ್ರೀತಿ, ವಿಶ್ವಾಸವಿದೆ ಎಂದು ತೋರಿಸಲು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಉತ್ತರ ಕೊರಿಯಾ ಸರ್ವಾಧಿಕಾರಿ ಕಿಮ್ ಜಾಂಗ್ ಉನ್‌ಗೆ ಕಾರನ್ನು ಉಡುಗೊರೆಯಾಗಿ ನೀಡಿದ್ದಾರೆ. ಆ ಕಾರು ರಷ್ಯಾದಲ್ಲೇ ಸಿದ್ಧಪಡಿಸಲಾಗಿದ್ದು, ಹಲವು ವಿಶೇಷತೆಯನ್ನು ಹೊಂದಿದೆ. ಈ ಉಡುಗೊರೆಯು ವಿಶ್ವಸಂಸ್ಥೆಯ ನಿಯಮವನ್ನು ಉಲ್ಲಂಘಿಸಿದಂತಾಗುತ್ತದೆ ಎಂದು ಹೇಳಲಾಗುತ್ತಿದೆ. ವಿಶ್ವಸಂಸ್ಥೆಯು ರಷ್ಯಾ ಮತ್ತು ಉತ್ತರ ಕೊರಿಯಾ ನಡುವಿನ ವಹಿವಾಟುಗಳನ್ನು ನಿಷೇಧಿಸಿದೆ.

ಮಾಧ್ಯಮ ಸಂಸ್ಥೆ ಕೆಸಿಎನ್‌ಎ ಪ್ರಕಾರ, ಫೆಬ್ರವರಿ 18 ರಂದು ರಷ್ಯಾದ ಕಾರನ್ನು ಉತ್ತರ ಕೊರಿಯಾದ ಕಿಮ್‌ನ ಸಹಾಯಕನಿಗೆ ಹಸ್ತಾಂತರಿಸಲಾಯಿತು. ಕಿಮ್ ಸಹೋದರಿ ಪುಟಿನ್ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ ಮತ್ತು ಈ ಉಡುಗೊರೆಯು ಇಬ್ಬರು



ನಾಯಕರ ನಡುವಿನ ವೈಯಕ್ತಿಕ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ ಮತ್ತು ಕಿಮ್ ಜಾಂಗ್ ಉನ್ ಪುಟಿನ್ ಅವರಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ, ಪುಟಿನ್ ಅವರನ್ನು ಭೇಟಿ ಮಾಡಲು ಕಿಮ್ ರಷ್ಯಾವನ್ನು ತಲುಪಿದ್ದರು, ಅಲ್ಲಿ ಅವರು ಪುಟಿನ್ ಅವರ ಕಾರಿನಲ್ಲಿ ಕುಳಿತುಕೊಂಡರು.

ಪುಟ 2

# ಮಾರ್ಚ್ ಮೊದಲ ವಾರ ಬಿಬಿಎಂಪಿ ಬಜೆಟ್

**ಬೆಂಗಳೂರು:** ರಾಜ್ಯ ಬಜೆಟ್ ಬೆನ್ನಲ್ಲೇ ಇದೀಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾರ್ಚ್ ಮೊದಲ ವಾರದಲ್ಲಿ ಬಜೆಟ್ ಮಂಡಿಸಲಿದೆ. 6,000 ಕೋಟಿ ತೆರಿಗೆ ಗುರಿಯನ್ನು ಸಾಧಿಸಲು ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುವ ಬಗ್ಗೆ ಬಜೆಟ್ ನಲ್ಲಿ ಗಮನಹರಿಸುವ ಸಾಧ್ಯತೆಯಿದೆ. ಚುನಾಯಿತ ಮಂಡಳಿಯ ಅನುಪಸ್ಥಿತಿಯಲ್ಲಿ ಹಿರಿಯ ಐಎಎಸ್ ಅಧಿಕಾರಿ ಮಂಡಿಸುತ್ತಿರುವ ನಾಲ್ಕನೇ ಬಿಬಿಎಂಪಿ ಬಜೆಟ್ ಇದಾಗಲಿದೆ. ಬಿಬಿಎಂಪಿಯ ಆಡಳಿತ ಮಂಡಳಿ ಅವಧಿಯು 2020 ರ ಸೆಪ್ಟೆಂಬರ್ ನಲ್ಲಿ ಕೊನೆಗೊಂಡಿತ್ತು. ನಂತರ ವಿವಿಧ ಕಾರಣಗಳಿಂದ ಚುನಾವಣೆಯನ್ನು ಮುಂದೂಡುತ್ತಾ ಬರಲಾಗಿದೆ.

ಬ್ರ್ಯಾಂಡ್ ಬೆಂಗಳೂರಿಗೆ ಬಜೆಟ್ ನಲ್ಲಿ ಹೆಚ್ಚಿನ ಒತ್ತು ನೀಡುವ ನಿರೀಕ್ಷೆ ಇದೆ. ಜತೆಗೆ ನಗರದ ಮೂಲಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡುವ ಸಾಧ್ಯತೆಯಿದೆ. 70,000 ಕ್ಕೂ ಹೆಚ್ಚು ಸಲಹೆಗಳನ್ನು ಸ್ವೀಕರಿಸಲಾಗಿದೆ ಮತ್ತು ಅವುಗಳಲ್ಲಿ ಕೆಲವು ಬಜೆಟ್‌ನಲ್ಲಿ ಉಲ್ಲೇಖವಾಗಬಹುದು ಎಂದು



ನಿರೀಕ್ಷಿಸಲಾಗಿದೆ.

ಹೆಬ್ಬಾಳ ಜಂಕ್ಷನ್‌ನಲ್ಲಿ ಪ್ರಾಯೋಗಿಕ ಸುರಂಗ ಮಾರ್ಗವನ್ನು ಸಿಎಂ ಸಿದ್ದರಾಮಯ್ಯ ಬಜೆಟ್ ನಲ್ಲಿ ಘೋಷಣೆ ಮಾಡಿದ್ದು ಬಿಬಿಎಂಪಿ ಅದಕ್ಕೆ ಅನುದಾನ ನೀಡುವ ನಿರೀಕ್ಷೆಯಿದೆ. ನಗರದ ವಿವಿಧ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡಲು 400 ಕೋಟಿ ರೂ.ಗಳನ್ನು ಮೀಸಲಿಡುವ ಸಾಧ್ಯತೆ ಇದೆ.

ಪುಟ 2

## ಸಂಕ್ಷಿಪ್ತ ಸುದ್ದಿ

### ‘ಕಿತ್ತೋದ್ ನನ್ ಮಗ’ ಎಂಬ ಹೇಳಿಕೆ ಸಮರ್ಥಿಸಿಕೊಂಡು ಪೊಲೀಸರಿಗೆ ಜಗ್ಗೇಶ್ ದೂರು



**ಬೆಂಗಳೂರು:** ನಟ ಜಗ್ಗೇಶ್ ಅವರು ಇತ್ತೀಚೆಗೆ ವರ್ತೂರು ಸಂತೋಷ್ ಬಗ್ಗೆ ಆಡಿದ ಮಾತುಗಳು ವಿವಾದಕ್ಕೆ ಕಾರಣ ಆಗಿವೆ. ಹುಲಿ ಉಗುರಿನ ಕೇಸ್ ಗೆ ಸಂಬಂಧಿಸಿದಂತೆ ‘ರಂಗನಾಯಕ’ ಸಿನಿಮಾದ ಸುದ್ದಿಗೋಷ್ಠಿಯಲ್ಲಿ ಮಾತನಾಡುವಾಗ ‘ಕಿತ್ತೋದ್ ನನ್ ಮಗ’ ಎಂಬ ಪದವನ್ನು ಜಗ್ಗೇಶ್ ಬಳಕೆ ಮಾಡಿದ್ದರು. ಅದನ್ನು ಖಂಡಿಸಿ ವರ್ತೂರು ಸಂತೋಷ್ ಅವರ ಅಭಿಮಾನಿಗಳು ಅಸಮಾಧಾನ ವ್ಯಕ್ತಪಡಿಸಿದ್ದರು. ಈಗ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಜಗ್ಗೇಶ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ತಮ್ಮ ಹೇಳಿಕೆಯನ್ನು ತಿರುಚಿ,

ಪುಟ 2

### ಲೋಕಸಭಾದಲ್ಲಿ 400 ಅಲ್ಲ 100 ಸ್ಥಾನಗಳನ್ನೂ ಬಿಜೆಪಿ ಗೆಲ್ಲಲು ಸಾಧ್ಯವಿಲ್ಲ ಖರ್ಗೆ

**ಅಮೇಥಿ:** ಲೋಕಸಭೆ ಚುನಾವಣೆಯಲ್ಲಿ 400 ಅಲ್ಲ 100 ಸ್ಥಾನಗಳನ್ನೂ ಬಿಜೆಪಿ ಗೆಲ್ಲಲು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭವಿಷ್ಯ ನುಡಿದಿದ್ದಾರೆ.



ಅಮೇಥಿಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ 400 ಸೀಟುಗಳ ಕನಸು ಸಾಕಾರಗೊಳ್ಳುವುದಿಲ್ಲ ಎಂದರು. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 100 ಸ್ಥಾನಗಳನ್ನು ಗೆಲ್ಲುವುದಿಲ್ಲ ಮತ್ತು ಅದನ್ನು ಅಧಿಕಾರದಿಂದ ಹೊರಹೋಗುತ್ತದೆ ಎಂದು ಖರ್ಗೆ ಹೇಳಿದರು. ಅಬ್ ಕಿ ಬಾರ್ ಸತ್ತಾ ಸೆ ಬಾಹರ್ ಅಂದರೆ ಈ ಬಾರಿ ಅವರನ್ನು ಅಧಿಕಾರದಿಂದ

ಪುಟ 2

# ರಾಹುಲ್ ಗಾಂಧಿ ಸಲಹೆ ಮೇರೆಗೆ ಕರ್ನಾಟಕದ ತೆರಿಗೆ ಹಣ ದುರುಪಯೋಗ

# ವಿಜಯೇಂದ್ರ ಆಕ್ರೋಶ



**ಬೆಂಗಳೂರು:** ಕಾಡಾನೆ ದಾಳಿಯಿಂದ ಮೃತಪಟ್ಟಿದ್ದ ಕೇರಳ ವ್ಯಕ್ತಿಯ ಕುಟುಂಬಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲಹೆ ಆಧರಿಸಿ ಪರಿಹಾರ ನೀಡಲು ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿವೈ ವಿಜಯೇಂದ್ರ ಆರೋಪಿಸಿದ್ದಾರೆ. ಈ ವಿಚಾರವಾಗಿ ಸೋಮವಾರವೇ ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದ ಅವರು, ಇಂದು (ಮಂಗಳವಾರ) ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ. 15 ಲಕ್ಷ ರೂಪಾಯಿ ಪರಿಹಾರ ನೀಡುವ ಕಾಂಗ್ರೆಸ್ ಸರ್ಕಾರದ ತೀರ್ಮಾನ ಖಂಡನೀಯ ಎಂದು ಅವರು ಹೇಳಿದ್ದಾರೆ.



ಕಾಡಾನೆ ದಾಳಿಯಿಂದ ಕೇರಳದ ವಯನಾಡು ಜಿಲ್ಲೆಯಲ್ಲಿ ವ್ಯಕ್ತಿ ಮೃತಪಟ್ಟಿದ್ದರು. ಮೃತನ ಕುಟುಂಬಕ್ಕೆ ನೆರವಾಗುವಂತೆ ‘ಕೈ’ ನಾಯಕ ರಾಹುಲ್ ಗಾಂಧಿ ಸಲಹೆ ನೀಡಿದ್ದರು. ಅದರ ಮೇರೆಗೆ ಕರ್ನಾಟಕದ ತೆರಿಗೆದಾರರ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಸಂಪೂರ್ಣವಾಗಿ ಅವಮಾನಕರ. ರಾಜ್ಯ ಸರ್ಕಾರ ತನ್ನ ಬೊಕ್ಕಸದಿಂದ ಅಕ್ರಮವಾಗಿ ಹಣ ಮಂಜೂರು ಮಾಡಿದ್ದು ರಾಜ್ಯದ ಜನರಿಗೆ ಮಾಡಿದ ದ್ರೋಹವಲ್ಲವೇ ಎಂದು ವಿಜಯೇಂದ್ರ ಪ್ರಶ್ನಿಸಿದ್ದಾರೆ. ಕರ್ನಾಟಕದಲ್ಲಿ ಬರಗಾಲದಿಂದ ನೂರಾರು ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ, ಸ್ವಲ್ಪವೂ ನಾಚಿಕೆಯಿಲ್ಲದೆ ರಾಜ್ಯದ ತುರ್ತು ಅಗತ್ಯಗಳತ್ತ ಗಮನಹರಿಸುವ ಬದಲು ರಾಹುಲ್ ಗಾಂಧಿಯನ್ನು ಸಂತೋಷಪಡಿಸಲು ಆದ್ಯತೆ ನೀಡುತ್ತಿರುವುದು ಖೇದಕರ.

ಪುಟ 2

# ಮಾರ್ಚ್ 9ರ ಬಳಿಕ ಲೋಕಸಭಾ ಚುನಾವಣೆ ದಿನಾಂಕ ಘೋಷಣೆ

**ನವದೆಹಲಿ:** ಭಾರತೀಯ ಚುನಾವಣಾ ಆಯೋಗವು ಮಾರ್ಚ್ 9ರ ಬಳಿಕ ಲೋಕಸಭಾ ಚುನಾವಣಾ ದಿನಾಂಕವನ್ನು ಘೋಷಿಸುವ ಸಾಧ್ಯತೆ ಇದೆ. ಭಾರತೀಯ ಚುನಾವಣಾ ಆಯೋಗದ (ಇಸಿಐ) ಉನ್ನತ ಅಧಿಕಾರಿಗಳು ಅಂತಿಮ ಪರಿಶೀಲನೆಗಾಗಿ ರಾಜ್ಯಗಳಿಗೆ ತೆರಳುತ್ತಿದ್ದು, ಚುನಾವಣಾ ಸಮಿತಿಯು ಮಾರ್ಚ್ 9 ರ ನಂತರ ಲೋಕಸಭೆ ಚುನಾವಣೆಯ ದಿನಾಂಕವನ್ನು ಘೋಷಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು ನ್ಯೂಸ್ 18 ವರದಿ ಮಾಡಿದೆ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಭಾರತದಲ್ಲಿ 18 ನೇ ಲೋಕಸಭೆಯ ಸದಸ್ಯರನ್ನು ಆಯ್ಕೆ





ಮಾಡಲು ಸಾರ್ವತ್ರಿಕ ಚುನಾವಣೆಗಳು ನಡೆಯುವ ಸಾಧ್ಯತೆ ಇದೆ.

ಲೋಕಸಭೆ ಚುನಾವಣೆ 2024 ಮತ್ತು ಕೆಲವು ರಾಜ್ಯಗಳಲ್ಲಿ ಏಕಕಾಲದಲ್ಲಿ ವಿಧಾನಸಭಾ ಚುನಾವಣೆಯ ಸಿದ್ಧತೆಗಳನ್ನು ಮುಂದುವರೆಸುತ್ತಾ, ಭಾರತೀಯ ಚುನಾವಣಾ ಅಧಿಕಾರಿಗಳ ತಂಡವು ಈ ದಿನಗಳಲ್ಲಿ ರಾಜ್ಯಗಳಿಗೆ ಬ್ಯಾಕ್ ಟು ಬ್ಯಾಕ್ ಭೇಟಿಗಳನ್ನು ಕೈಗೊಳ್ಳುತ್ತಿದೆ. ಮೂಲಗಳ ಪ್ರಕಾರ, ಜಮ್ಮು ಮತ್ತು ಕಾಶ್ಮೀರ ಭದ್ರತಾ ಪರಿಸ್ಥಿತಿ ಮತ್ತು ಪಡೆಗಳ ಲಭ್ಯತೆಯ ಬಗ್ಗೆ ಕೇಳಲು ಅಧಿಕಾರಿಗಳು ಮಾರ್ಚ್ 8-9 ರ ನಡುವೆ ಸರ್ಕಾರಿ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ.

2019 ರಲ್ಲಿ, ಲೋಕಸಭೆ ಚುನಾವಣೆಯನ್ನು ಮಾರ್ಚ್ 10 ರಂದು ಘೋಷಿಸಲಾಯಿತು. ಏಪ್ರಿಲ್ 11 ಮತ್ತು ಮೇ 19 ರ ನಡುವೆ ಏಳು ಹಂತಗಳಲ್ಲಿ ಮತದಾನವನ್ನು ನಡೆಸಲಾಯಿತು ಮತ್ತು ಮತಗಳ ಎಣಿಕೆಯು ಮೇ 23 ರಂದು ನಡೆಯಿತು.

ಪುಟ 2

# ಶಾಲಾ ತರಗತಿಗಳಲ್ಲಿ ಮೊಬೈಲ್ ಫೋನ್ ನಿಷೇಧಿಸಿದ ರಿಶಿ ಸುನಕ್

**ಬ್ರಿಟನ್:** ಪ್ರಸ್ತುತ ಯುಗವು ತಂತ್ರಜ್ಞಾನ ನಾಗಾಲೋಟದಲ್ಲಿದೆ. ದೊಡ್ಡವರು, ಚಿಕ್ಕವರು ಎಂಬ ಭೇದವಿಲ್ಲದೆ ಎಲ್ಲರೂ ಮೊಬೈಲ್ ಫೋನ್ ಮೂಲಕ ತಂತ್ರಜ್ಞಾನದೊಂದಿಗೆ ಸಂಪರ್ಕ ಸಾಧಿಸುತ್ತಿದ್ದಾರೆ. ಆದಾಗ್ಯೂ, ಅವರು ಅನಗತ್ಯವಾಗಿ ಅನಗತ್ಯ ಸ್ಥಳಗಳಲ್ಲಿಯೂ ಸಹ ಗಂಟೆಗಟ್ಟಲೆ ಮೊಬೈಲ್ ಫೋನ್‌ಗಳೊಂದಿಗೆ ಇರುತ್ತಾರೆ. ಕಚೇರಿಗಳು, ದೇವಸ್ಥಾನಗಳು, ಕಾಲೇಜುಗಳು ಮತ್ತು ಶಾಲೆಗಳಲ್ಲಿ ಫೋನ್ ಬಳಸುವುದು ಸಾಮಾನ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಕೂಡ ಫೋನ್‌ಗೆ ದಾಸರಾಗಿದ್ದಾರೆ ಮತ್ತು ಅವರು ತಮ್ಮ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸುವುದಿಲ್ಲ.



ಪುಟ 2

# ಭ್ರಷ್ಟಾಚಾರ ಮುಕ್ತ ಆಡಳಿತ ಅಸಾಧ್ಯ

**ಹಾವೇರಿ:** ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸುವುದು ಅಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಘಾತಕಾರಿ ಹೇಳಿಕೆ ನೀಡಿದ್ದಾರೆ. ಭ್ರಷ್ಟಾಚಾರದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಭ್ರಷ್ಟಾಚಾರ ಇಲ್ಲ ಎಂದು ಯಾರು ಹೇಳಿದರು ಭ್ರಷ್ಟಾಚಾರ ಮುಕ್ತವಾಗುವುದು ಅಸಾಧ್ಯ. ಕಪ್ಪು ಕುರಿಗಳು ಯಾವಾಗಲೂ ಇರುತ್ತವೆ. ಆದರೆ ಭಷ್ಟ್ರಾಚಾರಿಗಳನ್ನು ಗುರುತಿಸಿ ಶಿಕ್ಷಿಸಲಾಗುತ್ತದೆ ಎಂದು ಹೇಳಿದರು.



ದೇಶದ 140 ಕೋಟಿ ಜನರು ಈ ಸಂಪನ್ಮೂಲಗಳಲ್ಲಿ ಪಾಲುದಾರರಾಗಿದ್ದಾರೆ. ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ದಲಿತರು ಮಾತ್ರವಲ್ಲ, ಈ ದೇಶದ ಪ್ರತಿಯೊಬ್ಬ ನಾಗರಿಕರಿಗೂ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹಕ್ಕಿದೆ. ಯಾವುದೇ ಸಮುದಾಯ ಅಥವಾ ಅಲ್ಪಸಂಖ್ಯಾತರು ಮಾತ್ರ ಸಂಪನ್ಮೂಲಗಳ ಮೇಲೆ ಹಕ್ಕುಗಳನ್ನು ಹೊಂದಲು ಸಾಧ್ಯವಿಲ್ಲ ಎಂದರು.

ಪುಟ 2

## ನಿರಂತರ ವಿದ್ಯುತ್ ಉತ್ಪಾದನೆಗೆ ಆರ್‌ಟಿಪಿಎಸ್ ಅಧಿಕಾರಿಗಳಿಂದ

# ಭರ್ಜರಿ ತಯಾರಿ

**ರಾಯಚೂರು:** ಬೇಸಿಗೆ ಆರಂಭಕ್ಕೂ ಮುನ್ನವೇ ರಾಜ್ಯದಲ್ಲಿ ನೀರಿನ ಸಮಸ್ಯೆ ಎದುರಾಗಿದೆ. ಜೊತೆಗೆ ವಿದ್ಯುತ್ ಸಮಸ್ಯೆ ಕೂಡ ಎದುರಾಗಲಿದ್ದು ರಾಯಚೂರು ಶಾಖೋತ್ಪನ್ನ ವಿದ್ಯುತ್ ಘಟಕಗಳಿಂದ ನಿರಂತರ ವಿದ್ಯುತ್ ಉತ್ಪಾದನೆಗೆ ತೊಡಗಿಸಲು ಆರ್‌ಟಿಪಿಎಸ್‌ಅಧಿಕಾರಿಗಳ ತಂಡ ಸಿದ್ಧತೆ ಮಾಡಿಕೊಳ್ಳುತ್ತಿದೆ.



ನಿರೀಕ್ಷಿತ ಮಟ್ಟದಲ್ಲಿ ಜಲವಿದ್ಯುತ್ ಉತ್ಪಾದನೆಯಾಗದ ಕಾರಣ, ರಾಜ್ಯದ ಉಷ್ಣ ವಿದ್ಯುತ್ ಕೇಂದ್ರಗಳ ಮೇಲೆ ಅಪಾರ ಒತ್ತಡವಿದೆ. ಮತ್ತು ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ (ಆರ್‌ಟಿಪಿಎಸ್) ಅಧಿಕಾರಿಗಳು ಈ ಕಾರ್ಯಕ್ಕೆ ಸಜ್ಜಾಗಿದ್ದಾರೆ. ಮಾರ್ಚ್, ಏಪ್ರಿಲ್ ಮತ್ತು ನಂತರದ ಬೇಸಿಗೆಯ ತಿಂಗಳುಗಳಲ್ಲಿ ವಿದ್ಯುತ್ ಬೇಡಿಕೆಯು ತೀವ್ರವಾಗಿ ಹೆಚ್ಚಾಗಲಿದೆ. ಬೇಡಿಕೆಯು ಈಗಾಗಲೇ ದಿನಕ್ಕೆ 300 ಮಿಲಿಯನ್ ಯುನಿಟ್ ಆಗಿದೆ.

ಫೆ.18ರಂದು ತಾಂತ್ರಿಕ ಸಮಸ್ಯೆಯಿಂದಾಗಿ ಆರ್‌ಟಿಪಿಎಸ್‌ನ 210 ಮೆಗಾವ್ಯಾಟ್ 2ನೇ ವಿದ್ಯುತ್ ಘಟಕದ ಉತ್ಪಾದನೆ ಸ್ಥಗಿತಗೊಳಿಸಲಾಗಿತ್ತು. ವಾರ್ಷಿಕ ನಿರ್ವಹಣೆಗಾಗಿ 3ನೇ ವಿದ್ಯುತ್ ಘಟಕದ ಉತ್ಪಾದನೆ ಬಂದ್ ಮಾಡಲಾಗಿದೆ.

ಪುಟ 2

# ನಮ್ಮ ಮೆಟ್ರೋದಲ್ಲಿ ಸೆಲ್ಫಿ ಪಾಯಿಂಟ್ ನಿರ್ಮಾಣ

**ಬೆಂಗಳೂರು:** ನಗರದಲ್ಲಿ ವೇಗ ಮತ್ತು ಸುಗಮ ಸಂಚಾರಕ್ಕೆ ನಮ್ಮ ಮೆಟ್ರೋ ಬಹಳಷ್ಟು ಅನುಕೂಲಕರವಾಗಿದೆ. ಪ್ರಯಾಣಿಕರ ಹಿತದೃಷ್ಟಿಯಿಂದ ಮತ್ತು ಪ್ರಯಾಣಿಕರ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ ಹಲವು ಉಪಕ್ರಮಗಳನ್ನು ಜಾರಿಗೆ ತರತ್ತಲೇ ಇದೆ. ಇದೀಗ ನಮ್ಮ ಮೆಟ್ರೋ ಸೆಲ್ಫಿ ಪ್ರಿಯರಿಗೆ ಗುಡ್ ನ್ಯೂಸ್ ನೀಡಿದೆ. ಅದು ನಮ್ಮ ಮೆಟ್ರೋ ಹಸಿರು ಮಾರ್ಗದ ಬನಶಂಕರಿ ಮತ್ತು ಕೋಣನಕುಂಟೆ ನಿಲ್ದಾಣಗಳಲ್ಲಿ ಸೆಲ್ಫಿ ಪಾಯಿಂಟ್ ಗಳನ್ನು ನಿರ್ಮಿಸಿದೆ. ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಸೆಲ್ಫಿ ಪಾಯಿಂಟ್ ಗಳನ್ನು ನಿರ್ಮಾಣ ಮಾಡಿದೆ.

ಗೋಡೆಯ ಮೇಲೆ ಹಸಿರು ಹೊದಿಕೆಯಂತೆ ಕಾಣುವ ಬೋರ್ಡ್ ರೀತಿಯ ಪರದೆ ಹಾಕಿ, ಅದರ ಸುತ್ತಲೂ ಲೈಟಿಂಗ್ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಪ್ರಯಾಣಿಕರು ಮೊಬೈಲ್‌ನಲ್ಲೇ ಸೆಲ್ಫಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸೆಲ್ಫಿ ಪಾಯಿಂಟ್ ಗಾಗಿ ಹೆಚ್ಚು



ಸ್ಥಳ ಮೀಸಲು ಇಡಲಾಗಿದೆ. ಲೈಟಿಂಗ್ ನಿಂದ ಕಂಗೊಳಿಸುತ್ತಿರುವ ಸೆಲ್ಫಿ ಪಾಯಿಂಟ್ ಅನ್ನು ನೋಡಿ ಪ್ರಯಾಣಿಕರು ಖುಷ್ ಆಗಿದ್ದಾರೆ.

ನಮ್ಮ ಮೆಟ್ರೋ ಸಹ ಡಿಜಿಟಲ್ ಪೇಮೆಂಟ್ ಸೌಲಭ್ಯವನ್ನು ಅಳವಡಿಸಿಕೊಂಡಿದೆ, ಪ್ರಯಾಣಿಕರು ಅದರ ಗರಿಷ್ಠ ಪ್ರಯೋಜನ ಪಡೆಯುತ್ತಿದ್ದಾರೆ. ಈ ಮೂಲಕ ತಾವು ಸಿಲಿಕಾನ್ ಸಿಟಿ ಜನ ಎಂಬುದನ್ನು ಮತ್ತೊಮ್ಮೆ ಪ್ರೂವ್ ಮಾಡಿದ್ದಾರೆ. ಮೆಟ್ರೋದಲ್ಲಿ ಒಂದು ದಿನಕ್ಕೆ ಬರೋಬ್ಬರಿ 6.5 ಲಕ್ಷ ಜನ ಸಂಚರಿಸುತ್ತಿದ್ದಾರೆ.

ಪುಟ 2

# ಜನ ವಿಶ್ವಾಸ ಯಾತ್ರೆಗೆ ತೇಜಸ್ವಿ ಯಾದವ್

**ಬಿಹಾರ:** ಬಿಹಾರ ಉಪಮುಖ್ಯಮಂತ್ರಿ ಮತ್ತು ರಾಷ್ಟ್ರೀಯ ಜನತಾ ದಳದ ನಾಯಕ ತೇಜಸ್ವಿ ಯಾದವ್ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ಬಿಜೆಪಿ ನೇತೃತ್ವದ ಆರ್‌ಜೆಡಿಯೊಂದಿಗಿನ ಸಂಬಂಧವನ್ನು ಮುರಿದುಕೊಂಡ ವಾರಗಳ ನಂತರ ಜನ ವಿಶ್ವಾಸ ಯಾತ್ರೆಯನ್ನು ಪ್ರಾರಂಭಿಸಲು ಸಿದ್ಧರಾಗಿದ್ದಾರೆ. ಯಾತ್ರೆಗೂ ಮುನ್ನ, ತೇಜಸ್ವಿ ಯಾದವ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ವೀಡಿಯೊ ಸಂದೇಶದಲ್ಲಿ ನಿತೀಶ್ ಕುಮಾರ್ ಅವರನ್ನು ತೀವ್ರವಾಗಿ ಟೀಕಿಸಿದರು ಮತ್ತು ರಾಜ್ಯಕ್ಕೆ ರಾಜಕೀಯ ಅಸ್ಥಿರತೆಯನ್ನು ತಂದಿದ್ದಾರೆ ಎಂದು ಆರೋಪಿಸಿದರು.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ದೂರದೃಷ್ಟಿ ಇಲ್ಲ ಮತ್ತು ಅವರ ದೃಷ್ಟಿಕೋನದಲ್ಲಿ



ಹಳೆಯ ಶೈಲಿ ಇದೆ. ರಾಜ್ಯದಲ್ಲಿ ಪ್ರಚಲಿತದಲ್ಲಿರುವ ರಾಜಕೀಯ ಅಸ್ಥಿರತೆ ಪ್ರಜಾಪ್ರಭುತ್ವಕ್ಕೆ ನಾಚಿಕೆಗೇಡಿನ ಸಂಗತಿ ಎಂದು ತೇಜಸ್ವಿ ಅವರು ವಿಶ್ವಾಸಮತ ಪರೀಕ್ಷೆಯ ದಿನದಂದು ಶಾಸಕಾಂಗ ಸಭೆಯಲ್ಲಿ ತಮ್ಮ ಭಾಷಣವನ್ನು ಒತ್ತಿ ಹೇಳಿದರು.

ಲೋಕಸಭೆ ಚುನಾವಣೆಗೆ ಮುನ್ನ ನಿತೀಶ್ ಕುಮಾರ್ ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಲು ಯೋಜಿಸಿದ್ದಾರೆ ಎಂದು ಆರ್‌ಜೆಡಿ ನಾಯಕ ಆರೋಪಿಸಿದ್ದಾರೆ.

ಪುಟ 2

# ಬನ್ನೇರುಘಟ್ಟದಲ್ಲಿ ದೇಶದ ಅತಿದೊಡ್ಡ ಚಿರತೆ ಸಫಾರಿ ಶೀಘ್ರ ಆರಂಭ

**ಬೆಂಗಳೂರು:** ಕರ್ನಾಟಕದ ಮೊದಲ ಮತ್ತು ದೇಶದಲ್ಲೇ ಅತಿದೊಡ್ಡ ಚಿರತೆ ಸಫಾರಿ ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಶೀಘ್ರದಲ್ಲೇ ಆರಂಭವಾಗಲಿದೆ. ಈಗಾಗಲೇ ಅಸ್ತಿತ್ವದಲ್ಲಿರುವ ಸಿಂಹ ಮತ್ತು ಹುಲಿ ಸಫಾರಿ ಮಾದರಿಯಲ್ಲಿ ಚಿರತೆ ಸಫಾರಿಯನ್ನು ಶೀಘ್ರ ಆರಂಭಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಕೆಲವು ದಿನಗಳ ಹಿಂದೆ ಅರಣ್ಯ ಇಲಾಖೆ ಮತ್ತು ಮೃಗಾಲಯ ನಿರ್ವಹಣಾ ಅಧಿಕಾರಿಗಳಿಗೆ ಸೂಚಿಸಿದ್ದರು. ಹೀಗಾಗಿ ಚಿರತೆ ಸಫಾರಿ ಶೀಘ್ರ ಕಾರ್ಯರೂಪಕ್ಕೆ ಬರುವ ಸಾಧ್ಯತೆ ಇದೆ.

ಎಲ್ಲವೂ ಅಂದುಕೊಂಡಂತೆಯೇ ನಡೆದರೆ ಒಂದೂವರೆ ತಿಂಗಳಲ್ಲಿ ಸಫಾರಿಯನ್ನು ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿಸಬಹುದು. ಆದರೆ,





ಲೋಕಸಭೆ ಚುನಾವಣೆಯ ಕಾರಣ ಮಾದರಿ ನೀತಿ ಸಂಹಿತೆ ಜಾರಿಗೆ ಬಂದರೆ ಮೇ ನಂತರವಷ್ಟೇ ಸಫಾರಿಯನ್ನು ಸಾರ್ವಜನಿಕ ಪ್ರವೇಶಕ್ಕೆ ಮುಕ್ತವಾಗಿಸಬಹುದು ಎಂದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೇರೆ ಬೇರೆ ಕಡೆಯಿಂದ ತಂದಿರುವ ಚಿರತೆಗಳು ಇರುವ ಕಾರಣ ಸಹಬಾಳ್ವೆ ಬಗ್ಗೆ ಅವುಗಳಿಗೆ ತರಬೇತಿ ನೀಡುವ ಅಗತ್ಯವಿದೆ. ಅವುಗಳ ನಡುವೆ ಹೊಂದಾಣಿಕೆ ಮೂಡಿಸಬೇಕಿದೆ.

ಪುಟ 2

# ಮತಾಂಧತೆ ಹೆಚ್ಚಾಗುತ್ತೆ, ಧಾರ್ಮಿಕ ಮುಖಂಡನ ಸಾವಾಗುತ್ತೆ

**ಕೋಲಾರ:** ಈವರ್ಷ ಧಾರ್ಮಿಕ ಮುಖಂಡನೊಬ್ಬನ ಸಾವಾಗುತ್ತೆ, ಮತಾಂಧತೆ ಹೆಚ್ಚಾಗುತ್ತದೆ. ಜಾಗತಿಕ ಮಟ್ಟದಲ್ಲಿ ಬಾಂಬ್ ಸ್ಫೋಟ ಸಂಭವಿಸುತ್ತೆ, ಭೂಕಂಪ ಆಗುತ್ತೆ ಎಂದು ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ. ಕೋಲಾರ ತಾಲೂಕಿನ ನರಸಾಪುರದ ಖಾಸಗಿ ಕಾರ್ಯಕ್ರಮದಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ವರ್ಷ ಜಾಗತಿಕ ಮಟ್ಟದಲ್ಲಿ ತೊಂದರೆ ಇದೆ. ಬೆಂಕಿ, ನೀರಿನ ಹಾವಳಿ, ಯುದ್ಧ ಆಗುತ್ತೆ. ಅನೇಕ ಸಾವು ನೋವುಗಳು ಸಂಭವಿಸುತ್ತೆ. ಮತಾದಂತೆ ಹೆಚ್ಚಾಗುತ್ತೆ, ಬಾಂಬ್ ಸ್ಫೋಟ ಸಂಭವಿಸುತ್ತೆ, ಭೂಕಂಪ ಆಗುತ್ತೆ. ಧಾರ್ಮಿಕ ಮುಖಂಡನ ಸಾವು ಸಹ ಆಗಲಿದೆ ಎಂದು ಆತಂಕಪಟ್ಟಿದ್ದಾರೆ.



**ಉತ್ತಮ ಮಳೆ-ಬೆಳೆ ಆಗುತ್ತೆ:** ರಾಜ್ಯ ಹಾಗೂ ರಾಷ್ಟ್ರ ರಾಜಕಾರಣ ಕುರಿತು ಯುಗಾದಿ ಕಳೆದ ನಂತರ ಹೇಳುವೆ. ಒಂದು ತಿಂಗಳು ಕಳೆದ ಮೇಲೆ ಮಳೆ, ಬೆಳೆ, ರಾಜಕೀಯ, ದುಡಿಮೆ, ವ್ಯಾಪಾರ ಎಲ್ಲಾ ಗೊತ್ತಾಗಲಿದೆ. ಯುಗಾದಿ ನಂತರ ರಾಜ್ಯದಲ್ಲಿ ಒಳ್ಳೆಯ ಮಳೆ, ಬೆಳೆ ಆಗುವ ಲಕ್ಷಣಗಳಿವೆ ಎಂದು ತಿಳಿಸಿದ್ದಾರೆ.

**ಗ್ಯಾರಂಟಿಗಳ ಬಗ್ಗೆ ನುಣುಚಿಕೊಂಡ ಶ್ರೀಗಳು:** ಇದೇ ವೇಳೆ ರಾಜ್ಯ ಸರ್ಕಾರ ಗ್ಯಾರಂಟಿಗಳ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ, ನನಗಿಂತ ನಿಮಗೇ ಚೆನ್ನಾಗಿ ಗೊತ್ತು ಎಂದು ನುಣುಚಿಕೊಂಡಿದ್ದಾರೆ. ಯುಗಾದಿಯ ನಂತರ ನೂತನ ಸಂವತ್ಸರದ ಭವಿಷ್ಯ ಬರಲಿದೆ. ನಂತರ ರಾಷ್ಟ್ರ ರಾಜಕಾರಣದ ಬಗ್ಗೆಯೂ ಹೇಳುತ್ತೇನೆ ಎಂದು ಹೇಳಿದ್ದಾರೆ.

# ನಡು ರಸ್ತೆಯಲ್ಲಿ ನೂರಾರು ಕಾಂಡೋಮ್ ಬಾಕ್ಸ್‌ಗಳು ಪತ್ತೆ!

**ಯಾದಗಿರಿ:** ಕೇಂದ್ರ ಸರ್ಕಾರದಿಂದ ಸರ್ಕಾರಿ ಆಸ್ಪತ್ರೆಗಳಿಗೆ ವಿತರಣೆಯಾಗಬೇಕಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ನೂರಾರು ಕಾಂಡೋಮ್ ಬಾಕ್ಸ್‌ಗಳು ಪತ್ತೆಯಾಗಿರುವ ಘಟನೆ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಖಾನಾಪುರ ಸಮೀಪದಲ್ಲಿ ನಡೆದಿದೆ. ನೂರಾರು ನಿರೋಧ್ (ಕಾಂಡೋಮ್) ಬಾಕ್ಸ್‌ಗಳು ಖಾನಾಪುರ ಸಮೀಪದ ಇಬ್ರಾಹಿಂಪುರ ಕ್ರಾಸ್ ಮುಖ್ಯರಸ್ತೆಯಲ್ಲಿ ಪತ್ತೆಯಾಗಿದೆ. ಆರೋಗ್ಯ ಇಲಾಖೆ ಅಧಿಕಾರಿಗಳ ಬೇಕಾಬಿಟ್ಟಿಯಾಗಿ ರಸ್ತೆ ಬದಿ ಇಳಿಸಿ ಹೋದ್ರಾ, ಅನ್ನೋ ಸಂಶಯವೂ ವ್ಯಕ್ತವಾಗಿದೆ. ಬಾಕ್ಸ್‌ಗಳಲ್ಲಿ ತುಂಬಿದ ಕಾಂಡೋಮ್ ಸರ್ಕಾರಿ ಆಸ್ಪತ್ರೆಗೆ ಪೂರೈಕೆ ಆಗಬೇಕಿತ್ತು. 2026ರ ವರೆಗೆ ಅವಧಿ ಇರೋದು ಬಾಕ್ಸ್ ಮೇಲೆ ನಮೂದಾಗಿದೆ. ಆದ್ರೆ ಏಕಾಏಕಿ ಇಷ್ಟೊಂದು ಬಾಕ್ಸ್‌ಗಳನ್ನ ರಸ್ತೆ ಮಧ್ಯೆ ಇಳಿಸಿ ಹೋಗಿದ್ದು ಯಾರು ಅನ್ನೋದು ಪತ್ತೆಯಾಗಿಲ್ಲ.

ಇಷ್ಟೊಂದು ಬಾಕ್ಸ್‌ಗಳು ಎಲ್ಲಿಂದ ತಂದಿದ್ದು ಯಾವ ಆಸ್ಪತ್ರೆಗಳಿಗೆ ವಿತರಣೆಯಾಗಬೇಕು ಅನ್ನೋದರ ಬಗ್ಗೆ ಇನ್ನಷ್ಟೇ ತನಿಖೆಯಾಗಬೇಕಿದೆ.

# ರಾಜ್ಯದಲ್ಲಿ 2,300 ಕೋಟಿ ರೂ. ಹೂಡಿಕೆಗೆ ಟಾಟಾ ಸಮೂಹ ಗ್ರೀನ್ ಸಿಗ್ನಲ್

**ಬೆಂಗಳೂರು:** ಟಾಟಾ ಸಮೂಹದ ಭಾಗವಾಗಿರುವ ಏರ್ ಇಂಡಿಯಾ ಮತ್ತು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ ರಾಜ್ಯದಲ್ಲಿ ವಿವಿಧ ಯೋಜನೆಗಳಿಗೆ 2,300 ಕೋಟಿ ರೂ. ಹೂಡಿಕೆ ಮಾಡಲು ಮುಂದಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ರಾಜ್ಯ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ನೇತೃತ್ವದಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ಏರ್ ಇಂಡಿಯಾದ ಮುಖ್ಯ ವಾಣಿಜ್ಯ ವ್ಯವಹಾರ ಅಧಿಕಾರಿ ನಿಪುಣ್ ಅಗರವಾಲ್ ಹಾಗೂ ಟಿಎಎಸ್‌ಎಲ್ ಸಿಇಒ ಸುಕರಣ್ ಸಿಂಗ್ ಒಡಂಬಡಿಕೆ ಪತ್ರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಈ ಮಾಹಿತಿಯನ್ನು ಸಿಎಂ ತಮ್ಮ ಸೋಶಿಯಲ್ ಮೀಡಿಯಾ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

25,000ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿ: ಟಾಟಾ ಸಮೂಹದ ಈ ಹೂಡಿಕೆಯಿಂದ ನೇರವಾಗಿ 1,650 ಉದ್ಯೋಗಗಳು ಸೃಷ್ಟಿಯಾಗಲಿವೆ. ಒಟ್ಟು ಹೂಡಿಕೆಯ ಪೈಕಿ ಏರ್ ಇಂಡಿಯಾ ಕಂಪನಿಯು ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ವಿಮಾನಗಳ ನಿರ್ವಹಣೆ, ದುರಸ್ತಿ ಮತ್ತು ಓವರ್-ಹಾಲ್ (ಎಂಆರ್ ಒ) ಘಟಕವನ್ನು ಸ್ಥಾಪಿಸಲು 1,300 ಕೋಟಿ ರೂ. ಹೂಡಿಕೆ ಮಾಡುತ್ತಿದೆ. ಇದರಿಂದಾಗಿ 1,200 ಜನರಿಗೆ ನೇರವಾಗಿ ಉದ್ಯೋಗ ಸಿಗಲಿದ್ದು, ಪರೋಕ್ಷವಾಗಿ 25 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ. ಇಡೀ ಭಾರತದಲ್ಲೇ ಇದು ಮೊಟ್ಟಮೊದಲ ಯೋಜನೆಯಾಗಿದೆ.



310 ಕೋಟಿ ರೂ.ವೆಚ್ಚದಲ್ಲಿ ಗನ್ ತಯಾರಿಕೆ ಘಟಕ ಸ್ಥಾಪನೆ: ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್‌ಎಲ್) ಕಂಪನಿಯು ಮೂರು ಯೋಜನೆಗಳಿಗೆ 1,030 ಕೋಟಿ ರೂ. ಬಂಡವಾಳ ಹೂಡಲಿದೆ. ಇವುಗಳ ಪೈಕಿ 420 ಕೋಟಿ ರೂ. ಗಳು ನಾಗರಿಕ ವಿಮಾನಗಳನ್ನು ಸರಕು ಸಾಗಣೆ ವಿಮಾನಗಳನ್ನಾಗಿ (ಫ್ರೈಟರ್) ಪರಿವರ್ತಿಸುವ ಘಟಕ ಸ್ಥಾಪನೆಗೆ ವಿನಿಯೋಗಿಸಲಿದೆ. ಜೊತೆಗೆ 310 ಕೋಟಿ ರೂ. ಹೂಡಿಕೆಯೊಂದಿಗೆ ಗನ್ ತಯಾರಿಕೆ ಘಟಕ ಮತ್ತು 300 ಕೋಟಿ ರೂ. ವೆಚ್ಚದಲ್ಲಿ ವಿಮಾನಯಾನ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಿದೆ. ಇದರಿಂದ 450 ಉದ್ಯೋಗಗಳು ಸೃಷ್ಟಿಯಾಗಲಿವೆ.

ಬೆಂಗಳೂರು ವಿಮಾನ ನಿಲ್ದಾಣದ ಸಮೀಪ ಮತ್ತು ಕೋಲಾರದಲ್ಲಿ ಖಿಂಖಖ ಸ್ಥಾಪಿಸಲಿರುವ ಗನ್ ತಯಾರಿಕೆ ಘಟಕದ ಮೂಲಕ ಕಂಪನಿಗೆ ಅಗತ್ಯವಿರುವ 13 ಸಾವಿರ ಬಿಡಿಭಾಗಗಳ ಪೈಕಿ ಶೇ.50ರಷ್ಟನ್ನು ಪೂರೈಸಿಕೊಳ್ಳುವ ಆಲೋಚನೆ ಹೊಂದಿದೆ. ಇದರಿಂದಾಗಿ 300ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ 2-3 ಸಾವಿರ ಜನರಿಗೆ ಉದ್ಯೋಗಗಳು ಸಿಗಲಿವೆ. 1939ರಷ್ಟು ಹಿಂದೆಯೇ ಬೆಂಗಳೂರಿನಲ್ಲಿ ಎಚ್‌ಎಎಲ್ ಸ್ಥಾಪನೆಯಾಗುವುದರೊಂದಿಗೆ ರಾಜ್ಯವು ವೈಮಾನಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ.

ರಕ್ಷಣಾ ಇಲಾಖೆಗೆ ಬೇಕಾಗುವ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಪೈಕಿ ಶೇ.67ರಷ್ಟು ಕರ್ನಾಟಕದಲ್ಲೇ ತಯಾರಾಗುತ್ತಿದೆ. ಜೊತೆಗೆ ದೇಶದ ರಕ್ಷಣಾ ವಲಯದ ರಫ್ತು ವಹಿವಾಟಿಗೆ ರಾಜ್ಯವು ಶೇ.65ರಷ್ಟು ಕೊಡುಗೆ ನೀಡುತ್ತಿದೆ. ದೇಶದಲ್ಲಿ ಈ ವಲಯದಲ್ಲಿರುವ ಕಂಪನಿಗಳ ಪೈಕಿ ಶೇ.70ರಷ್ಟು ಕಂಪನಿಗಳು ಕರ್ನಾಟಕದಲ್ಲೇ ನೆಲೆ ಹೊಂದಿವೆ ಎಂದು ಸಿಎಂ ಶ್ಲಾಘಿಸಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ ಅತೀಕ್, ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ವಿವಿಧ ಕಂಪನಿಗಳ ಪ್ರತಿನಿಧಿಗಳು ಹಾಜರಿದ್ದರು.

# ರಾಮನಗರ ಎಸ್ಪಿಯನ್ನ ಸಸ್ಪೆಂಡ್ ಮಾಡಿ

**ರಾಮನಗರ:** ರಾಮನಗರದಲ್ಲಿ ಪೊಲೀಸರು-ವಕೀಲರ ನಡುವಿನ ಸಂಘರ್ಷ ಮುಂದುವರಿದಿದೆ. 40 ವಕೀಲರ ಮೇಲೆ ಎಫ್‌ಐಆರ್ ಖಂಡಿಸಿ ಕಳೆದೊಂದು ವಾರದಿಂದ ವಕೀಲ ಸಂಘ ಮಾಡ್ತಿರುವ ಪ್ರತಿಭಟನೆ ತೀವ್ರ ಸ್ವರೂಪ ಪಡೆದಿದೆ. ರಾಮನಗರದಲ್ಲಿ ನಡೆಯುತ್ತಿರುವ ವಕೀಲರ ಪ್ರತಿಭಟನಾ ಸ್ಥಳಕ್ಕೆ ಮಾಜಿ ಸಿಎಂ ಹೆಚ್.ಡಿ ಕುಮಾರಸ್ವಾಮಿ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಸೇರಿದಂತೆ ಪ್ರಮುಖ ನಾಯಕರು ಭೇಟಿ ನೀಡಿದ್ದಾರೆ. ಈ ವೇಳೆ ವಕೀಲರ ಸಮಸ್ಯೆ ಆಲಿಸಿದ ಹೆಚ್‌ಡಿಕೆ ಈ ವಿಚಾರದಲ್ಲಿ ಕೇವಲ ಪಿಎಸ್‌ಐ ಮಾತ್ರವಲ್ಲ, ಎಸ್ಪಿಯನ್ನೇ ಸಸ್ಪೆಂಡ್ ಮಾಡಬೇಕು ಅಂತ ಒತ್ತಾಯಿಸಿದ್ದಾರೆ.



ಯಾರೋ ರಫೀಕ್ ಎಂಬಾತ ವಕೀಲರ ಮೇಲೆ ದೂರು ನೀಡಿದ್ದಾನೆ. ಯಾರೋ ಪ್ರಗತಿಪರರು ವಕೀಲರ ಸಂಘದಲ್ಲಿ ಹೋಗಿ ಗಲಾಟೆ ಆಗಿದೆ ಅಂದರು. ಎಷ್ಟು ಜನ ಪ್ರಗತಿಪರರಿಗೆ ಗಾಯ ಆಗಿದೆ? ಎಷ್ಟು ಜನ ಆಸ್ಪತ್ರೆಗೆ ಸೇರಿದ್ದಾರೆ? ಇಲ್ಲಿ ಸ್ಥಳೀಯ ಶಾಸಕ, ಜಿಲ್ಲಾ ಮಂತ್ರಿ ಆಡಳಿತ ಮಾಡ್ತಿದ್ದೀರಾ ಅಥವಾ ಪ್ರಗತಿಪರರು ಆಡಳಿತ ಮಾಡ್ತಿದ್ದೀರಾ.? ನ್ಯಾಯಾಲಯದ ಬಗ್ಗೆ ಫೇಸ್ ಬುಕ್ ನಲ್ಲಿ ಬರೆದಿದ್ದಿದ್ದು ಒಬ್ಬ ಮುಸ್ಲಿಂ, ದೂರು ಕೊಟ್ಟಿದ್ದು ಮುಸ್ಲಿಂ, ಸ್ಥಳೀಯ ಶಾಸಕ ಮುಸ್ಲಿಂ, ಇಲ್ಲಿನ ಪಿಎಸ್‌ಐ ಸಹ ಮುಸ್ಲಿಂ, ಅಲ್ಲಿ ಏನು ನಡೆಯುತ್ತಿದೆ ಅಂತ ಗೊತ್ತಾಗ್ತಿದೆ. ವಕೀಲರ ಆವರಣಕ್ಕೆ ಹೋಗಲು ಇವರಿಗೆ ಅನುಮತಿ ಕೊಟ್ಟಿದ್ದು ಯಾರು? ವಕೀಲ ಸಂಘಕ್ಕೆ ಮನವಿ ಕೊಡಲು ಡಿಸ್ಟ್ರಿಕ್ಟ್ ಜಡ್ಜ್ ಅನುಮತಿ ಕೊಡಬೇಕು, ಕೊಟ್ಟಿದ್ದಾರಾ? ಎಂದು ಪ್ರಶ್ನೆಗಳ ಸುರಿಮಳೆ ಸುರಿಸಿದ್ದಾರೆ. ಚಾನ್ ಪಾಷಾ ಎಂಬ ವ್ಯಕ್ತಿ ನ್ಯಾಯಾಂಗ ನಿಂದನೆ ಪೋಸ್ಟ್ ಹಾಕಿದ್ದ. ಆತನ ಮೇಲೆ ಯಾವ ಸೆಕ್ಷನ್ ಹಾಕಿದ್ರಿ? ಆತನ ಪರವಾಗಿ ವಕೀಲರ ಸಂಘಕ್ಕೆ ರಫೀಕ್ ಹಾಗೂ ಪ್ರಗತಿಪರರು ಹೋಗಿದ್ದಾರೆ. ಇದರಲ್ಲಿ ಸ್ಥಳೀಯ ಶಾಸಕನ ಕೈವಾಡ ಏನು ಎಂಬುದು ನನಗೆ ಗೊತ್ತು? ಬೆಂಗಳೂರಿನಿಂದ ಯಾವನು ಡೈರೆಕ್ಷನ್ ಕೊಟ್ಟ ಅಂತ ಗೊತ್ತು. ಈ ಘಟನೆಯನ್ನ ಮುಚ್ಚಿಹಾಕಿಸುವ ಹುನ್ನಾರ ನಡೆಯುತ್ತಿದೆ ಎಂದು ಕಿಡಿಕಾರಿದ್ದಾರೆ.

# ಕೇರಳದಲ್ಲಿ ಆನೆ ತುಳಿತಕ್ಕೆ ವ್ಯಕ್ತಿ ಬಲಿ ಕರ್ನಾಟಕ ಸರ್ಕಾರದಿಂದ ಪರಿಹಾರ

**ಬೀದರ್:** ಕೇರಳದಲ್ಲಿ ಆನೆ ತುಳಿತದಿಂದಾಗಿ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ. ಕೇರಳದ ವ್ಯಕ್ತಿ ಮೃತಪಟ್ಟಿರುವುದಕ್ಕೆ ಕರ್ನಾಟಕ ಸರ್ಕಾರದಿಂದ ಪರಿಹಾರ ಘೋಷಿಸಲಾಗಿದೆ. ಈ ವಿಚಾರ ಚರ್ಚೆಗೆ ಗ್ರಾಸವಾಗಿದ್ದು, ಅರಣ್ಯ ಸಚಿವ ಈಶ್ವರ್ ಖಂಡ್ರೆ ಸ್ಪಷ್ಟನೆ ನೀಡಿದ್ದಾರೆ.

ನಾವು ಸಾವಿನ ಮೇಲೆ ರಾಜಕೀಯ ಮಾಡೋರಲ್ಲ. ಕೇರಳದಲ್ಲಿ ಒಂದು ಸಾವಾಗಿದೆ. ಹೀಗಾಗಿ ಪರಿಹಾರ ಕೊಡಲು ತೀರ್ಮಾನ ಮಾಡಿದ್ದೇವೆ ಎಂದು ಕೇರಳದ ವೈನಾಡಿನಲ್ಲಿ ಆನೆ ತುಳಿತಕ್ಕೆ ಬಲಿಯಾದ ವ್ಯಕ್ತಿಗೆ ರಾಜ್ಯ ಸರ್ಕಾರದಿಂದ ಪರಿಹಾರ ಕೊಡುವ ವಿಚಾರವನ್ನು ಖಂಡ್ರೆ ಸಮರ್ಥಿಸಿಕೊಂಡಿದ್ದಾರೆ.

ಬೀದರ್‌ನಲ್ಲಿ ಪ್ರತಿಕ್ರಿಯೆ ನೀಡಿದ ಅರಣ್ಯ ಈಶ್ವರ್ ಖಂಡ್ರೆ, ಪ್ರಾಣಿ ಸಂಘರ್ಷ ಬಹಳಷ್ಟು ದಿನಗಳಿಂದ ಇದ್ದು, ಆನೆ ತುಳಿತದಿಂದ ಹಾಗೂ ಕಾಡು ಪ್ರಾಣಿಗಳು ಅರಣ್ಯದಿಂದ ಹೊರಗಡೆ ಬಂದು ವ್ಯಕ್ತಿಗಳು ಸಾವನ್ನಪ್ಪಿದ್ದು ನೋಡಿದ್ದೇವೆ ಎಂದು ತಿಳಿಸಿದ್ದಾರೆ.



ನಮ್ಮ ಆನೆಗೆ ನಾವು ರೇಡಿಯೋ ಕಾಲರ್ ಹಾಕಿದ್ದೆವು. ಆ ಆನೆ ಬಂಡೀಪುರದಿಂದ ಕೇರಳದ ವೈನಾಡಿಗೆ ಹೋಗಿತ್ತು. ಅಲ್ಲಿ ಆನೆ ತುಳಿತಕ್ಕೆ ಅಜೀಶ್ ಎಂಬ ವ್ಯಕ್ತಿಯ ಸಾವಾಗಿದೆ. ನಮ್ಮ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲಹೆ ಮೇರೆಗೆ ಸಿಎಂ ಸಿದ್ದರಾಮಯ್ಯನವರ ಅನುಮೋದನೆ ಪಡೆದು ಕೇರಳದ ವ್ಯಕ್ತಿಗೆ ಪರಿಹಾರ ನೀಡಲು ತೀರ್ಮಾನಿಸಿದ್ದೇವೆ ಎಂದು ಹೇಳಿದ್ದಾರೆ.

ಪರಿಹಾರ ಘೋಷಣೆ ಮಾಡಿದ್ದೇವೆ. ಶೀಘ್ರವೇ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಕೊಡುತ್ತೇವೆ ಎಂದು ತಿಳಿಸಿದ್ದಾರೆ.

# ವಸತಿ ಶಾಲೆಯಲ್ಲಿ ಘೋಷವಾಕ್ಯ ಬದಲು ಅಧಿಕಾರಿಯ ವಿರುದ್ಧ ಕ್ರಮಕ್ಕೆ ಆಗ್ರಹ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲಾ ಅಧಿಕಾರ ಅಧಿಕಾರಿಗಳ ಕೈಯಲ್ಲೇ ಇದ್ದು, ಸಚಿವರು ಮನೆಯಲ್ಲಿ ಮಜಾ ಮಾಡುತ್ತಿದ್ದಾರೆ. ವಸತಿ ಶಾಲೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ವಾಣಿಯನ್ನು ಬದಲಿಸಿದ ಅಧಿಕಾರಿಯ ವಿರುದ್ಧ ಕೂಡಲೇ ಕ್ರಮ ವಹಿಸಬೇಕು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯಿಸಿದರು.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಅಧಿಕಾರಿಗಳು ಹುಚ್ಚುಚ್ಚಾಗಿ ಮನಸ್ಸಿಗೆ ಬಂದಂತೆ ಕೆಲಸ ಮಾಡುತ್ತಿದ್ದಾರೆ. ವಿಧಾನಸೌಧದ ಮುಂಭಾಗ 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಘೋಷವಾಕ್ಯವಿದೆ. ಯಾರೋ ಕಾರ್ಯದರ್ಶಿಗಳು ಬಂದು ಅದನ್ನು ತೆಗೆದುಹಾಕಿ ಎಂದರೆ ಹೇಗಿರುತ್ತದೆ? ಶಾಲೆಯಲ್ಲಿ ಕೈ ಮುಗಿದು ಒಳಗೆ ಬನ್ನಿ ಎಂದರೆ ತಪ್ಪೇನು? ಬೇರೆ ದೇಶದ ಅಧ್ಯಕ್ಷರು ನಮ್ಮ ದೇಶಕ್ಕೆ ಬಂದರೆ ಕೈ ಮುಗಿಯುತ್ತಾರೆ. ಇದೇ ನಮ್ಮ ಸಂಸ್ಕೃತಿ ಎಂದರು. ಈ ಕಾಂಗ್ರೆಸ್ ಸರ್ಕಾರಕ್ಕೆ ಕೇಡುಗಾಲ ಬಂದಿದೆ. ಯಾವುದೇ ಆದೇಶವೇ ಇಲ್ಲದೆ ಈ ಘೋಷವಾಕ್ಯವನ್ನು ಬದಲಿಸಿದ್ದಾರೆ. ಇಲ್ಲಿ ಸರ್ಕಾರ ಸತ್ತಿದೆಯೇ ಬದುಕಿದೆಯೇ ಎಂದು ಗೊತ್ತಿಲ್ಲ. ಕಳೆದ ಬಾರಿ ಇದ್ದ ಸಿದ್ದರಾಮಯ್ಯ ಈಗ ಇಲ್ಲ. ಅವರಿಗೆ ಸರ್ಕಾರದ ಮೇಲೆ ಯಾವುದೇ ಹಿಡಿತವೂ ಇಲ್ಲ. ಅವರು ಆಯವ್ಯಯವನ್ನು ಮಂಡಿಸಿದಾಗಲೇ ಅವರು ಮಂಡಿಸಿದ್ದಲ್ಲ ಎಂದು ಗೊತ್ತಾಯಿತು ಎಂದು ಕಿಡಿಕಾರಿದರು. ಅಧಿಕಾರಿಗಳು ಸಚಿವರು, ಮುಖ್ಯಮಂತ್ರಿಗಳನ್ನು ಕೇಳದೆ ಬೇಕಾಬಿಟ್ಟಿಯಾಗಿ ಆದೇಶ ಮಾಡುತ್ತಿದ್ದಾರೆ ಎಂದರೆ, ಇಲ್ಲಿ ಯಾರಿಗೂ ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ಮಕ್ಕಳಿಗೆ ಪಾಠ ಅರ್ಥವಾಗಿಲ್ಲ ಎಂದರೆ ಶಿಕ್ಷಕರ ಬಳಿ ಪ್ರಶ್ನೆ ಮಾಡಬೇಕು. ಆದರೆ ಮಕ್ಕಳು ಧೈರ್ಯದಿಂದ ಯಾರಿಗೆ ಪ್ರಶ್ನೆ ಮಾಡಬೇಕು? ಇಲ್ಲಿ ಹಿಂದೂ, ಕ್ರೈಸ್ತ, ಮುಸಲ್ಮಾನ ಎಂದು ಎಲ್ಲೂ ಬಳಸಿಲ್ಲ. ಈ ಸರ್ಕಾರ ದಿಕ್ಕು ದೆಸೆ ಇಲ್ಲದೆ ಎಡಬಿಡಂಗಿಯಾಗಿದ್ದು, ಅಧಿಕಾರಿಗಳ ಕೈಗೆ ಅಧಿಕಾರ ನೀಡಿ ಎಲ್ಲರೂ ಮೋಜು ಮಸ್ತಿಯಲ್ಲಿ ಕಾಲ ಕಳೆಯುತ್ತಿದ್ದಾರೆ. ಈ ಒಂದು ಉದಾಹರಣೆಯಲ್ಲೇ ಸರ್ಕಾರಿ ಇಲಾಖೆಗಳು ಹೇಗೆ ಕೆಲಸ ಮಾಡುತ್ತಿದೆ ಎಂದು ತಿಳಿಯುತ್ತದೆ ಎಂದು ದೂರಿದರು.

## ರಷ್ಯಾ ಅಧ್ಯಕ್ಷ

ಈ ವೇಳೆ ಪುಟಿನ್ ಅವರ ಕಾರು 'ಔರಸ್ ಲಿಮೋಸಿನ್' ಬಗ್ಗೆ ಕಿಮ್ ಆಸಕ್ತಿ ತೋರಿದ್ದು, ಇದೀಗ ಪುಟಿನ್ ಅವರದ್ದೇ ಕಾರನ್ನು ಉಡುಗೊರೆಯಾಗಿ ನೀಡಿದ್ದಾರೆ. ಕಾರಿನ ಬೆಲೆ ಎಷ್ಟು ಮಾಧ್ಯಮ ವರದಿಗಳ ಪ್ರಕಾರ, ಪುಟಿನ್ ಅವರು ಆರಿಸ್ ಮೋಟಾರ್ ಕಂಪನಿಯ ಕಾರನ್ನು ಕಿಮ್‌ಗೆ ನೀಡಿದ್ದಾರೆ. ಆರಿಸ್ ಕಂಪನಿಯ ಕಾರುಗಳ ಆರಂಭಿಕ ಬೆಲೆ ಸುಮಾರು 4 ಕೋಟಿ ರೂ. ಗಳಿಂದ ಪ್ರಾರಂಭವಾಗುತ್ತದೆ, ಇದು ರೋಲ್ಸ್ ರಾಯ್ಸ್ ಬೆಲೆಗೆ ಸಮನಾಗಿರುತ್ತದೆ.

ಕಿಮ್‌ಗೆ ಕಾರುಗಳೆಂದರೆ ಒಲವು ರಷ್ಯಾದಿಂದ ಉತ್ತರ ಕೊರಿಯಾಕ್ಕೆ ಯಾವ ಮಾದರಿ ಕಾರನ್ನು ಕಳುಹಿಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿಲ್ಲ. ಕಿಮ್‌ಗೆ ಆಟೋಮೊಬೈಲ್ ಗಳೆಂದರೆ ತುಂಬಾ ಇಷ್ಟ ಎಂದು ನಂಬಲಾಗಿದೆ ಮತ್ತು ಅವರ ಬಳಿ ಅನೇಕ ವಿದೇಶಿ ಐಷಾರಾಮಿ ಕಾರುಗಳಿವೆ.

ಕೊರಿಯಾ ಉಕ್ರೇನ್ ಯುದ್ಧಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತದೆ ಉಭಯ ದೇಶಗಳ ನಡುವೆ ಆಮದು-ರಫ್ತು ವೇಗವಾಗಿ ಹೆಚ್ಚಿದೆ. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಬಳಸಿದ ಫಿರಂಗಿ, ರಾಕೆಟ್ ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಉತ್ತರ ಕೊರಿಯಾ ಪೂರೈಸುತ್ತದೆ ಎಂದು ನಂಬಲಾಗಿದೆ. ಆದಾಗ್ಯೂ, ಉತ್ತರ ಕೊರಿಯಾ ರಷ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿರುವುದನ್ನು ನಿರಾಕರಿಸಿದೆ.

## ಬಿಬಿಎಂಪಿ ಬಜೆಟ್

ರಸ್ತೆ ಅಭಿವೃದ್ಧಿಯ ಹೊರತಾಗಿ ಪ್ರವಾಹ ತಡೆಗೆ ಕೈಗೊಂಡಿರುವ ಕ್ರಮಗಳನ್ನು ಬಜೆಟ್‌ನಲ್ಲಿ ಪ್ರಮುಖವಾಗಿ ಪ್ರಸ್ತಾಪಿಸುವ ಸಾಧ್ಯತೆ ಇದೆ.

**ಆಸ್ತಿಗಳ ಡಿಜಿಟಲೀಕರಣ:** ರಾಜ್ಯ ಸರ್ಕಾರವು 2024-25ರಲ್ಲಿ 6000 ಕೋಟಿ ರೂ. ಹೆಚ್ಚಿನ ತೆರಿಗೆಯನ್ನು ಸಂಗ್ರಹಿಸಲು ಪ್ರಸ್ತಾಪಿಸಿದ ಕ್ರಮಗಳಲ್ಲಿ ಒಂದಾದ ಆಸ್ತಿಗಳ ಡಿಜಿಟಲೀಕರಣವನ್ನು ಬಿಬಿಎಂಪಿ ಬಜೆಟ್ ನಲ್ಲಿ ಘೋಷಣೆ ಮಾಡುವ ಸಾಧ್ಯತೆ ಇದೆ. ಈ ಮೂಲಕ ಬಿಬಿಎಂಪಿಯು ಸುಸ್ತಿದಾರರಿಂದ ಆಸ್ತಿ ತೆರಿಗೆಯನ್ನು ಸಂಗ್ರಹಿಸಲು ಮುಂದಾಗಬಹುದು.

ಈ ವಿತ್ತೀಯ ವರ್ಷದಲ್ಲಿ ಬಿಬಿಎಂಪಿ ಆದಾಯ 4,790 ಕೋಟಿ ರೂ.ಗಳಾಗಿದ್ದು, ಹಿಂದಿನ ವರ್ಷಕ್ಕಿಂತ 1,000 ಕೋಟಿ ರೂ. ಹೆಚ್ಚಾಗಿದೆ. ಪರಿಷ್ಕೃತ ಜಾಹೀರಾತು ನೀತಿಯ ಮೂಲಕ ಹೆಚ್ಚುವರಿಯಾಗಿ 2,000 ಕೋಟಿ ರೂ. ತೆರಿಗೆಯೇತರ ಆದಾಯವನ್ನು ಕ್ರೋಢೀಕರಿಸಲು ರಾಜ್ಯ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಕಳೆದ ಶುಕ್ರವಾರವಷ್ಟೇ ಸಿಎಂ ಸಿದ್ದರಾಮಯ್ಯ ಕರ್ನಾಟಕ ಬಜೆಟ್ ಮಂಡನೆ ಮಾಡಿದ್ದು, ಬೆಂಗಳೂರಿಗೆ ಹೆಚ್ಚಿನ ಅನುದಾನ ಘೋಷಣೆ ಮಾಡಿದ್ದರು. ಇದೀಗ ಬಿಬಿಎಂಪಿ ಕೂಡ ಮೂಲಸೌಕರ್ಯ ಯೋಜನೆಗಳನ್ನು ಘೋಷಿಸುವ, ಅವುಗಳಿಗೆ ಹೆಚ್ಚಿನ ಅನುದಾನ ಘೋಷಣೆ ಮಾಡುವ ನಿರೀಕ್ಷೆ ಇದೆ.

## ವಿಜಯೇಂದ್ರ ಆಕ್ರೋಶ

ಕಾಂಗ್ರೆಸ್ ಹೈಕಮಾಂಡ್ ಮೆಚ್ಚಿಸಲು ಕರ್ನಾಟಕದ ತೆರಿಗೆದಾರರ ಹಣವನ್ನು ಅನೈತಿಕವಾಗಿ ಬಳಸಿಕೊಳ್ತಿರೋದಕ್ಕೆ ಸಿಎಂ ಹಾಗೂ ಸಚಿವರು ಹೊಣೆ ಹೊರಬೇಕು ಎಂದು ಅವರು ಆಗ್ರಹಿಸಿದ್ದಾರೆ.

15 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದ್ದೇವೆಂದು ಅರಣ್ಯ ಸಚಿವರು ಪತ್ರ ಬರೆದಿದ್ದಾರೆ. ರಾಹುಲ್ ಗಾಂಧಿ ಸೂಚನೆ ಬೆನ್ನಲ್ಲೇ ಅರಣ್ಯ ಸಚಿವರು ಪತ್ರ ಬರೆದಿದ್ದಾರೆ. ಮುಖ್ಯಮಂತ್ರಿಗಳ ಸೂಚನೆ ಹಿನ್ನೆಲೆ ಪರಿಹಾರ ನೀಡಲಾಗಿದೆ ಎಂದಿದ್ದಾರೆ. ಮಾನವೀಯ ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಪರಿಹಾರ ನೀಡಲಿ ಎಂದು ವಿಜಯೇಂದ್ರ ಹೇಳಿದ್ದಾರೆ.

ಭಾರತ್ ಜೋಡೋ ಯಾತ್ರೆಯಿಂದಲೇ ವಯನಾಡ್ ಗೆ ಭೇಟಿ ನೀಡಿದ್ದ ರಾಹುಲ್

ವಯನಾಡಿನಲ್ಲಿ ಇತ್ತೀಚೆಗೆ ಆನೆ ದಾಳಿಗೆ ಬಲಿಯಾದ ಇಬ್ಬರು ಸಂತ್ರಸ್ತರ ಮನೆಗಳಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಭೇಟಿ ನೀಡಿದ್ದರು. ಮೃತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ್ದರು. ಮಾನವ-ಪ್ರಾಣಿ ಸಂಘರ್ಷಕ್ಕೆ ಪರಿಹಾರ ಕೋರಿ ಸ್ಥಳೀಯರು ವ್ಯಾಪಕ ಪ್ರತಿಭಟನೆ ನಡೆಸಿದ ಬೆನ್ನಲ್ಲೇ ವಯನಾಡ್ ಸಂಸದರು ತಮ್ಮ ಭಾರತ್ ಜೋಡೋ ನ್ಯಾಯ್ ಯಾತ್ರೆಯನ್ನು ವಾರಣಾಸಿಯಲ್ಲಿ ಸ್ಥಗಿತಗೊಳಿಸಿ ಕ್ಷೇತ್ರಕ್ಕೆ ಧಾವಿಸಿದ್ದರು. ಸೂಕ್ಷ್ಮದ ವಿಚಾರವೆಂದರೆ, ವಯನಾಡಿನಲ್ಲಿ ಆನೆ ದಾಳಿಗೆ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಕೇರಳ ಸರ್ಕಾರ ಪರಿಹಾರ ಘೋಷಿಸಿದೆಯೇ ಎಂಬುದು ಇನ್ನೂ ತಿಳಿದುಬಂದಿಲ್ಲ.

## ದಿನಾಂಕ ಘೋಷಣೆ

ಎಲ್ಲಾ ರಾಜಕೀಯ ಪಕ್ಷಗಳು ಚುನಾವಣೆಗೆ ಸಿದ್ಧತೆಗಳನ್ನು ಆರಂಭಿಸಿ ಯಾತ್ರೆಗಳನ್ನು ನಡೆಸುತ್ತಿವೆ.

ಇನ್ನೊಂದೆಡೆ ಬಿಜೆಪಿಯನ್ನು ಸೋಲಿಸಲು ವಿರೋಧ ಪಕ್ಷಗಳೆಲ್ಲಾ ಸೇರಿ ಇಂಡಿಯಾ ಮೈತ್ರಿ ಕೂಟವನ್ನು ರಚಿಸಿತ್ತು, ಆದರೆ ಚುನಾವಣೆಗೂ ಮುನ್ನವೇ ಅದರಿಂದ ಒಂದೊಂದೇ ಪಕ್ಷಗಳು ಹೊರಬಂದು ಕೆಲವು ಸ್ವತಂತ್ರವಾಗಿ ಇನ್ನೂ ಕೆಲವು ಬಿಜೆಪಿ ಜತೆಗೆ ಸೇರಿ ಚುನಾವಣಾ ಪ್ರಚಾರದಲ್ಲಿ ತೊಗಿವೆ.

ನಿತೀಶ್ ಕುಮಾರ್ ಬಿಜೆಪಿಗೆ ಸೇರಿ ಬಿಹಾರದಲ್ಲಿ ಸರ್ಕಾರ ರಚಿಸಿದ್ದಾರೆ, ಪಂಜಾಬ್ ನಲ್ಲಿ ಭಗವಂತ್ ಮಾನ್ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ, ಆರ್ ಎಲ್ ಡಿ ಬಿಜೆಪಿ ಜತೆಗೆ ಸೇರಿಕೊಂಡಿದೆ. ಪಂಜಾಬ್ ನಲ್ಲಿ ಮಮತಾ ಬ್ಯಾನರ್ಜಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ. ಇನ್ನು ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷವು ಕಾಂಗ್ರೆಸ್ ಗೆ ಒಂದು ಸ್ಥಾನವನ್ನು ಅವರಿಗೆ ಅರ್ಹತೆ ಇಲ್ಲದಿದ್ದರೂ ಬಿಟ್ಟುಕೊಡುವುದಾಗಿ ಹೇಳಿದೆ. ಇದೀಗ ಬಿಎಸ್ ಮುಖ್ಯಸ್ಥೆ ಮಾಯಾವತಿ ಕೂಡ ತಾವು ಲೋಕಸಭಾ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ. ಅಖಿಲೇಶ್ ಯಾದವ್ ಕೂಡ ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮಗೊಂಡರೆ ಮಾತ್ರ ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತೇನೆ ಎಂದು ಹೇಳಿದ್ದಾರೆ.

## ಭರ್ಜರಿ ತಯಾರಿ

ಜಲಾಶಯಗಳಲ್ಲಿನ ಕಡಿಮೆ ನೀರಿನ ಮಟ್ಟವು ವಿದ್ಯುತ್ ಉತ್ಪಾದನೆಯಲ್ಲಿ ಕುಸಿತಕ್ಕೆ ಕಾರಣವಾಗಿದೆ. ದುರಸ್ತಿ ಕಾರ್ಯದ ನಂತರ ಎರಡನೇ ಘಟಕದಲ್ಲಿ ವಿದ್ಯುತ್ ಉತ್ಪಾದನೆ ಪುನರಾರಂಭಿಸಲು ಪ್ರಯತ್ನಗಳು ನಡೆಯುತ್ತಿವೆ. ಘಟಕ ಖ ಉತ್ಪಾದನೆಯನ್ನೂ ನಿಲ್ಲಿಸಿದೆ. ಇತರೆ ಘಟಕಗಳು ನಿತ್ಯ 880 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿವೆ.

ಆರ್‌ಟಿಪಿಎಸ್ ಮತ್ತು ಯರ್ಮರಸ್ ಥರ್ಮಲ್ ಪವರ್ ಸ್ಟೇಷನ್ (ವೈಟಿಪಿಎಸ್) ಗಳಲ್ಲಿ ಹೈಡಲ್ ಕೇಂದ್ರಗಳು ಮತ್ತು ಸೌರ ಮತ್ತು ಪವನ ಶಕ್ತಿಯ ಕೊರತೆಯನ್ನು ನೀಗಿಸಲು ಉತ್ಪಾದನೆಯನ್ನು ಹೆಚ್ಚಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಪ್ರಸ್ತುತ, ವೈಟಿಪಿಎಸ್‌ನ ಎರಡು ಘಟಕಗಳಿಂದ ಪ್ರತಿದಿನ 1,060 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಪ್ರಸ್ತುತ ಆರ್‌ಟಿಪಿಎಸ್‌ಗೆ ಕಲ್ಲಿದ್ದಲು ಕೊರತೆ ಇಲ್ಲ, 2.5 ಲಕ್ಷ ಮೆಟ್ರಿಕ್ ಟನ್ ದಾಸ್ತಾನು ಇದೆ. ಆರ್‌ಟಿಪಿಎಸ್‌ನ ಎಂಟು ಘಟಕಗಳು ಪ್ರಸ್ತುತ ದಿನಕ್ಕೆ 30 ಎಂಯು ವಿದ್ಯುತ್ ಅನ್ನು ರಾಜ್ಯ ಗ್ರಿಡ್‌ಗೆ ಪೂರೈಸುತ್ತಿವೆ ಎಂದು ಆರ್‌ಟಿಪಿಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಾಬು ಅವರು ಖಾಸಗಿ ಸುದ್ದಿ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

## ಆಡಳಿತ ಅಸಾಧ್ಯ

ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು. ಇತ್ತೀಚೆಗಷ್ಟೇ ಮಂಡಿಸಿದ ಬಜೆಟ್‌ನಲ್ಲಿ ತಮ್ಮ ವರುಣಾ ವಿಧಾನಸಭಾ ಕ್ಷೇತ್ರಕ್ಕೆ 2 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದಾರೆ ಎಂಬ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ಹೇಳಿಕೆಗೆ ತಿರುಗೇಟು ನೀಡಿದ ಸಿದ್ದರಾಮಯ್ಯ, ಯಡಿಯೂರಪ್ಪ ಅವರು ಈಗ ಯಾವ ಹುದ್ದೆಯಲ್ಲಿದ್ದಾರೆ ಹಂಚಿಕೆ ಕುರಿತು ಮಾಧ್ಯಮ ವರದಿ ಸುಳ್ಳು ಎಂದು ತಳ್ಳಿಹಾಕಿದರು.

## ನಿಷೇಧಿಸಿದ ರಿಶಿ ಸುನಕ್

ಮಕ್ಕಳ ವಿದ್ಯಾಭ್ಯಾಸದ ಮೇಲೆ ಮೊಬೈಲ್ ಫೋನ್ ಪ್ರಭಾವ ಬೀರುತ್ತಿದೆ. ಆರ್ಥಿಕ ಹಿಂಜರಿತದ ಸುಳಿಗೆ ಸಿಲುಕಿರುವ ಬ್ರಿಟನ್ನಿನಲ್ಲಿ ಅಲ್ಲಿನ ಪ್ರಧಾನಿ, ಭಾರತೀಯ ಮೂಲದ ರುಶಿ ಸುನಕ್ ಅವರು ಮಕ್ಕಳ ಭವಿಷ್ಯದ ಮೇಲೆ ಪರಿಣಾಮ ಬೀರುವಂತಹ ಮಹತ್ವದ ನಿರ್ಧಾರವೊಂದನ್ನು ಕೈಗೊಂಡಿದ್ದಾರೆ.

ಮೊದಲ ಪುಟದಿಂದ...

ತರಗತಿ ಕೊಠಡಿಗಳಲ್ಲಿ ಶಾಂತಿಯುತ ವಾತಾವರಣವನ್ನು ನಿರ್ಮಿಸಲು, ಮೊಬೈಲ್ ಫೋನ್‌ಗಳನ್ನು ನಿಷೇಧಿಸುವ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಯುಕೆ ಪ್ರಧಾನ ಮಂತ್ರಿ ರಿಷಿ ಸುನಕ್ ಅವರು ಸರ್ಕಾರದ ಹೊಸ ನೀತಿಯನ್ನು ಬೆಂಬಲಿಸುವ ವೀಡಿಯೊ ಸಂದೇಶವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ವಿರಾಮದ ಸಮಯ ಸೇರಿದಂತೆ ಇಂಗ್ಲೆಂಡ್‌ನಾದ್ಯಂತ ಶಾಲೆಗಳಲ್ಲಿ ಮೊಬೈಲ್ ಫೋನ್‌ಗಳನ್ನು ನಿಷೇಧಿಸಲು ಫೆಬ್ರವರಿ 19 ಸೋಮವಾರದಂದು ಸರ್ಕಾರವು ಹೊಸ ಮಾರ್ಗದರ್ಶನವನ್ನು ಪ್ರಕಟಿಸಿದೆ. ಗಖ ಯಲ್ಲಿನ ಕೆಲವು ಶಾಲೆಗಳು ಈಗಾಗಲೇ ಫೋನ್ ನಿಷೇಧಗಳನ್ನು ಜಾರಿಗೆ ತಂದಿದ್ದರೂ, ಸರ್ಕಾರದ ಅಧಿಕೃತ ಮಾರ್ಗದರ್ಶನವು ದೇಶಾದ್ಯಂತ ಸ್ಥಿರವಾದ ನೀತಿಯನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ.

ಮೊಬೈಲ್ ಫೋನ್‌ಗಳು, ಐಪ್ಯಾಡ್‌ಗಳು ಮತ್ತು ಟ್ಯಾಬ್ ಗಳು ಅವುಗಳ ಸುತ್ತಲಿನ ಪರಿಸರ ಸೇರಿದಂತೆ ವೈರ್‌ಲೆಸ್ ಸಾಧನಗಳಿಂದ ಉತ್ಪತ್ತಿಯಾಗುವ ಎಲ್ಲಾ ರೀತಿಯ ವಿಕಿರಣಗಳಿಗೆ ಒಡ್ಡಿಕೊಳ್ಳುತ್ತವೆ. ಮೊದಲಿಗಿಂತ ಚಿಕ್ಕ ವಯಸ್ಸಿನಲ್ಲಿ ಮಕ್ಕಳು ತಂತ್ರಜ್ಞಾನಕ್ಕೆ ತೆರೆದುಕೊಳ್ಳುತ್ತಾರೆ. ಮೊಬೈಲ್ ಫೋನ್‌ಗಳು ಮತ್ತು ವೈರ್‌ಲೆಸ್ ಸಾಧನಗಳಿಂದ ಉತ್ಪತ್ತಿಯಾಗುವ ವಿವಿಧ ರೀತಿಯ ವಿಕಿರಣಗಳಿವೆ. ನೇರಳಾತೀತ ಕಿರಣಗಳು ಸಮಸ್ಯೆಗಳನ್ನು ಉಂಟುಮಾಡುತ್ತವೆ. ಸೆಲ್ ಫೋನ್‌ಗಳು ಅಯಾನೀಕರಿಸದ ವಿಕಿರಣವನ್ನು ಹೊಂದಿರುತ್ತವೆ.

ಮೊಬೈಲ್ ಫೋನ್‌ಗಳು ರೇಡಿಯೋ ಆವರ್ತನ ತರಂಗಗಳನ್ನು ತಮ್ಮ ಪ್ರಸಾರ ಘಟಕ ಅಥವಾ ಆಂಟೆನಾದಿಂದ ಹತ್ತಿರದ ಸೆಲ್ ಟವರ್‌ಗಳಿಗೆ ಕಳುಹಿಸುತ್ತವೆ. ನಾವು ಕರೆಗಳನ್ನು ಮಾಡಿದಾಗ ಅಥವಾ ಸ್ವೀಕರಿಸಿದಾಗ, ಪಠ್ಯಗಳನ್ನು ಕಳುಹಿಸಿದಾಗ ಅಥವಾ ಸ್ವೀಕರಿಸಿದಾಗ ಅಥವಾ ಡೇಟಾವನ್ನು ಬಳಸಿದಾಗ, ನಮ್ಮ ಫೋನ್ ತನ್ನ ಆಂಟೆನಾದಲ್ಲಿರುವ ಸೆಲ್ ಟವರ್‌ಗಳಿಂದ ರೇಡಿಯೊ ಆವರ್ತನ ತರಂಗಗಳನ್ನು ಸ್ವೀಕರಿಸುತ್ತದೆ. ಈ ರೀತಿ ಬಳಸುವುದರಿಂದ ಅನೇಕ ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ.

## ಶೀಘ್ರ ಆರಂಭ

ದಕ್ಷಿಣ ಆಫ್ರಿಕಾದಿಂದ ಮಧ್ಯಪ್ರದೇಶದ ಕುನೋ ರಕ್ಷಿತಾರಣ್ಯಕ್ಕೆ ತರಲಾದ ಚಿರತೆಗಳ ವಿಷಯದಲ್ಲಿ ಅವುಗಳು ಸಹಬಾಳ್ವೆ ನಡೆಸದ ಸಮಸ್ಯೆಯಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಕಾರ್ಯಪ್ರವೃತ್ತರಾಗಬೇಕಾಗುತ್ತದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಚಿರತೆ ಸಫಾರಿಗಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನವನ ಪ್ರದೇಶದಲ್ಲಿ 20 ಹೆಕ್ಟೇರ್‌ಗಳನ್ನು ಗುರುತಿಸಲಾಗಿದೆ. ಚಿರತೆಗಳು ತಪ್ಪಿಸಿಕೊಳ್ಳಲು ಅವಕಾಶ ಆಗದಂತೆ ಎತ್ತರದ ಮೆಶ್ ಅನ್ನು ಹಾಕಲಾಗಿದ್ದು, ಬೇಲಿಗಳನ್ನೂ ಹಾಕಲಾಗಿದೆ.

ಮೃಗಾಲಯದ ಅಧಿಕಾರಿಗಳು ನಿರ್ವಹಿಸುವ ಚಿರತೆ ಸಫಾರಿಗಳು ಈಗಾಗಲೇ ಮಹಾರಾಷ್ಟ್ರದ ನಾಗ್ಪುರ ಮತ್ತು ಬಿಹಾರದ ರಾಜ್‌ಗಿರ್‌ನಲ್ಲಿ ತೆರೆದಿವೆ. ಆದರೆ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿನ ಸಫಾರಿ ಅವುಗಳಿಗಿಂತ ದೊಡ್ಡದಾಗಿರಲಿದೆ.

ಈಗ ಗುರುತಿಸಿರುವ ಪ್ರದೇಶದಲ್ಲಿ 20 ಚಿರತೆಗಳನ್ನು ಇಡಬಹುದು. ಸದ್ಯ 12 ಇವೆ. ಅವುಗಳು ಪರಸ್ಪರ ಒಗ್ಗಿಕೊಳ್ಳುವಂತೆ ಮಾಡಲಾಗುತ್ತಿದೆ. ಈ ಚಿರತೆಗಳ ನಡುವೆ ಯಾವುದೇ ಸಂಘರ್ಷವಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹುಲಿಗಳು ಮತ್ತು ಸಿಂಹಗಳಿಗಿಂತ ಭಿನ್ನವಾಗಿ, ಚಿರತೆಗಳು ಬಹಳ ಚುರುಕುಬುದ್ಧಿಯವು. ತಪ್ಪಿಸಿಕೊಳ್ಳಲು ಸಾಧ್ಯವಿರುವ ಯಾವುದೇ ಮಾರ್ಗವನ್ನು ಕಂಡುಕೊಳ್ಳುತ್ತವೆ. ಆದ್ದರಿಂದ ಆವರಣವನ್ನು ರಚಿಸುವಾಗ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿರಿಸಲಾಗಿದೆ.

ಸದ್ಯ ಸಫಾರಿ ಪ್ರದೇಶದಲ್ಲಿ ಇಡಲಾಗುವ ಎಲ್ಲಾ ಚಿರತೆಗಳು ಕಡಿಮೆ ವಯಸ್ಸಿನವು ಮತ್ತು ಮೃಗಾಲಯದಲ್ಲೇ ಸಾಕಿರುವಂಥವು. ಅವು ಚಿಕ್ಕ ಮರಿಗಳಾಗಿದ್ದಾಗ ಅರಣ್ಯ ಇಲಾಖೆಯ ಸಿಬ್ಬಂದಿ ಅಥವಾ ವ್ಯಕ್ತಿಗಳು ಹೊಲಗಳಿಂದ ರಕ್ಷಿಸಿ ತಂದವುಗಳಾಗಿವೆ. ದಾಖಲೆಗಳ ಪ್ರಕಾರ, ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ 70 ಚಿರತೆಗಳು, 19 ಹುಲಿಗಳು ಮತ್ತು 19 ಸಿಂಹಗಳು ಇವೆ.

## ತೇಜಸ್ವಿ ಯಾದವ್

ನಿತೀಶ್ ಅವರು ರಾಜ್ಯ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಲು ಬಯಸಿದ್ದಾರೆ ಎಂದು ತೇಜಸ್ವಿ ಹೇಳಿದ್ದಾರೆ.

ಆರ್‌ಜೆಡಿ ಮುಖ್ಯಸ್ಥ ಲಾಲು ಯಾದವ್ ಅವರ ಕಿರಿಯ ಪುತ್ರ ಮತ್ತು ಮಾಜಿ ಉಪ ಮುಖ್ಯಮಂತ್ರಿ, ತೇಜಸ್ವಿ ಯಾದವ್ ಅವರು ಮಂಗಳವಾರ ಮುಜಾಫರ್‌ಪುರದಿಂದ ಪ್ರಾರಂಭವಾಗುವ ಅವರ ಬಹು ಪ್ರಚಾರದ ಜನ ವಿಶ್ವಾಸ ಯಾತ್ರೆಯಲ್ಲಿ 33 ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಆರ್‌ಜೆಡಿ ನಾಯಕ ಬಿಹಾರದಲ್ಲಿ 17 ವರ್ಷಗಳ ಎನ್‌ಡಿಎ ಆಡಳಿತದ ವಿರುದ್ಧ 17 ತಿಂಗಳ ಮಹಾಘಟಬಂಧನ್ ಸರ್ಕಾರದ ಸಾಧನೆಗಳನ್ನು ಎತ್ತಿ ಹಿಡಿಯಲಿದ್ದಾರೆ.

ಯಾತ್ರೆಯು ಮೊದಲಿನಂತೆ ಫೆಬ್ರವರಿ 20 ಮಂಗಳವಾರದಿಂದ ಪ್ರಾರಂಭವಾಗಲಿದೆ, ಆದರೆ ಯಾತ್ರೆಯು ಫೆಬ್ರವರಿ 29 ರ ಬದಲಿಗೆ ಮಾರ್ಚ್ 1 ರಂದು ಮುಕ್ತಾಯಗೊಳ್ಳಲಿದೆ. ಈ ಹಿಂದೆ ನಿಗದಿತ ಕಾರ್ಯಕ್ರಮದಂತೆ ಈ ಹಿಂದೆ 32 ಜಿಲ್ಲೆಗಳಲ್ಲಿ ಯಾತ್ರೆಯನ್ನು ಪ್ರಸ್ತಾಪಿಸಲಾಗಿತ್ತು, ಈಗ ಅದನ್ನು 33 ಜಿಲ್ಲೆಗಳಿಗೆ ಹೆಚ್ಚಿಸಲಾಗಿದೆ. ಕಳೆದ ಎರಡು ದಿನಗಳ ಹಿಂದೆ ಬಿಹಾರದಲ್ಲಿ ನಡೆದ ಕಾಂಗ್ರೆಸ್?ನ ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ರಾಹುಲ್ ಗಾಂಧಿಗೆ ಬೆಂಬಲ ನೀಡಿ ಅವರೊಂದಿಗೆ ರ್ಯಾಲಿಯಲ್ಲಿ ಪಾಲ್ಗೊಂಡಿದ್ದರು.

## ಪಾಯಿಂಟ್ ನಿರ್ಮಾಣ

ಹೀಗಾಗಿ ಟೋಕನ್ ಟಿಕೆಟ್ ಕಿರಿಕಿರಿ ತಪ್ಪಿಸಲು ನಮ್ಮ ಮೆಟ್ರೋ NCMC ಕಾರ್ಡ್ ಟಿಕೆಟ್, ಫೀಡರ್ ಬಸ್ ಸಿಟಿ ಮಂದಿಯ ಅಚ್ಚು ಮೆಚ್ಚಾಗಿದೆ. ಇದರ ಜೊತೆಗೆ ನಮ್ಮ ಮೆಟ್ರೋ ಕ್ಯೂಆರ್ ಕೋಡ್ ಮೂಲಕ ಟಿಕೆಟ್ ಪಡೆಯುವುದನ್ನೂ ಪರಿಚಯಿಸಿದೆ.

BMRCLನ QR ಕೋಡ್ ಟಿಕೆಟ್ ಅನ್ನು ಪ್ರಯಾಣಿಕರು WhatsApp, Namma Metro ಮೊಬೈಲ್ ಅಪ್ಲಿಕೇಶನ್ ಹಾಗೂ Paytm ಮತ್ತು Amazon ಮೂಲಕ ಪಡೆಯಬಹುದು. ಜೊತೆಗೆ ಗ್ರೂಪ್ ಕ್ಯೂ ಆರ್ ಟಿಕೆಟ್ ಪಡೆಯಲು ಅವಕಾಶವಿದೆ.

ಬಿಎಂಆರ್ ಸಿಎಲ್ ನವೆಂಬರ್ 2022ರಲ್ಲಿ ಕ್ಯೂಆರ್ ಕೋಡ್ ಟಿಕೆಟ್ ಆರಂಭ ಮಾಡಿತು. ಶುರುವಿನಲ್ಲಿ 2.13 ಲಕ್ಷ ಜನ ಕ್ಯೂಆರ್ ಟಿಕೆಟ್ ಬಳಸುತ್ತಿದ್ದರು. ಬಳಿಕ ಆ ಸಂಖ್ಯೆ ನಿಧಾನಕ್ಕೆ ಏರಿಕೆ ಆಗುತ್ತಾ ಬಂತು. 2023ರ ಜನವರಿಯಲ್ಲಿ ತಿಂಗಳ ಬಳಕೆದಾರ ಸಂಖ್ಯೆ 5 ಲಕ್ಷ ಗಡಿ ಮುಟ್ಟಿತ್ತು. ಜೂನ್ 2023ರಲ್ಲಿ 10 ಲಕ್ಷ ಆಗುವ ಮೂಲಕ ಹೊಸ ದಾಖಲೆಗೆ ಕಾರಣವಾಗಿತ್ತು. ಕಳೆದ ವರ್ಷ ಡಿಸೆಂಬರ್ ತಿಂಗಳಿನಲ್ಲಿ 25.9 ಲಕ್ಷಕ್ಕೆ ಏರಿಕೆಯಾಗಿ ಎಲ್ಲಾ ರೆಕಾರ್ಡ್ ಬ್ರೇಕ್ ಆಗಿದೆ.

**ಕ್ಯೂರ್ ಟಿಕೆಟ್ ಪಡೆಯುವುದು ಹೇಗೆ, ಅನುಕೂಲತೆಗಳೇನು**

- ನಿಮ್ಮ ಮೊಬೈಲ್ ಅಪ್ಲಿಕೇಶನ್ ನಮ್ಮ ಮೆಟ್ರೋ, ಪೇಟಿಯಂ, ವಾಟ್ಸಾಪ್ ಮತ್ತು ಯಾತ್ರಾ, ಮೂಲಕ ಕ್ಯೂಆರ್ ಕೋಡ್ ಬಳಸಿ ಟಿಕೆಟ್ ಪಡೆಯಬಹುದು.
- ಒಂದು ಬಾರಿ ಆರು ಜನರ ಗುಂಪು ಟಿಕೆಟ್ ಪಡೆದರೆ ಟೋಕನ್ ದರಕ್ಕಿಂತ ಶೇ.5 ರಷ್ಟು ರಿಯಾಯಿತಿ ನೀಡಲಾಗುವುದು.
- ಈ ಸೌಲಭ್ಯವನ್ನು ಬಳಸುವ ಪ್ರಯಾಣಿಕರು ಪ್ರಯಾಣಿಕರ ಸಂಖ್ಯೆ, ಎನ್‌ಕ್ರಿಪ್ಟ್ ಮಾಡಿದ ಒಂದು ಕ್ಯೂಆರ್ ಟಿಕೆಟ್ ಅನ್ನು ಸ್ವೀಕರಿಸುತ್ತಾರೆ.
- ನಂತರ ಬಳಕೆಗಾಗಿ, ಈ ಕ್ಯೂಆರ್ ಟಿಕೆಟ್ ಅನ್ನು ಗುಂಪಿನ ಪ್ರತಿ ಪ್ರಯಾಣಿಕರ ಪ್ರವೇಶ ಮತ್ತು ನಿರ್ಗಮನ ಕಟ್ಟೆ ಎಫ್ ಸಿ ಗೇಟ್ ಗಳಲ್ಲಿ ಸ್ಕ್ಯಾನ್ ಮಾಡಬೇಕು.
- ಇದರಿಂದಾಗಿ ಟಿಕೆಟ್ ಕೌಂಟರ್ ಗಳಲ್ಲಿ ಟೋಕನ್‌ಗಳನ್ನು ಖರೀದಿಸಲು ಸರತಿ ಸಾಲಿನಲ್ಲಿ ನಿಲ್ಲುವುದು ತಪ್ಪಲಿದೆ.
- ಪ್ರಯಾಣಿಕರು ತಮ್ಮ ಅನೂಕೂಲಕ್ಕೆ ತಕ್ಕಂತೆ ಮನೆ ಕಚೇರಿಯಿಂದ ಮುಂಗಡವಾಗಿ ಮೊಬೈಲ್ ಕ್ಯೂಆರ್ ಟಿಕೆಟ್ ಗಳನ್ನು ಪಡೆಯಬಹುದು.

## ದೂರು

ಸೋಶಿಯಲ್ ಮೀಡಿಯಾದಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಅವರು ಆರೋಪ ಮಾಡಿದ್ದಾರೆ.

ಹೆಬ್ಬಗೋಡಿಯ ನಾರಾಯಣಸ್ವಾಮಿ ಮತ್ತು ಇನ್ನೋರ್ವ ವ್ಯಕ್ತಿಯ ವಿರುದ್ಧ ಎಫ್ ಐಆರ್ ದಾಖಲಾಗಿದೆ. ಜಾತಿನಿಂದನೆ ,ಅವಾಚ್ಯ ಪದಗಳ ಬಳಕೆ, ಮುಖಕ್ಕೆ ಮಸಿ ಬಳಿಯುವ ಬೆದರಿಕೆ ಹಾಕಲಾಗಿದೆ ಎಂದು ಜಗ್ಗೇಶ್ ಅವರು ಆರೋಪ ಮಾಡಿದ್ದಾರೆ. 'ತಪ್ಪು ಸಂದೇಶ ಕೊಟ್ಟು ಜಾತಿ ಗಲಭೆಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನೆ ನೀಡಲಾಗುತ್ತಿದೆ. ಕಿತ್ತೋದ್ ನನ್ ಮಗ ಎಂಬುದು ಗ್ರಾಮೀಣ ಭಾಷೆಯಾಗಿದ್ದು, ಅದನ್ನು ತಿರುಚಿ ಪ್ರಚೋದಿಸಲಾಗುತ್ತಿದೆ' ಎಂದು ಜಗ್ಗೇಶ್ ದೂರು ನೀಡಿದ್ದಾರೆ.

ಜಗ್ಗೇಶ್ ಅವರು ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಿಸಿದ್ದಾರೆ. ವರ್ತೂರು ಸಂತೋಷ್ ಅವರು ಹುಲಿ ಉಗುರಿನ ಲಾಕೆಟ್ ಧರಿಸಿ ಬಿಗ್ ಬಾಸ್ ಮನೆಗೆ ಹೋಗಿದ್ದಾಗ ಅವರನ್ನು ಬಂಧಿಸಲಾಗಿತ್ತು. ಆ ಬಳಿಕ ಹುಲಿ ಉಗುರು ಹೊಂದಿದ ಆರೋಪದಲ್ಲಿ ಅನೇಕ ಸೆಲೆಬ್ರಿಟಿಗಳು ಕಾನೂನಿನ ಸಂಕಷ್ಟ ಎದುರಿಸಿದ್ದರು. ಜಗ್ಗೇಶ್ ಅವರಿಗೂ ನೋಟಿಸ್ ನೀಡಲಾಗಿತ್ತು. ಆ ಘಟನೆಯನ್ನು ನೆನಪಿಸಿಕೊಂಡು 'ರಂಗನಾಯಕ' ಸುದ್ದಿಗೋಷ್ಠಿಯಲ್ಲಿ ಜಗ್ಗೇಶ್ ಇತ್ತೀಚೆಗೆ ಮಾತನಾಡುವಾಗ 'ಕಿತ್ತೋದ್ ನನ್ ಮಗ' ಎಂಬ ಪದಬಳಕೆ ಮಾಡಿದ್ದರು.

ವರ್ತೂರು ಸಂತೋಷ್ ಪ್ರತಿಕ್ರಿಯೆ ಏನು

ಜಗ್ಗೇಶ್ ಅವರ ಹೇಳಿಕೆ ವೈರಲ್ ಆದ ಬಳಿಕ ವರ್ತೂರು ಸಂತೋಷ್ ಅವರು ಪ್ರತಿಕ್ರಿಯೆ ನೀಡಿದರು. 'ಅವರು ದೊಡ್ಡವರು ಬಿಡಿ. ನಾನು ಹೇಳೋಕೆ ಇಚ್ಛಿಸುವುದು ಇಷ್ಟೇ.. ಕಾಲಾಯ ತಸ್ಮೈ ನಮಃ. ಎಲ್ಲದಕ್ಕೂ ನಾವು ಉತ್ತರ ಕೊಡಲೇಬೇಕು ಅಂತೇನಿಲ್ಲ, ಕೆಲವೊಂದಕ್ಕೆ ಉತ್ತರ ಕೊಡಬೇಕು, ಕೆಲವೊಂದಕ್ಕೆ ಮೌನವಾಗಿ ಇದ್ದರೆ ಸಾಕು. ಉತ್ತರ ಸಿಗುತ್ತದೆ' ಎಂದರು.

ಬಿಗ್ ಬಾಸ್ ಗೆ ಕಾಲಿಟ್ಟ ಬಳಿಕ ವರ್ತೂರು ಸಂತೋಷ್ ಅವರ ಖ್ಯಾತಿ ಹೆಚ್ಚಾಗಿದೆ. ಹಳ್ಳಿಕಾರ್ ತಳಿಯ ಸಂರಕ್ಷಣೆ ಮಾಡುವ ಮೂಲಕ ಅವರು ಜನಪ್ರಿಯತೆ ಪಡೆದಿದ್ದಾರೆ. 'ಬಿಗ್ ಬಾಸ್ ಕನ್ನಡ ಸೀಸನ್ 10' ರಿಯಾಲಿಟಿ ಶೋನಲ್ಲಿ ಅವರು ಫಿನಾಲೆ ತನಕ ಸ್ಪರ್ಧಿಸಿದರು. ದೊಡ್ಮನೆಯಿಂದ ಹೊರಬಂದ ಬಳಿಕ ಅವರಿಗೆ ಜನರು ಪ್ರೀತಿ ತೋರಿಸುತ್ತಿದ್ದಾರೆ. ಅವರ ಅಭಿಮಾನಿ ಬಳಗ ಹಿರಿದಾಗಿದೆ. ಅವರ ಬಗ್ಗೆ ಜಗ್ಗೇಶ್ ಮಾತನಾಡಿದ ರೀತಿಯನ್ನು ಅನೇಕರು ಖಂಡಿಸಿದ್ದಾರೆ. ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಪರ-ವಿರೋಧದ ಚರ್ಚೆ ಆಗುತ್ತಿದೆ.

## ಖರ್ಗೆ

ಗೆಳಗಿಸಲಾಗುವುದು ಎಂದರು. ಅಮೇಥಿ ಮತ್ತು ರಾಯ್ ಬರೇಲಿಯಲ್ಲಿ ಕಾಂಗ್ರೆಸ್ ಹಲವು ಬಾರಿ ಚುನಾವಣೆಯಲ್ಲಿ ಗೆದಿದ್ದರೂ ಜನರಲ್ಲಿ ದ್ವೇಷ ಬಿತ್ತಲು ಬಿಜೆಪಿ ಷಡ್ಯಂತ್ರ ನಡೆಸುತ್ತಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಾಂಗ್ರೆಸ್ ಅಧಿಕಾರಾವಧಿಯಲ್ಲಿ, ಅಮೇಥಿಯಲ್ಲಿ ಕೋಟ್ಯಂತರ ಮೌಲ್ಯದ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು ಆದರೆ ಅವುಗಳಲ್ಲಿ ಹೆಚ್ಚಿನವು ಬಾಕಿ ಉಳಿದಿವೆ. ಯೋಜನೆಗಳು ಇನ್ನೂ ಏಕೆ ಅಪೂರ್ಣವಾಗಿವೆ. 2019 ರ ಲೋಕಸಭಾ ಚುನಾವಣೆಯವರೆಗೂ ಅಮೇಥಿ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿತ್ತು, ಬಿಜೆಪಿಯ ಸ್ಮಿರಿತ್ ಇರಾನಿ ಅವರು ರಾಹುಲ್ ಗಾಂಧಿಯನ್ನು ಸೋಲಿಸಿದರು. ಸೋನಿಯಾ ಗಾಂಧಿ ಅವರು ರಾಯ್ ಬರೇಲಿಯಿಂದ ಗೆದ್ದಿದ್ದರು.

ದೊಡ್ಡ ಕಂಪನಿಗಳಿಗೆ ಕೋಟ್ಯಂತರ ರೂಪಾಯಿ ಸಬ್ಸಿಡಿ ನೀಡುತ್ತಿದ್ದು, ಬಡವರು, ರೈತರು ಮತ್ತು ಮಹಿಳೆಯರಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ತೆಗೆದುಹಾಕಲಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷರು ಆರೋಪಿಸಿದರು.

ಇದೇ ಮೊದಲ ಬಾರಿಗೆ ರೈತರ ಮೇಲೆ ವಿವಿಧ ರೀತಿಯ ತೆರಿಗೆಗಳನ್ನು ವಿಧಿಸಲಾಗಿದೆ ಎಂದು ಹೇಳಿದರು. ಟ್ರ್ಯಾಕ್ಟರ್‌ಗಳು, ರಸಗೊಬ್ಬರಗಳು ಮತ್ತು ಯಂತ್ರೋಪಕರಣಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸಲಾಗಿದೆ ಎಂದು ಅವರು ಹೇಳಿದರು. ಕಾಂಗ್ರೆಸ್ ಆಡಳಿತವಿರುವ ಹಲವು ರಾಜ್ಯಗಳಲ್ಲಿ ಕೃಷಿ ಸಾಲ ಮನ್ನಾ ಮಾಡಲಾಗಿದೆ ಎಂದು ಖರ್ಗೆ ಹೇಳಿದರು.

ರಾಹುಲ್ ಗಾಂಧೀಜಿಯವರು ಅಮೇಥಿಯೊಂದಿಗೆ ಆಳವಾದ ಸಂಪರ್ಕವನ್ನು ಹೊಂದಿದ್ದಾರೆ, ಅವರು ಇಂದಿಗೂ ನಿಮ್ಮೊಂದಿಗಿದ್ದಾರೆ ಮತ್ತು ಯಾವಾಗಲೂ ನಿಮ್ಮೊಂದಿಗೆ ಇರುತ್ತಾರೆ ಎಂದು ಅವರು ಹೇಳಿದರು.

# ನೀರಿನ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಿ

**ಮೈಸೂರು:** ಬೇಸಿಗೆ ಆರಂಭವಾಗುತ್ತಿದ್ದು, ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಆಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕೆ ವಿ ರಾಜೇಂದ್ರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿಯ ಕೌನ್ಸಿಲ್ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಜಿಲ್ಲೆಯ ಬರ ಘೋಷಿತ ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ನಿರ್ವಹಣೆ ಕುರಿತು ಹಮ್ಮಿಕೊಂಡಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರಿನ ಲಭ್ಯತೆ ಬಗ್ಗೆ ಮಾಹಿತಿ ಇಟ್ಟುಕೊಳ್ಳಬೇಕು. ಕುಡಿಯುವ ನೀರಿನ ಸಮಸ್ಯೆ ಆಗಬಂತಹ ಸಮಸ್ಯಾತ್ಮಕ ವಾರ್ಡ್‌ಗಳು ಹಾಗೂ ಗ್ರಾಮಗಳನ್ನು ಗುರುತಿಸಿಕೊಳ್ಳಿ. ಪ್ರತಿ ಗ್ರಾಮಕ್ಕೆ ಕಡ್ಡಾಯವಾಗಿ ಒಂದೊಂದು ಖಾಸಗಿ ಬೋರ್‌ವೆಲ್ ಫೈಯರ್ ಮಾಡಿಕೊಂಡು ಅವರೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಂದೆ ಚುನಾವಣೆ ನೀತಿ ಸಂಹಿತೆ ಜಾರಿಗೆ ಬರುತ್ತದೆ ಆದ್ದರಿಂದ ಟ್ಯಾಂಕರ್ ಮೂಲಕ ನೀರು ನೀಡಲು ಅಗತ್ಯ ಇರುವ ಕಡೆಗೆ ಈಗಲೇ ಟೆಂಡರ್ ಕರೆದು ವ್ಯವಸ್ಥೆ ಮಾಡಿ ಇಟ್ಟುಕೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದರೆ ತಿಳಿಸಲು ಹೆಲ್ಪ್‌ಲೈನ್ ತೆರೆದು ಸಿಬ್ಬಂದಿಗಳನ್ನು ನೇಮಕ ಮಾಡಬೇಕು. ಕುಡಿಯುವ ನೀರಿನ ಪೂರೈಕೆ ಮಾಡುವ ನೀರನ್ನು ಅದರ ಶುದ್ಧತೆ ಹಾಗೂ ಗುಣಮಟ್ಟ ಕುರಿತು ಆರೋಗ್ಯ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದರು.



ಹೊಸ ಬೋರ್‌ವೆಲ್‌ಗಳನ್ನು ಕೊರೆಯಲು ಅಗತ್ಯ ಇರುವ ಕಡೆ ಗುರುತಿಸಿ ಇಟ್ಟುಕೊಳ್ಳಬೇಕು. ಬರವನ್ನು ಸಮರ್ಥವಾಗಿ ನಿರ್ವಹಿಸಲು ಅಧಿಕಾರಿಗಳು ಕ್ಷೇತ್ರಗಳಿಗೆ ಭೇಟಿ ನೀಡಬೇಕು. ಬರ ಪರಿಹಾರದ ಹಣ ಎಲ್ಲಾ ಅರ್ಹ ಫಲಾನುಭವಿಗಳಿಗೆ ತಲುಪಿದೆ ಎಂಬುದನ್ನು ಪರಿಶೀಲನೆ ನಡೆಸಬೇಕು ಎಂದರು.

ಜಾನುವಾರುಗಳ ಮೇವಿನ ಕೊರತೆ ಉಂಟಾಗದಂತೆ ನೋಡಿಕೊಳ್ಳಬೇಕು. ಮೇವು ಲಭ್ಯತೆ ಬಗ್ಗೆ ಮಾಹಿತಿ ಇರಬೇಕು. ಮೇವಿನ ಬೀಜದ ಕಿಟ್‌ಗಳನ್ನು ರೈತರಿಗೆ ವಿತರಣೆ ಮಾಡಲಾಗಿದೆ. ಇದು ಸದ್ಬಳಕೆ ಆಗುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಒಂದು ವಾರದೊಳಗೆ ತಾಲ್ಲೂಕುಗಳಲ್ಲಿ ರೈತ ಮುಖಂಡರೊಂದಿಗೆ ಕುಡಿಯುವ ನೀರು, ಜಾನುವಾರು ಮೇವು ಲಭ್ಯತೆ, ರಸಗೊಬ್ಬರ ಕೊರತೆ, ವಿದ್ಯುತ್ ಚ್ಛಕ್ತಿ ಕುರಿತಂತೆ ಸಭೆ ನಡೆಸಬೇಕು ಎಂದು ಸೂಚನೆ ನೀಡಿದರು. ರೈತರಿಗೆ ಫ್ರೂಟ್ ಐಡಿ ಸೃಜನೆ ಮಾಡಬೇಕು. ಶೇಕಡಾ 100 ರಷ್ಟು ಫ್ರೂಟ್ ಐಡಿಗಳು ಸೃಜನೆಯಾಗಬೇಕು. ರೈತರಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ನೀಡಲು ಫ್ರೂಟ್ ಐಡಿ ಅವಶ್ಯಕವಾಗಿದೆ ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಪಿ.ಶಿವರಾಜ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾದ ಅಶಾದ್ ಉರ್ ರೆಹಮಾನ್ ಷರೀಫ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಅರಸು ಆಡಳಿತ ಕಾರ್ಯವೈಖರಿಯಿಂದ ಅಮರ

**ಮೈಸೂರು:** ದೇವರಾಜ ಅರಸು ಅವರು ಮೈಸೂರು ಭಾಗದವರು ಎಂಬುದಕಷ್ಟೆ ಅಲ್ಲದೆ ಅವರ ಆಡಳಿತ ವೈಖರಿ, ಈ ರಾಜ್ಯದ ಕಟ್ಟ ಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸಿಕೊಡುವಲ್ಲಿ, ಉಳುವವನೇ ಭೂಮಿಯ ಓಡೆಯನನ್ನಾಗಿ ಮಾಡುವುದರ ಮೂಲಕ ಪ್ರತಿಯೊಬ್ಬರ ಮನಸಿನಲ್ಲೂ ಚಿರಾಯು ಆಗಿದ್ದಾರೆ ಎಂದು ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್ ಅವರು ಹೇಳಿದರು.



ಇಂದು ಸಿದ್ಧಾರ್ಥ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಸಂಭ್ರಮ 50 ರ ಸವಿನೆನಪಿಗೆ ಶ್ರೀ ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನೆ ಶಂಕು ಸ್ಥಾಪನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ಎಂದು ನಾಮಕರಣಗೊಂಡ 50 ನೇ ವರ್ಷದ ಸಂಭ್ರಮಾಚರಣೆಗೆ ಕಾಲಿಟ್ಟಿದ್ದೇವೆ. ಸಮ ಸಮಾಜದ ನಿರ್ಮಾಣಕ್ಕಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಇಂದಿನ ಸರ್ಕಾರಗಳು ಅನುಸರಿಸಿಕೊಂಡು ಹೋದಾಗ ಮಾತ್ರವೇ ಅಂತಹ ವ್ಯಕ್ತಿಗೆ ನಮನಗಳನ್ನು ಸಲ್ಲಿಸಲು ಸಾಧ್ಯ. ಅನೇಕ ಜನಪರ ಹಾಗೂ ಅಭಿವೃದ್ಧಿ ಪಥದಲ್ಲಿ ಸಮಾನವಾದ ಸಮಾಜವನ್ನು ನಿರ್ಮಾಣ ಮಾಡುವುದು ಕಷ್ಟ ಸಾಧ್ಯದ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಯಾವುದೇ ಜಾತಿ ಧರ್ಮ ಬೇದ ವಿಲ್ಲದೆ ಎಲ್ಲರಿಗೂ ನ್ಯಾಯ ಒದಗಿಸುವ ಹಾದಿಯಲ್ಲಿ ಸಾಗುತ್ತಿದೆ ಎಂದರು. ಜಿಲ್ಲಾಧಿಕಾರಿಗಳಾದ ಡಾ.ಕೆ.ವಿ. ರಾಜೇಂದ್ರ ಅವರು ಮಾತನಾಡಿ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಎರಡು ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಶ್ರಮಿಸಿದಂತಹ ಮೈಸೂರು ಭಾಗದ ಜನಪ್ರಿಯ ಮುಖ್ಯಮಂತ್ರಿ ಡಿ ದೇವರಾಜು ಅರಸುರವರು. ಈ ಶುಭ ಸಮಾರಂಭದಲ್ಲಿ ಹಳೆಯ ಜಿಲ್ಲಾಧಿಕಾರಿ ಕಚೇರಿಗಿಂತ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಹಳ ಲವಲವಿಕೆ ಇಂದ ಕೂಡಿದ್ದು, ಸಾರ್ವಜನಿಕರಿಗೆ ಬಹಳ ಸಹಾಯವಾಗುತ್ತಿದೆ. ಪ್ರತಿಯೊಬ್ಬರ ಮನೆ ಮನ ಮುಟ್ಟುವ ಮೂಲಕ ಶ್ರೀ ಡಿ. ದೇವರಾಜ ಅರಸ್ ರವರ ಪ್ರತಿಮೆ ಅನಾವರಣಕ್ಕೆ ಶ್ರಮಿಸಿದ ಪ್ರತಿಯೊಬ್ಬರಿಗೂ ಹಾಗೂ ಜಿಲ್ಲಾಡಳಿತದ ಬೆಂಬಲಕ್ಕಾಗಿ ನಿಂತ ಎಲ್ಲರಿಗೂ ಸಹ ಧನ್ಯವಾದ ತಿಳಿಸುತ್ತಾ, ಸರ್ವರನ್ನು ಜೊತೆಗೆ ಕರೆದುಕೊಂಡು ಹೋಗುವಂತಹ ಭಾವನೆ ಪ್ರತಿ ಧರ್ಮದವರನ್ನು ಸಮಾನರಾಗಿ ಕಾಣುವ ಸೌಹಾರ್ದತೆ ಮತ್ತು ಸಹೋದರತೆ ಎಂಬ ಅರಸು ರವರ ಕಲ್ಪನೆಯನ್ನು ದಲಿತರು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣದಿಂದ ಸಮಸಮಾಜದ ನಿರ್ಮಾಣ ಮಾಡುವಂತಹ ಅವರ ಇಚ್ಛೆಯನ್ನು ನಾವು ನನಸು ಮಾಡಬೇಕು ಎಂದರು.

# ಶಿವಾಜಿ ಆದರ್ಶ ಅನುಸರಿಸಿ

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಸಲಹೆ

**ಮೈಸೂರು:** ಶಿವಾಜಿ ಮಹಾರಾಜರು ನಾಡು-ನುಡಿಯನ್ನು ಕಟ್ಟಿ ಬೆಳಸುವ ನಿಟ್ಟನಲ್ಲಿ ಉತ್ತಮ ಮಾರ್ಗಗಳನ್ನು ಅಳವಡಿಸಿಕೊಂಡಿದ್ದರು. ಅವೆಲ್ಲವೂ ಇಂದು ನಮಗೆ ಆದರ್ಶ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕರಾದ ವಿ.ಎನ್ ಮಲ್ಲಿಕಾರ್ಜುನ ಸ್ವಾಮಿ ಅವರು ಹೇಳಿದರು.



ಇಂದು ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಿದ್ದ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಡೀ ಕರ್ನಾಟಕದಾದ್ಯಂತ ಛತ್ರಪತಿ ಶಿವಾಜಿ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಶಿವಾಜಿ ಮಹಾರಾಜರು ನಾಡನ್ನು ಕಟ್ಟುವ ಹಾಗೂ ಸಾಮ್ರಾಜ್ಯನ್ನು ಸ್ಥಾಪಿಸುವ ನಿಟ್ಟನಲ್ಲಿ ಅವರು ಅಳವಡಿಸಿಕೊಂಡಿದ್ದತಹ ಆದರ್ಶಗಳು, ಸಂಸ್ಕೃತಿ, ಆಚರಣೆಗಳನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು. ಅಂತವರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ನಾವು ಉತ್ತಮ ಸಮಾಜ ಕಟ್ಟಲು ಮುಂದಾಗಬೇಕು ಎಂದರು.

ಬಸುದೇವ್ ಸೋಮಾನಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ ರಮೇಶ್ ಅವರು ಮುಖ್ಯ ಭಾಷಣಕಾರರಾಗಿ ಮಾತನಾಡಿ, ಶಿವಾಜಿ ಮಹಾರಾಜ್ ಅವರು ಒಬ್ಬ ಆದರ್ಶ ಪುರುಷ, ಸರ್ವಧರ್ಮವನ್ನು ಸಮಾನವಾಗಿ ಕಾಣುತ್ತಿದ್ದ ಸರ್ವಗುಣ ಸಂಪನ್ನ, ಇಂತಹ ಮಹಾನ್ ವ್ಯಕ್ತಿಯ ಜಯಂತಿಯಂದು ಮಹಾರಾಷ್ಟ್ರದಲ್ಲಿ ಸಾರ್ವಜನಿಕ ರಜೆಯನ್ನು ನೀಡುವುದರ ಮೂಲಕ ದೊಡ್ಡ ಹಬ್ಬದ ರೀತಿ ಆಚರಣೆ ಮಾಡುತ್ತಾರೆ ಎಂದರು.

ಈ ದೇಶವನ್ನು ಸಾವಿರಾರು ರಾಜರು ಆಳಿ ಮರೆಯಾಗಿದ್ದಾರೆ. ಆದರೆ ಶಿವಾಜಿಯರು ತಮ್ಮ ಮರಣದ ನಂತರವೂ ಪ್ರತಿಯೊಬ್ಬರ ಮನಸಿನಲ್ಲಿಯೂ ಮಹಾರಾಜರಾಗಿ ಇಂದಿಗೂ ಸಂಭ್ರಮಿಸುತ್ತಿದ್ದಾರೆ. ಇದು ಅವರು ಅವರ ವ್ಯಕ್ತಿತ್ವದಿಂದ ಗಳಿಸಿರುವ ಗೌರವ. ಇವರ ಸಾಲಿಗೆ ಇನ್ನೂ ಹಲವಾರು ಮಹಾಪುರುಷರು ಸೇರುತ್ತಾರೆ. ಅಂತಹ ವ್ಯಕ್ತಿಗಳ ಸಾಧನೆ, ಆದರ್ಶ ಗುಣಗಳನ್ನು ಇಂದಿನ ಯುವಜನರಿಗೆ ತಿಳಿಸುವ ಕೆಲಸವನ್ನು ಜಯಂತಿಗಳು ಮಾಡುತ್ತಿವೆ ಎಂದು ಹೇಳಿದರು.

ಜನಪರ ನಾಯಕನಾಗಿ ಜನಪ್ರಿಯನಾಗಿದ್ದ ಶಿವಾಜಿಯವರ ಸಾಧನೆ ಒಂದೆರಡು ದಿನಗಳದ್ದಲ್ಲ. ಹಲವಾರು ವರ್ಷಗಳ ಹೋರಾಟ. ಶಿವಾಜಿಯವರು ತಮ್ಮ ಆಡಳಿತದಲ್ಲಿ ಸುಧಾರಣೆ ತರಲು ಹೊಸ ಮಾದರಿಯನ್ನು ಅಳವಡಿಸಿಕೊಂಡು ಸರ್ವಧರ್ಮದವರನ್ನು ಒಂದು ಗೂಡಿಸಿ ಆರ್ಥಿಕ ಸಮಾನತೆಗಾಗಿ ಹೋರಾಡಿದರು. ಬದುಕಿನಲ್ಲಿ ಕತ್ತಿಗೆ ಕತ್ತಿ, ಪ್ರೀತಿಗೆ ಪ್ರೀತಿ ಎಂಬ ಸೂತ್ರವನ್ನು ಅಳವಡಿಸಿಕೊಂಡು ಸಾಕಷ್ಟು ಹೋರಾಟಗಳನ್ನು ಮಾಡಿದ ಧೀಮಂತ ವ್ಯಕ್ತಿ, ಅವರ ಧೀರ ಗುಣ ದಿಟ್ಟ ನಿರ್ಧಾರ ಇವತ್ತಿನ ಕಾಲಕ್ಕೆ ಪ್ರಸ್ತುತವಾಗಿದೆ ಎಂದರು.

ಗೆಲ್ಲಬೇಕು ಎಂಬ ಮನಸಿದ್ದರೆ ಯಾವುದೇ ಕಾರಣಕ್ಕೂ ಹಿಂದೆ ಸರಿಯಬಾರದು ಎಂಬುದನ್ನು ಶಿವಾಜಿಯವರಿಂದ ಕಲಿಯಬೇಕು. ಅವರ ದೇಶ ಪ್ರೇಮ, ಜನಪರ ಒಲವು, ಇಂದಿನ ಯುವಜನರಿಗೆ ಮಾದರಿ. ಇಂತಹ ವಿಷಯಗಳಿಂದಲೇ ಶಿವಾಜಿಯವರು ದೇಶದಾದ್ಯಂತ ಪ್ರೀತಿ- ಪ್ರಾಮುಖ್ಯತೆಯನ್ನು ಪಡೆದು ಕೊಂಡಿದ್ದಾರೆ. ದೇಶಿಗರು-ವಿದೇಶಿಗರು ಅವರ ವ್ಯಕ್ತಿತ್ವವನ್ನು ಹೊಗಳಿ ಕೊಂಡಾಡಿರುವುದೇ ಇದಕ್ಕೆ ಉದಾಹರಣೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ ಸುದರ್ಶನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಕೆ.ಮಡ್ಡಿಕೆರೆ ಗೋಪಾಲ್, ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಸಮಿತಿಯ ಅಧ್ಯಕ್ಷರಾದ ಕೆ.ನಾಗೇಂದ್ರ, ಅಧ್ಯಕ್ಷರಾದ ಚಂದ್ರರಾವ್, ಕಾರ್ಯದರ್ಶಿಗಳಾದ ಮುಕುಂದರಾವ್, ಖಜಾಂಚಿಯಾದ ಹರಿರಾವ್ ಸಿಂದೆ ಹಾಗೂ ಸಮುದಾಯದ ಮುಖಂಡರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಯುವಕರಿಗೆ ಎಂದೆಂದೂ ಅಜರಾಮರ

**ಮೈಸೂರು:** ಶಿವಾಜಿ ಮಹಾರಾಜರ ಪ್ರಭಾವಕ್ಕೆ ಒಳಗಾಗಿದ್ದ ವಾಸುದೇವ ಬಲವಂತ ಫಡಕೆ, ಭಾರತ ಸ್ವಾತಂತ್ರ್ಯ ಚಳುವಳಿಯ ಕ್ರಾಂತಿಕಾರಿ ನಾಯಕರು. ಯುವಕರಿಗೆ ಎಂದೆಂದೂ ಅಜರಾಮರ ಎಂದು ಸಾಫ್ಟ್‌ವೇರ್ ಇಂಜಿನಿಯರ್ ಹಾಗೂ ಋಗ್ವೇದಿ ಯೂತ್ ಕ್ಲಬ್ ನ ಕಾರ್ತಿಕ್ ಜೋಶಿ ತಿಳಿಸಿದರು. ಅವರು ಜೈ ಹಿಂದ್ ಪ್ರತಿಷ್ಠಾನ ಹಾಗೂ ಋಗ್ವೇದಿ ಯೂತ್ ಕ್ಲಬ್ ಹೆಬ್ಬಾಳದಲ್ಲಿ ಹಮ್ಮಿಕೊಂಡಿದ್ದ ವಾಸುದೇವ ಬಲವಂತ ಫಡಕೆ ರವರ ಬಲಿದಾನ ದಿವಸದಲ್ಲಿ ಭಾವಚಿತ್ರಕ್ಕೆ ಪುಷ್ಪಾ ಅರ್ಪಿಸಿ ಗೌರವ ನಮನಗಳನ್ನು ಸಲ್ಲಿಸುತ್ತಾ ಬ್ರಿಟಿಷ್ ಶೋಷಣೆಯ ವಿರುದ್ಧ ಸ್ವರಾಜ್ಯದ ಪರಿಕಲ್ಪನೆ ಯೊಂದಿಗೆ ತಮ್ಮದೇ ಆದ ಐಕ್ಯ ವರ್ಧನಿ ಸಭಾ ಸಂಘಟನೆಯ ಮೂಲಕ ಯುವಕರಲ್ಲಿ ಮತ್ತು ಜನತೆಯಲ್ಲಿ ರಾಷ್ಟ್ರೀಯ ಚಿಂತನೆಗಳನ್ನು ಜಾಗೃತಗೊಳಿಸಿ ಸೈನ್ಯ ಸಂಘಟಿಸಿದ ಮಹಾನ್ ವ್ಯಕ್ತಿ . ಕ್ರಾಂತಿಕಾರಿಗಳ ಹೋರಾಟ ನಿರಂತರವಾಗಿ ದೇಶದಲ್ಲಿ ರಾಷ್ಟ್ರೀಯ ಪರಿಕಲ್ಪನೆ, ಸ್ವಾತಂತ್ರ್ಯ ಚಳುವಳಿಯ ಬೆಂಕಿ ಹೆಚ್ಚಾಯಿತು ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಜೈ ಹಿಂದ್ ಪ್ರತಿಷ್ಠಾನದ ಅಧ್ಯಕ್ಷರಾದ ಸುರೇಶ್ ಎನ್ ಋಗ್ವೇದಿ ಮಾತನಾಡಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಮಹಾನ್ ಕ್ರಾಂತಿಕಾರಿ ನಾಯಕರು. ಬ್ರಿಟಿಷ್ ಶೋಷಣೆಯ ವಿರುದ್ಧ, ರೈತರ ಕಷ್ಟಗಳು ಹಾಗೂ ಜನತೆಯ ಶೋಷಣೆಯ ವಿರುದ್ಧ ಮಹಾನ್ ಹೋರಾಟ ನಡೆಸಿ ತಮ್ಮದೇ ಸೈನ್ಯದ ಮೂಲಕ ಪುಣೆ ನಗರವನ್ನು ತಮ್ಮ ಹಿಡಿತದಲ್ಲಿ ಸಾಧಿಸಿದ ವ್ಯಕ್ತಿ. ಕ್ರಾಂತಿಕಾರ ಹೋರಾಟ ,ತ್ಯಾಗ ಬಲಿದಾನಗಳನ್ನು ಯುವಕರು ಮತ್ತು ವಿದ್ಯಾರ್ಥಿಗಳಲ್ಲಿ ತಿಳಿಸುವ ಕಾರ್ಯ ವಾಗಬೇಕು. ರಾಷ್ಟ್ರಕ್ಕಾಗಿ ತಮ್ಮ ಜೀವವನ್ನು ಅರ್ಪಿಸಿಕೊಂಡವರ ಇತಿಹಾಸ ತಿಳಿಸಬೇಕು. ರಾಷ್ಟ್ರ ಸಾವಿರಾರು ಕ್ರಾಂತಿಕಾರಿಗಳ ನಾಯಕರನ್ನು ಕಳೆದುಕೊಂಡಿದೆ. ಅವರ ಸೇವೆ, ಅರ್ಪಣೆಯ ಮಹತ್ವವನ್ನು ಯುವ ಜನತೆಗೆ ತಿಳಿಸಬೇಕು. ರಾಷ್ಟ್ರದ ಅಭಿವೃದ್ಧಿ, ರಾಷ್ಟ್ರಕ್ಕಾಗಿ ಅರ್ಪಣೆ ಮಾಡಿಕೊಳ್ಳುವ ಮನೋಗುಣವನ್ನು ಬೆಳೆಸುವ ಕಾರ್ಯವಾಗಬೇಕು ಎಂದು ತಿಳಿಸಿದರು. ಋಗ್ವೇದಿ ಯೂತ್ ಕ್ಲಬ್ ಅಧ್ಯಕ್ಷರಾದ ಶರಣ್ಯ ಋಗ್ವೇದಿ, ಸುರೇಶ್, ವಿಜಯಲಕ್ಷ್ಮಿ, ಕುಸುಮ,, ಝಾನ್ಸಿ ಮಕ್ಕಳ ಪರಿಷತ್ತಿನ ಶ್ರಾವ್ಯ ಎಸ್ ಋಗ್ವೇದಿ ಉಪಸ್ಥಿತರಿದ್ದರು.

# ಶಿವಾಜಿ ಮಹಾರಾಜರ 397 ನೇ ಜಯಂತೋತ್ಸವ

**ಬೆಂಗಳೂರು:** ಕರ್ನಾಟಕ ಮರಾಠ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಸದಾಶಿವ ನಗರದಲ್ಲಿರುವ ಕರ್ನಾಟಕ ಮರಾಠ ವೆಲ್ಫೇರ್ ಅಸೋಸಿಯೇಷನ್ ಆವರಣದಲ್ಲಿ ಆಯೋಜಿಸಲಾಗಿದ್ದ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ 397ನೇ ಜಯಂತೋತ್ಸವ ಸಮಾರಂಭವನ್ನು ಗೋಸಾಯಿ ಮಠದ ವೇದಾಂತಾಚಾರ್ಯ ಪರಮ ಪೂಜ್ಯ ಮಂಜುನಾಥ ಭಾರತಿ ಸ್ವಾಮೀಜಿ, ಉಪಮುಖ್ಯಮಂತ್ರಿಗಳಾದ ಡಿ.ಕೆ ಶಿವಕುಮಾರ್, ಮಾಜಿ ಸಚಿವರುಗಳಾದ ಪಿ ಜಿ ಆರ್ ಸಿಂಧ್ಯಾ, ಅಶ್ವಥ್ ನಾರಾಯಣ್, ಸುರೇಶ್ ಕುಮಾರ್ ರವರು ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಪುತ್ತಳಿಗೆ ಮಾಲಾರ್ಪಣೆ ಮಾಡುವ ಮುಖೇನ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಸೋಸಿಯೇಷನ್ ಅಧ್ಯಕ್ಷರಾದ ಮನೋಜ್ ಕುಮಾರ್, ಪ್ರಧಾನ ಕಾರ್ಯದರ್ಶಿ ಶ್ರೀಧರ್ ರಾವ್ ಭೋಜಗಡೆ,ಖಜಾಂಚಿ ಗಣೇಶ್ ರಾವ್ ಕೆಸರ್ಕರ್, ಸುರೇಶ್ ರಾವ್ ಸಿಂಧೆ, ದೇವರಾಜ್ ಯಾದವ್, ರಶ್ಮಿ ರವಿಕಿರಣ್, ಸುನಿಲ್ ರಾವ್ ಬೈಸೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನೇರ ಸಂದರ್ಶನ

**ಮಂಡ್ಯ:** ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ಬಂಧನ್ ಬ್ಯಾಂಕ್ ಲಿ, ಮುತ್ತೂಟ್ ಫೈನಾನ್ಸ್, ಎಸ್. ಕೆ. ಎಫ್ ಇಂಜಿನಿಯರಿಂಗ್ ಮತ್ತು ಲೂಬ್ರಿಕೇಷನ್ ಇಂಡಿಯಾ ಪ್ರೈ, ಲಿ, ಚೈತನ್ಯ ಇಂಡಿಯಾ ಫಿನ್ ಕ್ರೆಡಿಟ್, ಕ್ರೆಡಿಟ್ ಆಕ್ಸೆಸ್ ಗ್ರಾಮೀಣ್ ಲಿಮಿಟೆಡ್, ಸತ್ಯ ಮೈಕ್ರೋ ಕ್ಯಾಪಿಟಲ್, ಪೇಟಿಎಂ ಸರ್ವೀಸ್ ಮತ್ತು, ಟಿ. ವಿ. ಎಸ್ ಟ್ರೈನಿಂಗ್ ಸರ್ವಿಸಸ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಆವರಣದಲ್ಲಿ ಫೆಬ್ರವರಿ 22 ರಂದು ಬೆಳಿಗ್ಗೆ 10:30 ಕ್ಕೆ ಉದ್ಯೋಗಕ್ಕಾಗಿ ನೇರ ಸಂದರ್ಶನ ನಡೆಯಲಿದೆ. 18 ರಿಂದ 28 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮೋ ಹಾಗೂ ಬಿ. ಇ, ಬಿ. ಟೆಕ್, ಎಂ. ಸಿ. ಎ, ಎಂ. ಬಿ. ಎ, ಬಿ. ಸಿ. ಎ, ಬಿ. ಎಸ್ಸಿ-ಐ.ಟಿ ಹಾಗೂ ಯಾವುದೇ ಪದವಿ ಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳು ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ: 08232-295124, 9164642684 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಕ್ಷೇಪಣೆಗೆ ಅವಕಾಶ

**ಮಂಡ್ಯ:** ಮದ್ದೂರು ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇದ್ದ ಗುಡಿಗೆರೆ ಕಾಲೋನಿ ಅಂಗನವಾಡಿ ಕೇಂದ್ರದ ಅಂಗನವಾಡಿ ಸಹಾಯಕಿ ಹುದ್ದೆಗೆ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅಭ್ಯರ್ಥಿಯ ಪಟ್ಟಿಯನ್ನು ಮದ್ದೂರಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ದಾಖಲಾತಿಗಳ ಸಹಿತ ಲಿಖಿತ ಆಕ್ಷೇಪಣೆಗಳನ್ನು ಫೆಬ್ರವರಿ 23ರೊಳಗಾಗಿ ಮದ್ದೂರಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿರುತ್ತದೆ ಎಂದು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾರಸುದಾರರ ಪತ್ತೆಗಾಗಿ

**ಮಂಡ್ಯ:** ಮಂಡ್ಯ ನಗರದ ಯಲಿಯೂರು ರೈಲು ನಿಲ್ದಾಣದ ನಡುವೆ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಅಪರಿಚಿತ ಮೃತನಿಗೆ ಸುಮಾರು 18 ರಿಂದ 29 ವರ್ಷವಿದ್ದು, 5 ಅಡಿ ಎತ್ತರ, ಗೋಧಿ ಮೈ ಬಣ್ಣ, ಸಾಧಾರಣ ಶರೀರ, ತಲೆಯಲ್ಲಿ ಸುಮಾರು 3 ಇಂಚು ಉದ್ದದ ಕಪ್ಪು ಕೂದಲು, ಚಿಗುರು ಮೀಸೆ ಇರುತ್ತದೆ, ಹಲ್ಲು ಸ್ವಲ್ಪ ಉಬ್ಬಿರುತ್ತದೆ, ಕತ್ತಿನಲ್ಲಿ ಒಂದು ಕಪ್ಪು ದಾರ ಕಟ್ಟಿದ್ದು ಅದರಲ್ಲಿ ಒಂದು ಸಣ್ಣ ಬಳೆ ಇರುತ್ತದೆ, ಬಲಭಾಗದ ಕಿವಿಯ ಸಮೀಪ ಕತ್ತಿನಲ್ಲಿ ಹದ್ದಿನ ಚಿತ್ರವಿರುವ ಹಚ್ಚೆ ಗುರುತು ಇರುತ್ತದೆ, ಬಲಗೈಯಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ದಾರ ಕಟ್ಟಿರುತ್ತಾರೆ, ಎಡಗೈಗೆ ಕಪ್ಪು ಬಣ್ಣದ ದಾರ ಕಟ್ಟಿರುತ್ತಾರೆ, ಠಾಣೆ ದೂ. ಸಂ:0821-2516579 ನ್ನು ಸಂಪರ್ಕಿಸಬಹುದು.

# 6 ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಮಂಡ್ಯ**: ಮಂಡ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆ ಆರ್ ಪೇಟೆ ತಾಲ್ಲೂಕಿನ ಆದಿಹಳ್ಳಿಯಲ್ಲಿರುವ 01 ಡಾ. ಎ. ಪಿ. ಜೆ ಅಬ್ದುಲ್ ಕಲಾಂ ವಸತಿ ಶಾಲೆ , ಶ್ರೀರಂಗಪಟ್ಟಣದ 01 ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿ 2024-25 ನೇ ಶೈಕ್ಷಣಿಕ ಸಾಲಿನಲ್ಲಿ 6 ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ದಿಸ್ಟ್, ಸಿಖ್ ಮತ್ತು ಪಾರ್ಶಿ ಅರ್ಹ ವಿದ್ಯಾರ್ಥಿಗಳು ಮತ್ತು ಪ. ಜಾತಿ/ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು https://sevasindhuservices.karnataka.gov.in ಸೇವಾಸಿಂಧು ಪೋರ್ಟಲ್ ನಲ್ಲಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಲು ಮಾರ್ಚ್ 15 ಕೊನೆಯ ದಿನಾಂಕವಾಗಿದೆ. ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್ಸೈಟ್ https://dom.karnataka.gov.in ನಲ್ಲಿ ಪಡೆಯತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಸಹಾಯವಾಣಿ 8277799990, 080-22535902 ಮತ್ತು ಜಿಲ್ಲಾ ಕಛೇರಿ, ದೂ.ಸಂ. 08232-297240 ಅನ್ನು ಅಥವಾ ಜಿಲ್ಲಾ ಕಛೇರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ನಿಮ್ಮ ಹತ್ತಿರದ ಅಲ್ಪಸಂಖ್ಯಾತರ ತಾಲೂಕು ಮಾಹಿತಿಕೇಂದ್ರಗಳನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರಿಗೆ ಬ್ಯಾಂಕ್ ಮೋಸ

**ಮೈಸೂರು :** ಜಿಲ್ಲೆಯ ರೈತರಿಗೆ ವಂಚನೆ ಮಾಡಿರುವ ಕರೂರು ವೈಶ್ಯ ಬ್ಯಾಂಕ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳ ಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಪ್ರತಿಭಟನೆ ನಡೆಸಿದರು.

ನಗರದ ಮರಿಮಲ್ಲಪ್ಪ ಕಾಲೇಜು ಬಳಿಯ ಕರೂರು ವೈಶ್ಯ ಬ್ಯಾಂಕ್ ಮುಂಭಾಗ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

**» ಕರ್ನಾಟಕ ರಾಜ್ಯ ರೈತ ಸಂಘ ಪ್ರತಿಭಟನೆ**

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ನಾಗೇಂದ್ರ, ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಪಿರಿಯಾಪಟ್ಟಣದ ನೂರಾರು ರೈತರಿಗೆ ಈ ಬ್ಯಾಕ್ ಮೋಸ ಮಾಡಿದೆ ಎಂದು ಆರೋಪಿಸಿದರು.

4ಲಕ್ಷ ರೂ ಸಾಲ ನೀಡುವುದಾಗಿ ಹೇಳಿ ಕೇವಲ 2ಲಕ್ಷ ಮಾತ್ರ ರೈತರಿಗೆ ನೀಡಲಾಗಿದೆ. ಉಳಿದ 2ಲಕ್ಷವನ್ನು ಮಧ್ಯವರ್ತಿಗಳು ಹಾಗೂ ಬ್ಯಾಂಕ್‌ನ ಅಧಿಕಾರಿಗಳು ಲಪಟಾಯಿಸಿದ್ದಾರೆ.

ಈ ಸಂಬಂಧ ಸಂಬಂಧಪಟ್ಟ ಅಧೀಕಾರಿಗಳನ್ನು ಕೆಲಸದಿಂದ ವಜಾ ಮಾಡಲಾಗಿತ್ತು. ಆದರೇ ಇದೀಗ ಸದರಿ ಬ್ಯಾಂಕ್ ನ್ಯಾಯಾಲಯದ ಮುಂದೆ ದಾವೆ



ಹೂಡಿ, ರೈತರು ಸಂಪೂರ್ಣ ಸಾಲ ತೀರುಸುವಂತೆ ರೈತರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ಕೂಡಲೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಒತ್ತಾಯ ಪತ್ರವನ್ನು ರಾವಾನೆ ಮಾಡಲಾಗಿದೆ ಎಂದು ನಾಗೇಂದ್ರ ತಿಳಿಸಿದರು.

ಪ್ರಸನ್ನ ಎನ್ ಗೌಡ, ಎ.ಎಲ್.ಕೆಂಪುಗೌಡ, ಬಸವರಾಜು, ಸಿರುಮಲ್ಲು ಸಿದ್ದಪ್ಪ , ಆನಂದ್ ಪ್ರಭಾಕರ್, ಮಹದೇವ್ ನಾಯಕ, ಮಂಡಕಳ್ಳಿ ಮಹೇಶ್, ಹೆಜ್ಜಿಗೆ ಪ್ರಕಾಶ್, ನಾಗನಹಳ್ಳಿ ವಿಜಯೇಂದ್ರ, ರಾಘವೇಂದ್ರ, ಚಂದ್ರಶೇಖರ ಇದ್ದರು.

# ಉದ್ಯೋಗ ಕೌಶಲ್ಯ ತರಬೇತಿ ಕಾರ್ಯಕ್ರಮ

**ಮೈಸೂರು :** ಮೈಸೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಎಂ. ಎಂ. ಕೆ. ಮತ್ತು ಎಸ್. ಡಿ. ಎಂ. ಮಹಿಳಾ ಕಾಲೇಜಿನಲ್ಲಿ, ಮಹಿಂದ್ರಾ ಪ್ರೈಡ್ ಕ್ಲಾಸ್ರೂಮ್ ಮತ್ತು ನಾಂದಿ ಫೌಂಡೇಶನ್ ಸಹಯೋಗದಲ್ಲಿ ಅಂತಿಮ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ, ಆರು ದಿನಗಳ ಉದ್ಯೋಗ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊಫೆಸರ್ ಸಾಯಿನಾಥ್ ಮಲ್ಲಿಗೆಮಾಡು ರವರು ಉದ್ಘಾಟಿಸಿ ಉದ್ಯೋಗ ಕೌಶಲ್ಯ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮತ್ತು ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯಗಳ ಅಗತ್ಯತೆಗಳ ಕುರಿತು ವಿದ್ಯಾರ್ಥಿನಿಯರಿಗೆ ತಿಳಿಸಿಕೊಟ್ಟರು. ಆರು ದಿನಗಳ ಕಾರ್ಯಕ್ರಮದಲ್ಲಿ ಉದ್ಯೋಗ ಕೌಶಲ್ಯಗಳಾದ ಪ್ರಾಬ್ಲಮ್ ಸಾಲ್ವಿಂಗ್, ಟೈಮ್ ಮ್ಯಾನೇಜ್ಮೆಂಟ್, ಎಫೆಕ್ಟಿವ್ ಸ್ಪೀಕಿಂಗ್, ಪಬ್ಲಿಕ್ ಸ್ಪೀಕಿಂಗ್, ಬಾಡಿ ಲ್ಯಾಂಗ್ವೇಜ್, ಪ್ರೆಸೆಂಟೇಷನ್ ಸ್ಕಿಲ್ಸ್, ಗ್ರೂಪ್ ಡಿಸ್ಕಶನ್, ಪರ್ಸನಲ್ ಇಂಟರ್ವ್ಯೂ ಮತ್ತು ಇತರ ಕೌಶಲ್ಯಗಳ ಬಗ್ಗೆ ಸುಮಾರು 316 ವಿದ್ಯಾರ್ಥಿನಿಯರಿಗೆ ತರಬೇತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರಾದ ಪ್ರೊಫೆಸರ್ ಎನ್. ಭಾರತೀ, ನಾಂದಿ ಫೌಂಡೇಶನ್ ಸಂಸ್ಥೆಯ ತರಬೇತುದಾರರಾದ, ಆದಿತ್ಯ, ದಾಮೋದರನ್, ಸಾಧಿಕಾ ಬಾನು,ಕೀರ್ತಿ ಶೆಟ್ಟಿ, ಲೀನಾ ರಾವ್, ಲಕ್ಷ್ಮಿ, ಕಾಲೇಜಿನ ಐಕ್ಯೂಎಸಿ ಸಂಚಾಲಕಿಯಾದ ಶ್ರೀಮತಿ ಕೆ. ಎಸ್. ಸುಕೃತ, ಪ್ಲೇಸ್ಮೆಂಟ್ ಅಧಿಕಾರಿಯಾದ ಶ್ರೀ ಮಹದೇವಸ್ವಾಮಿ ಎಸ್, ಪ್ಲೇಸ್ಮೆಂಟ್ ಸಮಿತಿಯ ಸದಸ್ಯರುಗಳಾದ, ಶ್ರೀಮತಿ ರಾಜರಾಜೇಶ್ವರಿ, ಶ್ರೀಮತಿ ವಿದ್ಯಾ ಎಂ. ಆರ್., ಡಾ. ಸುಧಾಮಣಿ, ಡಾ. ಎನ್ ದಿಲೀಪ್, ಕಾವ್ಯಶ್ರೀ ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.

# ಅಪಾಯದಲ್ಲಿದ್ದ ಹಿಂದೂ ಸಂಸ್ಕೃತಿಗೆ ಆಸರೆಯಾದವರು ಶಿವಾಜಿ

**ಚಿಕ್ಕಬಳ್ಳಾಪುರ:** ಭಾರತದಲ್ಲಿ ಹಿಂದೂ ಸಂಸ್ಕೃತಿ ಅಪಾಯಕ್ಕೆ ಸಿಲುಕಿದ್ದ ಸಂದರ್ಭದಲ್ಲಿ ಆಸರೆಯಾಗಿ ನಿಂತು ದೇಶವನ್ನು ಉಳಿಸಿದವರು ಶ್ರೀ ಛತ್ರಪತಿ ಶಿವಾಜಿ ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಬಣ್ಣಿಸಿದರು.

ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಶ್ರೀಛತ್ರಪತಿ ಶಿವಾಜಿ ರವರ ಜಯಂತಿಯ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಅವರು ಮಾತನಾಡಿದರು.

ಭಾರತ ದೇಶವನ್ನು ವಿದೇಶಿಯರ ಆಳ್ವಿಕೆಯ ಸಮಯದಲ್ಲಿ ಹಾಗೂ ಸಂಸ್ಕೃತಿ ನಶಿಸುವ ವೇಳೆ ಮಹರಾಷ್ಟ್ರದ ಸ್ಥಳಿಯ ಕಾಡು ಪ್ರದೇಶಗಳಲ್ಲಿ ಸೈನ್ಯ ಕಟ್ಟಿ ನಮ್ಮ ಸಂಸ್ಕೃತಿ ಉಳಿವಿಗಾಗಿ ಹೋರಾಡಿದ ಸಾಮ್ರಾಟರಲ್ಲಿ ಮಹಾನ್ ವೀರ ಛತ್ರಪತಿ ಶಿವಾಜಿಯು ಪ್ರಮುಖರು. ಉತ್ತಮ ಯುದ್ದ ನೀತಿಗಳನ್ನು ಅಳವಡಿಸಿಕೊಂಡು ಖ್ಯಾತರು ಅದರಲ್ಲೂ ಗೇರಿಲ್ಲ ಯುದ್ದಕ್ಕೆ ಹೆಸರಾದ ಛತ್ರಪತಿ ಶಿವಾಜಿಯು ಭಾರತಾಂಬೆಯ ನಾಡ ನುಡಿಬೆಳವಣಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣಿಭೂತರಾದವರು ಶಿವಾಜಿ. ಸೂಕ್ತ ಆಡಳಿತ ವ್ಯವಸ್ಥೆಗಾಗಿ ಹಲವು ಸುಧಾರಣೆಗಳನ್ನ ತಂದು ಭಾರತದ ಇತಿಹಾಸದಲ್ಲಿ ಅಗ್ರ ಸ್ಥಾನವನ್ನು ಗಳಿಸಿದ್ದಾರೆ



ಎಂದು ತಿಳಿಸಿದರು. ಅಪರ ಜಿಲ್ಲಾಧಿಕಾರಿ ಡಾ.ಎನ್ ತಿಪ್ಪೇಸ್ವಾಮಿ ಮಾತನಾಡಿ ಛತ್ರಪತಿ ಶಿವಾಜಿಯು ಕ್ರಿ. ಶಕ 1630 ರಲ್ಲಿ ಜನಿಸಿದರು. 16ನೇ ವಯಸ್ಸಿಗೆ ಯುದ್ದ ಮಾಡಲು ಆರಂಭಿಸಿ ಹಲವು ಯುದ್ದಗಳಲ್ಲಿ ಗೆದ್ದರು ಸಹ 1674 ರವರೆಗೂ ಅಧಿಕಾರಕ್ಕೆ ಬರಲಿಲ್ಲ.ಅವರಲ್ಲಿ ಅಧಿಕಾರದ ದುರಾಸೆ ಇರಲಿಲ್ಲ.ಅವರ ತಾಯಿಯ ಆಶಯ, ಜನಸಾಮಾನ್ಯರ ಆಶಯಕ್ಕೋಸ್ಕರ ಸಾಮ್ರಾಟರಾಗಿ ಅಧಿಕಾರಕ್ಕೆ ಬಂದರು.ಮೊಘಲರ ಔರಂಗಜೇಬನ ದಾಳಿಗೆ ಅಡ್ಡನಿಂತು ದಕ್ಷಿಣ ಭಾರತ ರಕ್ಷಣೆಯನ್ನು ಮಾಡುವ ಜೊತೆಗೆ ಬ್ರಿಟಿಷ್ ಪರಕೀಯ ಆಳ್ವಿಕೆಯನ್ನು ಎದುರಿಸಿದ ಮಹಾ ಧೈರ್ಯಶಾಲಿ ಹಾಗೂ ಹಿಂದು ಸಾಮ್ರಾಜ್ಯದ ಹೃದಯ ಸಾಮ್ರಾಟ ಎಂದು ಬಣ್ಣಿಸಿದರು. ಒಂದು ಭಾಷೆ, ಸಂಸ್ಕೃತಿ, ನಮ್ಮ ದೇಶವನ್ನು ಉಳಿಸುವಲ್ಲಿ ಅಮೋಘ ಪಾತ್ರವಹಿಸಿದವರು ಛತ್ರಪತಿ ಶಿವಾಜಿ ಎಂದು ಅವರು ತಿಳಿಸಿದರು. ಉಪನ್ಯಾಸ ನೀಡಿದ ಅನಿಲ್ ಕುಮಾರ್ ಅವರು ಮಾತನಾಡಿ, ದಾದಾಜಿ ಕೊಂಡದೇವನ ಜೊತೆ ಸೇರಿ ಕತ್ತಿವರಸೆ, ಕುದುರೆ ಸವಾರಿ, ಬಿಲ್ ವಿದ್ಯೆ ಸೇರಿದಂತೆ ಇನ್ನಿತರೇ ಯುದ್ದ ಕಲೆಗಳನ್ನು ಛತ್ರಪತಿ ಶಿವಾಜಿರವರು ಕಲಿತರು. 16 ನೇ ವಯಸ್ಸಿಗೆ 500 ಜನ ಮಾವಳ ಪೂರರನ್ನು ಸೇರಿಸಿ 3000 ಸೈನಿಕರ ಒಂದು ಪಡೆಯನ್ನು ಸೋಲಿಸಿ ಮೊದಲಿಗೆ ತೋರಣಗಢವನ್ನು ವಶಪಡಿಸಿಕೊಂಡರು. ಅವರ ಜೀವಿತಾವಧಿಯಲ್ಲಿ 72 ದೊಡ್ಡ ಯುದ್ದಗಳು, 128 ಚಿಕ್ಕ ಯುದ್ದಗಳನ್ನು ಮಾಡಿ 300 ಕೋಟೆಗಳನ್ನು ಗೆದ್ದ ಏಕೈಕ ರಾಜ. 1674ರಲ್ಲಿ ಸಿಂಹಾಸನ ಸ್ವೀಕರಿಸಿ ಹಿಂದೂ ಸಾಮ್ರಾಜ್ಯವನ್ನು ಉಳಿಸಿ ಬೆಳೆಸಿದ ಕೀರ್ತಿಗೆ ಅವರು ಪಾತ್ರರಾದರು ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮುದಾಯ ಮುಖಂಡರಿಗೆ ಸನ್ಮಾನಿಸಲಾಯಿತು. ಗಾಯನ ಕಲಾವಿದರಾದ ಗ.ನ. ಅಶ್ವತ್ಥ್ ಅವರ ಅನನ್ಯ ಕಲಾ ತಂಡ ಗೀತ ಗಾಯನ ನಡೆಸಿಕೊಟ್ಟು ಗಮನ ಸೆಳೆದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಸಮುದಾಯದ ಮುಖಂಡರಾದ ಕೆ. ಆರ್. ಸುರೇಶ್ ಬಾಬು, ಈಶ್ವರ್ ರಾವ್, ಸಂದೀಪ್, ಜಯ ಮುನ್ನರಾವ್, ಶ್ರೀನಿವಾಸ ಸೇರಿದಂತೆ ಮತ್ತಿತರರು ಇದ್ದರು.

**ನಗರಸಭಾ ಕಾರ್ಯಾಲಯ, ಹುಣಸೂರು**
**ಮೈಸೂರು ಜಿಲ್ಲೆ - 571105**
**E-mail : ka.hunsur.cmc@gmail.com Ph: 252048**
**ಸಂ:DMA/2023-24/SE2139&SE0647/CALL_2 ದಿ: 16.02.2024**

**ಟೆಂಡರ್ ಪ್ರಕಟಣೆ (ಕೆಪಿಪಿಪಿ ಪದ್ಧತಿಯಲ್ಲಿ)**

ಹುಣಸೂರು ನಗರಸಭೆಯ ಆರೋಗ್ಯ ಶಾಖೆಯಿಂದ ಕೆಳಕಂಡ ಸೇವೆಗಳನ್ನು ಒದಗಿಸಲು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್: http://kppp.karnataka.gov.in ಮುಖಾಂತರ ಟೆಂಡರ್ ನಲ್ಲಿ ಭಾಗವಹಿಸಬಹುದು. **1)** ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಲೋಡರ್ಸ್ ಸೇವೆ ಒದಗಿಸಲು DMA/2023-24/SE2139 (ಅಂದಾಜು ಮೊತ್ತ - 42.20 ಲಕ್ಷ) **2)** ಹುಣಸೂರು ನಗರಸಭಾ ವ್ಯಾಪ್ತಿಯ ಬೀದಿ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಮಾಡುವುದು (Animal Birth Control) DMA/2023-24/SE0647/CALL-2 (ಅಂದಾಜು-3.00 ಲಕ್ಷ) ಟೆಂಡರ್ ಫಾರಂಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿ: 05.03.2024 ಅಪರಾಹ್ನ 05.30 ಗಂಟೆ. ಟೆಂಡರ್ ತೆರೆಯುವ ದಿ: 07.03.2024 ಬೆಳಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ಆರೋಗ್ಯ ಶಾಖೆಯನ್ನು ಸಂಪರ್ಕಿಸುವುದು.

**ಸಹಿ/- ಪೌರಾಯುಕ್ತರು**
**ನಗರಸಭೆ, ಹುಣಸೂರು**

**ಸಹಿ/- ಆಡಳಿತಾಧಿಕಾರಿಗಳು**
**ನಗರಸಭೆ, ಹುಣಸೂರು**

DIPR/DDMYS/KSMCA/1092/2023-24

## 6ನೇ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

**ಚಿಕ್ಕಬಳ್ಳಾಪುರ:** ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪೆರೇಸಂದ್ರ, ಚಿಕ್ಕಬಳ್ಳಾಪುರ ತಾಲ್ಲೂಕು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬಾಗೇಪಲ್ಲಿ (ರಾಜ್ಯ ಪಠ್ಯಕ್ರಮ) ಹಾಗೂ ಡಾ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ (ಸಿ.ಬಿ.ಎಸ್.ಸಿ) ಮಸ್ತೇನಹಳ್ಳಿ ಚಿಂತಾಮಣಿ ತಾಲ್ಲೂಕು ಇಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಆನ್ ಲೈನ್ ಸೇವಾಸಿಂಧು ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು https://sevasindhuservices.karnataka.gov.in/ ಲಿಂಕ್ ಮೂಲಕ ದಿನಾಂಕ 15-03-2024 ರೊಳಗಾಗಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಸದರಿ ಶಾಲೆಗಳಲ್ಲಿ ಶೇ.75ರಷ್ಟು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ (ಮುಸ್ಲಿಂ, ಕ್ರೈಸ್ತ, ಜೈನ್, ಸಿಖ್, ಪಾರ್ಸಿ, ಮತ್ತು ಬೌದ್ಧ) ಹಾಗೂ ಶೇ 25ರಷ್ಟು ಹಿಂದುಳಿದ ವರ್ಗ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಅನುಗುಣವಾಗಿ ಹಾಗೂ ರೋಷ್ಟರ್ ನಿಯಮದಂತೆ ಪ್ರವೇಶ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತಭವನ, ಎಸ್.ಎ8, 2ನೇ ಮಹಡಿ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ. ದೂರವಾಣಿ:08156-277049. ಪ್ರಾಂಶುಪಾಲರು, ಪೆರೇಸಂದ್ರ ಮತ್ತು ಬಾಗೇಪಲ್ಲಿ-9686200416, ಪ್ರಾಂಶುಪಾಲರು, ಮಸ್ತೇನಹಳ್ಳಿ-9972408072 ಹಾಗೂ ಚಿಂತಾಮಣಿ ಮಾಹಿತಿ ಕೇಂದ್ರ-8746882888, ಶಿಡ್ಲಘಟ್ಟ-9739426396, ಗೌರಿಬಿದನೂರು-8867760346, ಬಾಗೇಪಲ್ಲಿ-8123318947, ಗುಡಿಬಂಡೆ-7204915866, ಚಿಕ್ಕಬಳ್ಳಾಪುರ-7204453320 ಇಲ್ಲಿಗೆ ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 26 ರಿಂದ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ

**ರಾಮನಗರ:** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇದೇ ಫೆ. 26 ಮತ್ತು 27 ರಂದು ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳ ಹಾಗೂ ಯುವ ಸಮೃದ್ಧಿ ಸಮ್ಮೇಳನವನ್ನು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಇಲಾಖೆಯ ಸಚಿವರ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಎಸ್.ಎಸ್.ಎಲ್.ಸಿ, ಐ.ಟಿ.ಐ, ಡಿಪ್ಲೋಮೊ, ಪದವಿ, ಪದವಿ ಪೂರ್ವ, ಇಂಜಿನಿಯರಿಂಗ್ ಮತ್ತು ಸ್ನಾತಕೋತ್ತರ ಪದವಿ ಇತ್ಯಾದಿ ಕೋರ್ಸುಗಳಲ್ಲಿ ಅರ್ಹರಿರುವ ಅಭ್ಯರ್ಥಿಗಳಿಗೆ ಸೂಕ್ತವಾದ ಉದ್ಯೋಗವಕಾಶಗಳನ್ನು ಒದಗಿಸಲು ಹಿತದೃಷ್ಠಿಯಿಂದ 500ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸುತ್ತಿವೆ. ಈ ಮೇಳದಲ್ಲಿ ಹೆಚ್ಚಿನ ಉದ್ಯೋಗದಾತರು ಕೂಡ ನೋಂದಾಯಿಸಿಕೊಂಡು ನಿರುದ್ಯೋಗಿಗಳಿಗೆ ಉದ್ಯೋಗವಕಾಶವನ್ನು ಒದಗಿಸಲು ಸಹಕರಿಸಬೇಕು. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಹೆಚ್ಚಿನ ರೀತಿಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಕರ್ನಾಟಕ ಕೌಶಲ್ಯಭಿವೃದ್ಧಿ ನಿಗಮದ ವತಿಯಿಂದ ಆಯೋಜಿಸಿರುವ ಉದ್ಯೋಗಮೇಳಕ್ಕೆ ಆಗಮಿಸುವ ಅಭ್ಯರ್ಥಿಗಳು ತಮ್ಮಪೂರ್ಣ ಮಾಹಿತಿಯನ್ನು https://skillconnect.kaushalkar.com/ ನಲ್ಲಿ ನೋಂದಾವಣೆ ಮಾಡಿಕೊಂಡು ಖುದ್ದಾಗಿ ಉದ್ಯೋಗಮೇಳಕ್ಕೆ ಹಾಜರಾಗುವಂತೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವಾಜಿ ಭಾವಚಿತ್ರಕ್ಕೆ ಪುಷ್ಪ ಮಾಲಾರ್ಪಣೆ

ಕೋಲಾರ : ಜಿಲ್ಲಾಡಳಿತ ಜಿಲ್ಲಾ ,ಪಂಚಾಯತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ರಂಗಮಂದಿರದಲ್ಲಿ ಸೋಮವಾರದಂದು ಛತ್ರಪತಿ ಶ್ರೀ ಶಿವಾಜಿ ಜಯಂತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಗೀತಾ ಮತ್ತು ಸಮುದಾಯದ ಮುಖಂಡರು ಛತ್ರಪತಿ ಶ್ರೀ ಶಿವಾಜಿ ಭಾವಚಿತ್ರಕ್ಕೆ ಪುಷ್ಪ ಮಾಲಾರ್ಪಣೆ ಮಾಡಿ ಜ್ಯೋತಿ ಬೆಳಗಿಸಿ ವಿಶೇಷ ಪೂಜೆ ಮಾಡಿ ಸಿಹಿ ಹಂಚುವ ಮೂಲಕ ಜಯಂತಿ ಆಚರಣೆ ಮಾಡಿದರು.ನಂತರ ಸಮುದಾಯದ ಮುಖಂಡರು ಮಾತನಾಡಿ ರಾಜಕೀಯ ವ್ಯಕ್ತಿಗಳು ಮತ್ತು ಅಧಿಕಾರಿಗಳು ಎಲ್ಲಾ ಸಮುದಾಯದ ಜನರನ್ನು ಒಂದೇ ರೀತಿಯಲ್ಲಿ ಕಾಣಬೇಕು. ಕೆಲ ಜಯಂತಿ ಕಾರ್ಯಕ್ರಮಗಳಿಗೆ ಆಗಮಿಸುವುದು ಕಡಿಮೆ ಜನಾಂಗ ಜಯಂತಿ ಕಾರ್ಯಕ್ರಮಗಳಿಗೆ ಆಗಮಿಸದೆ ಇರುವಂತಹ ಕೆಲಸ ಮಾಡಬಾರದು. ಅದೇ ರೀತಿಯಲ್ಲಿ ಅಧಿಕಾರಿಗಳು ಸಹ ಆಗಮಿಸಿ ಸಮುದಾಯದ ನಾಯಕರ ಕುರಿತು ಜನಾಂಗದವರಿಗೆ ತಿಳಿಸಬೇಕು. ನಮ್ಮ ಶಿವಾಜಿ ಜಯಂತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಬಿಟ್ಟರೆ ಬೇರೆ ಯಾವ ಅಧಿಕಾರಿಯು ಇಲ್ಲ ರಾಜಕೀಯ ವ್ಯಕ್ತಿಯು ಇಲ್ಲ. ಇದು ನಮಗೆ ಬೇಸರ ತರುತ್ತಿದೆ ಎಂದರು ಕರ್ನಾಟಕ ಮರಾಠ ಕ್ಷತ್ರಿಯ ಪರಿಷತ್ ಅಧ್ಯಕ್ಷ ಶ್ರೀನಿವಾಸ್ ರಾವ್ ಕದಂ, ರಾಜ್ಯ ಉಪಾಧ್ಯಕ್ಷ ರಾಜೇಶ್ ಸಿಂಗ್, ಜಿಲ್ಲಾ ಕಾರ್ಯದರ್ಶಿ ಪಾಲ್ಗುಣ, ಧನಂಜಯ ರಾಜ್, ರಾಜಾರಾಮ್, ವೇಣುಗೋಪಾಲ್ ರಾವ್ , ಸುಧಾಕರ್ ರಾವ್, ವಿನೋದ್, ಚೈತ್ರಾ, ಆಶಾ, ವಿವೇಕಾನಂದ, ಪ್ರಕಾಶ್ ರಾವ್, ಧಾನೇಶ್ ರಾವ್ ಮುಕುಂದ ರಾವ್ , ಜ್ಞಾನ ಮೂರ್ತಿ ಇದ್ದರು .

## 24ಕ್ಕೆ ಬ್ರಹ್ಮರಥೋತ್ಸವ

**ಚಿಕ್ಕಬಳ್ಳಾಪುರ:** ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ ಹೋಬಳಿ ತಲಕಾಯಲಬೆಟ್ಟ (ಟಿ.ವೆಂಕಟಾಪುರ) ಗ್ರಾಮದ ಶ್ರೀ ಭೂನೀಲಾ ಸಮೇತ ವೆಂಕಟರಮಣಸ್ವಾಮಿ ದೇವಾಲಯದ ಜಾತ್ರಾ, ರಥೋತ್ಸವವು ಮಾರ್ಚ್ 01 ರವರೆಗೆ ನಡೆಯಲಿದ್ದು, ಬ್ರಹ್ಮರಥೋತ್ಸವವು ಫೆಬ್ರವರಿ 24 ರಂದು ನಡೆಯಲಿದೆ ಎಂದು ಶಿಡ್ಲಘಟ್ಟ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿವಾಜಿಯ ಆಡಳಿತದ ಸೂತ್ರಗಳು, ನಾಯಕತ್ವದ ಸೂತ್ರಗಳು ಪ್ರೇರಕ

**ಚಾಮರಾಜನಗರ:** ಶಿವಾಜಿಯ ನಾಯಕತ್ವ , ಸ್ವರಾಜ್ಯದ ಶ್ರೇಷ್ಠ ಚಿಂತನೆಯ ಹುಟ್ಟು ನಾಯಕತ್ವದ ಗುಣಗಳನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು. ರಾಷ್ಟ್ರ ನಿರ್ಮಾಣಕ್ಕೆ ಶಿವಾಜಿಯ ಆಡಳಿತದ ಸೂತ್ರಗಳು ಹಾಗೂ ನಾಯಕತ್ವದ ಸೂತ್ರಗಳು ಬಹಳ ಪ್ರೇರಕವಾದದ್ದು ಎಂದು ಸಂಸ್ಕೃತಿ ಚಿಂತಕರಾದ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಅವರು ಜೈ ಹಿಂದ್ ಪ್ರತಿಷ್ಠಾನ ಹಾಗೂ ಋಗ್ವೇದಿ ಯೂಥ್ ಕ್ಲಬ್ ನಗರದ ಜೈ ಹಿಂದ್ ಕಟ್ಟೆಯಲ್ಲಿ ಹಮ್ಮಿಕೊಂಡಿದ್ದ ಶಿವಾಜಿ ಜಯಂತಿಯ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಶಿವಾಜಿಯಂತಹ ಶ್ರೇಷ್ಠ ವ್ಯಕ್ತಿ ಇತಿಹಾಸದಲ್ಲಿ ಕಾಣಲು ಸಾಧ್ಯವಿಲ್ಲ. ಅವರ ಸಾಮ್ರಾಜ್ಯ ನಿರ್ಮಾಣ ,ರಾಷ್ಟ್ರೀಯ ಪರಿಕಲ್ಪನೆ ಹಿಂದೂ ಸಾಮ್ರಾಜ್ಯದ ಚಿಂತನೆ, ಎಲ್ಲ ಧರ್ಮಗಳ ಜನರನ್ನ ಗೌರವಿಸುವ ಬಹುದೊಡ್ಡ ಗುಣವನ್ನು ಹೊಂದಿದ್ದ ಶಿವಾಜಿ ಗೋ ಸಂಪತ್ತು ,ನಾಡ ಸಂಪತ್ತು, ಸ್ತ್ರೀ ಗೌರವ, ಶಕ್ತಿ ಹಾಗೂ ಗೌರವಕ್ಕೆ ಹಾಗೂ ಕಂದಾಯ ವ್ಯವಸ್ಥೆಗೆ ,ಸೈನ್ಯದ ಚಿಂತನೆ ಹಾಗೂ ನೌಕಾಪಡೆಯ ಶ್ರೇಷ್ಠವಾದ ಪರಿಕಲ್ಪನೆಯ ಮೂಲಕ ಆಡಳಿತವನ್ನು ನಡೆಸಿದ ಮಹಾನ್ ನಾಯಕರು. ಉತ್ತರ ಭಾರತದ ಮೊಗಲರು ಹಾಗೂ ದಕ್ಷಿಣದ ಬಿಜಾಪುರ ,ಗೋಲ್ಕೊಂಡ ,ಅಹಮದ್ ನಗರ ಮುಂತಾದ ಅನೇಕ ರಾಜರುಗಳನ್ನ ಸೋಲಿಸುವ ಮೂಲಕ ಇಡೀ ಭಾರತದಲ್ಲಿಯುದ್ಧ




ಕೌಶಲ್ಯ ಹಾಗೂ ಬುದ್ಧಿವಂತಿಕೆಗೆ ಹೆಸರಾದ ಶಿವಾಜಿಯ ಆಡಳಿತ ಸೂತ್ರಗಳು ಇಂದಿಗೂ ಎಲ್ಲ ದೇಶಗಳಿಗೂ ಪ್ರೇರಣೆಯಾಗಿದೆ. ರಾಷ್ಟ್ರ ನಿರ್ಮಾಣ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಶಿವಾಜಿಯ ಚಿಂತನೆಗಳು ಮಹತ್ವದ ಪರಿಣಾಮವನ್ನು ಬೀರುತ್ತಿದೆ ಎಂದು ತಿಳಿಸಿದರು.ವಿಶ್ವದ ನಾಯಕತ್ವದ ಗುಣ ಬೆಳೆಸಿಕೊಳ್ಳಲು ಶಿವಾಜಿಯ ಇತಿಹಾಸ ಅಧ್ಯಯನವನ್ನು ಆಡಳಿತಗಾರರು ವಿಶೇಷವಾಗಿ ತಿಳಿಯಬೇಕು ಎಂದು ಋಗ್ವೇದಿ.ತಿಳಿಸಿದರು.

ಶಿವಾಜಿಯ ಭಾವಚಿತ್ರಕ್ಕೆ ಹಾಗೂ ಶಿವಾಜಿಯ ಪುಸ್ತಕಗಳಿಗೆ ಪುಷ್ಪವನ್ನು ಸಲ್ಲಿಸುವ ಮೂಲಕ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬಿಕೆ ಆರಾಧ್ಯ ಉದ್ಘಾಟಿಸಿದರು. ಶಿವಾಜಿ ಆಧ್ಯಾತ್ಮದ ಗುಣ ವಿಶೇಷಗಳನ್ನು ಗುರುಗಳು ಹಾಗೂ ತಾಯಿ ಜೀಜಾಬಾಯಿ ರವರಿಂದ ಅರಿತು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ಶಿವಾಜಿ ಮಹಾನ್ ನಾಯಕರಾಗಲು ಅವರ ದೈವ ಭಕ್ತಿ ಹಾಗೂ ಪ್ರಜೆಗಳ ಬಗ್ಗೆ ಗೌರವ ಹಾಗೂ ಸಾಮರ್ಥ್ಯಗಳೆ ಕಾರಣವೆಂದು ತಿಳಿಸಿ ,ಶಿವಾಜಿ ಮಹಾರಾಜರು ಇಡೀ ಭಾರತದ ನವಶಕ್ತಿಯ ಚೈತನ್ಯ. ಯುವಶಕ್ತಿಗೆ ಶಿವಾಜಿ ಯಂತಹ ಆದರ್ಶ ವಿಚಾರಗಳನ್ನು ತಿಳಿಸುವ ಕಾರ್ಯವನ್ನು ನಾವೆಲ್ಲರೂ ಸೇರಿ ಮಾಡೋಣ. ಜೈಹಿಂದ್ ಪ್ರತಿಷ್ಠಾನ ರಾಷ್ಟ್ರೀಯ ನಾಯಕರನ್ನು ಗೌರವಿಸುವ ,ಸಂಸ್ಕೃತಿ ಪರಂಪರೆ ಕಟ್ಟುವ ಕಾರ್ಯವನ್ನು ಮಾಡುತ್ತಿರುವುದು ಸಾರ್ವಜನಿಕರಿಗೆ , ವಿದ್ಯಾರ್ಥಿಗಳು ಹಾಗೂ ಯುವಕರಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ಜೈ ಹಿಂದ್ ಪ್ರತಿಷ್ಠಾನದ ಸದಸ್ಯರಾದ ಮಾಲ ರವರು ಮಾತನಾಡಿ ಶಿವಾಜಿ ಆಡಳಿತದಲ್ಲಿ ಸ್ತ್ರೀಯರಿಗೆ ವಿಶೇಷವಾದ ಗೌರವ ಸಂರಕ್ಷಣೆ ಇತ್ತು. ತನ್ನ ಸೈನಿಕರಿಗೂ ಯುದ್ಧದ ಸಂದರ್ಭದಲ್ಲಿ ಮತ್ತು ನಂತರದಲ್ಲಿ ಯಾವುದೇ ರೀತಿಯಲ್ಲೂ ಯಾವುದೇ ಸ್ತ್ರೀಯರಿಗೂ ತೊಂದರೆ ಉಂಟು ಮಾಡಬಾರದೆಂಬ ಕಾನೂನನ್ನು ಮಾಡಿದ್ದು ಇತಿಹಾಸದಲ್ಲಿ ನಾವು ಕಾಣಬಹುದು ಎಂದರು. ಮುಖಂಡರಾದ ರವಿ, ನಾಗರಿಕರಾದ ಮಹದೇವು ನಂಜುಂಡಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

# ಶೀಘ್ರ 4000 ಮನೆ ಮಂಜೂರು

## ಚಿಕ್ಕನಾಯಕನಹಳ್ಳಿ ಕ್ಷೇತ್ರಕ್ಕೆ ಅನುಕೂಲ | ಶಾಸಕ ಸುರೇಶ್‌ಬಾಬು ಹೇಳಿಕೆ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಕ್ಕೆ ಈಗಾಗಲೇ ಒಂದೊಂದು ಪಂಚಾಯ್ತಿಗೆ 80 ತಕ್ಕೂ ಹೆಚ್ಚು ಜನರಲ್ ಮನೆ ಮಂಜೂರು ಮಾಡಿಸಿದ್ದು ಇನ್ನೂ 4 ಸಾವಿರ ಮನೆಗೆ ವಸತಿ ಸಚಿವರಲ್ಲಿ ಬೇಡಿಕೆ ಸಲ್ಲಿಸಿದ್ದು ಕೊಡುವ ಭರವಸೆ ನೀಡಿದ್ದಾರೆ ಎಂದು ಶಾಸಕ ಸಿ.ಬಿ.ಸುರೇಶ್ ಬಾಬು ತಿಳಿಸಿದರು.

ಹುಳಿಯಾರು ಹೋಬಳಿಯ ಕೋರಗೆರೆ ಗ್ರಾಮ ಪಂಚಾಯ್ತಿಯಿಂದ ಅಮೃತ ಗ್ರಾಮ ಪಂಚಾಯ್ತಿ ಹಾಗೂ 15 ನೇ ಹಣಕಾಸು ಯೋಜನೆಯಡಿ ನಿರ್ಮಿಸಲಾಗಿರುವ ಸಭಾಂಗಣ ಕಟ್ಟಡವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಚಿಕ್ಕನಾಯಕನಹಳ್ಳಿ ಕ್ಷೇತ್ರವನ್ನು ಗುಡಿಸಲು ರಹಿತ ಕ್ಷೇತ್ರವಾಗಿಸುವ ಗುರಿಯೊಂದಿಗೆ ಹಿಂದೆಂದೂ ತರಲಾರದಷ್ಟು ಮನೆಗಳನ್ನು ಕ್ಷೇತ್ರಕ್ಕೆ ತಂದಿದ್ದೇನೆ. ಸರ್ಕಾರ ಮತ್ತು ಸಚಿವರ ಮನವೊಲಿಸಿ ತಂದಿರುವ ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ಗ್ರಾಪಂ ಸದಸ್ಯರು ಹಂಚಿಕೆ ಮಾಡಿ ಸದ್ಬಳಕೆ ಮಾಡಿಕೊಂಡಾಗ ನಮ್ಮ ಶ್ರಮ ಸಾರ್ಥಕ. ಅದನ್ನು ಬಿಟ್ಟು ಯಾರೋ ಕುಡಿದು ಕೂಗಾಡಿಸಿದರೆಂದು ಮನೆಗಳನ್ನು ಕೊಟ್ಟರೆ ನಮ್ಮ ಶ್ರಮ ವ್ಯರ್ಥ ಎಂದರು.

ಕೋರಗೆರೆ ಗ್ರಾಮ ಪಂಚಾಯ್ತಿಯಲ್ಲಿ ಕಳೆದ ವರ್ಷ ಮಾಡಿದ ನರೇಗಾ ಸಾಧನೆಯನ್ನು ಈ ವರ್ಷ ಮಾಡಲಾಗುತ್ತಿಲ್ಲ. ಈ ಬಗ್ಗೆ ಅಧ್ಯಕ್ಷರನ್ನು ಪ್ರಶ್ನಿಸಿದರೆ ಆರ್‌ಟಿಐ ಕಾರ್ಯಕರ್ತರು ಅನಗತ್ಯ ಕಿರಿಕಿರಿ ನೀಡುತ್ತಿದ್ದಾರೆಂದು ಅಸಹಾಯಕತೆ ತೋಡಿಕೊಂಡರು. ನರೇಗಾ ನಿಯಮದಂತೆ ಕಾಮಗಾರಿ ಅನುಷ್ಠಾನಗೊಳಿಸಿದರೆ ಹೆದರುವ ಪ್ರಶ್ನೆಯ ಬರುವುದಿಲ್ಲ. ನಿಮ್ಮೊಂದಿಗೆ ತಾಲೂಕು ಆಡಳಿತ, ನಾನು ಇದ್ದೇನೆ. ಧೈರ್ಯವಾಗಿ ಜನ ಸಾಮಾನ್ಯರಿಗೆ ನೆರವಾಗುವ, ಗ್ರಾಮದ ಅಭಿವೃದ್ಧಿಗೆ ಸಾಧ್ಯವಾಗುವ ನರೇಗಾ ಕೆಲಸಗಳನ್ನು ಮಾಡಿ ಎಂದು ಅಭಯ ನೀಡಿದರು.

> » ಆರ್‌ಟಿಐ ಕಾರ್ಯಕರ್ತರಿಗೆ ಹೆದರದೆ ಕೆಲಸ ಮಾಡಿ

ತಾಪಂ ಇಒ ವಸಂತಕುಮಾರ್, ಪಿಡಿಒ ನವೀನ್‌ಕುಮಾರ್, ಅಧ್ಯಕ್ಷ ಬಿ.ಎಸ್.ದಿನೇಶ್, ಉಪಾಧ್ಯಕ್ಷ ಕೆ.ಕೆ.ಹನುಮಂತಪ್ಪ, ಯಳನಾಡು ಗ್ರಾಪಂ ಅಧ್ಯಕ್ಷೆ ನಂದಿನಿ, ಗ್ರಾಪಂ ಸದಸ್ಯರುಗಳಾದ ಬಿ.ಆರ್. ರೇಖಾ, ಆರ್.ರಂಗಸ್ವಾಮಿ, ಶಿವಮ್ಮ, ವಿ.ಸಿ.ಶೋಭಾ, ಕೆ.ಎನ್.ಉಮೇಶ್, ಪಾರ್ವತಮ್ಮ, ಬಿ.ಎಸ್. ಚಂದ್ರಶೇಖರಯ್ಯ, ವಿ.ಕೆ.ಕಾಂತರಾಜು, ವಿ.ಕೆ.ಭಾರತಿ, ಲತಾ, ಲಲಿತಮ್ಮ, ಎಸ್.ತಾರಾ, ಬಿ.ಆರ್.ಯತೀಶ್ ಉಪಸ್ಥಿತರಿದ್ದರು.



### ಶಿಕ್ಷಣ ಕ್ಷೇತ್ರಕ್ಕೆ ಆಧ್ಯತೆ

**ಶಿಕ್ಷಣ ಯಾರೂ ಕಡಿಯಲಾರದ ಆಸ್ತಿ. ಹಾಗಾಗಿ ಕೋರಗೆರೆ ಗ್ರಾಮ ಪಂಚಾಯಿತಿಯಿಂದ ಶಿಕ್ಷಣಕ್ಕೆ ಹೆಚ್ಚು ಆಧ್ಯತೆ ನೀಡಿದ್ದೇವೆ. ಶಾಲೆಗಳ ಪ್ರಗತಿಗೆ ಹೆಚ್ಚು ಅನುದಾನ ಬಳಕೆ ಮಾಡಿದ್ದೇವೆ. ಟ್ರ್ಯಾಕ್ ಸೂಟ್, ಯೋಗಾ ಮ್ಯಾಟ್, ಚೇರುಟೇಬಲ್, ಶುದ್ಧಕುಡಿಯುವ ನೀರಿನ ಘಟಕ, ಕಾಂಪೌಡ್, ಕಟ್ಟಡ ಸೇರಿದಂತೆ ಅನೇಕ ಅಭಿವೃದ್ಧಿ ಮಾಡಿದ್ದೇನೆ. ಅಲ್ಲದೆ ಉದ್ಯೋಗಖಾತ್ರಿ, ಪ್ರತಿ ಹಳ್ಳಿಗೆ ಸೋಲಾರ್ ಲೈಟ್, ಸಿಸಿ ರಸ್ತೆ, ದೇವಸ್ಥಾನ ಅಭಿವೃದ್ಧಿ ಮಾಡಿದ್ದೇನೆ ಎಂದು ಗ್ರಾಪಂ ಅಧ್ಯಕ್ಷರಾದ ದಿನೇಶ್ ತಿಳಿಸಿದರು.**

### ದಾಖಲೆಯ ಮನೆ ಮಂಜೂರು

**ಚಿಕ್ಕನಾಯಕನಹಳ್ಳಿ ತಾಲೂಕಿಗೆ ಹಿಂದೆಂದೂ ಬಾರದಷ್ಟು ಜನರಲ್ ಮನೆಗಳನ್ನು ಈ ವರ್ಷ ಮಂಜೂರಾಗಿದ್ದು ಒಂದೊಂದು ಪಂಚಾಯ್ತಿಗೆ 85 ಮನೆಗಳು ಬಂದಿವೆ. ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು 6 ತಿಂಗಳ ಕಾಲವಕಾಶವಿದ್ದು ಅಷ್ಟರಲ್ಲಿ ಎಲ್ಲರೂ ಕಟ್ಟಿಕೊಳ್ಳಬೇಕು. ಈ ವರ್ಷ ನೀರಿನ ಹಾಹಾಕಾರ ಹೆಚ್ಚಿದ್ದು ಕೊಳವೆಬಾವಿಯಿರುವವರು ಸ್ವಯಂ ಪ್ರೇರಣೆಯಿಂದ ನೀರಿಲ್ಲದವರಿಗೆ ಕುಡಿಯುವ ನೀರನ್ನು ಕೊಟ್ಟು ಸಹಕರಿಸುವಂತೆ ತಾಪಂ ಇಒ ವಸಂತಕುಮಾರ್ ಕೇಳಿಕೊಂಡರು.**

# ಶಾಲೆ ಉತ್ತುಂಗ ಸ್ಥಿತಿ ತಲುಪಲಿ

**ತಿಪಟೂರು:** ಕಲೆ ಹಾಗೂ ಶಿಕ್ಷಣಕ್ಕೆ ತವರೂರಾಗಿರುವ ತಿಪಟೂರಿನ ತಾಲ್ಲೂಕಿನಲ್ಲಿ ಹಲವಾರು ಶಾಲೆಗಳು ಪ್ರಾರಂಭಗೊಂಡು 50 ವರ್ಷಗಳನ್ನು ಕಳೆದು ಸಾವಿರಾರು ವಿದ್ಯಾರ್ಥಿಗಳ ಜ್ಞಾನದ ಆಸರೆಯಾಗಿ ನಿಂತಿವೆ ಅಂತಹ ಶಾಲೆಗಳಲ್ಲಿ ನಗರದ ಗಾಂಧಿನಗರದ ಭೋವಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಸಹ ಒಂದಾಗಿದೆ.

ಈ ಶಾಲೆಯು 1972 ರಲ್ಲಿ ಪ್ರಾರಂಭ ಗೊಂಡು ಐವತ್ತು ವಸಂತಗಳನ್ನು ಪೂರೈಸಿದೆ. ಇಂದು ಸುವರ್ಣ ಮಹೋತ್ಸವದ ಜೊತೆಗೆ ಶಾಲಾ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿತು . ವಿಶ್ವ ಗುರು ಬಸವಣ್ಣ ಸಾಂಸ್ಕೃತಿಕ ನಾಯಕ ಎಂಬ ಘೋಷವಾಕ್ಯ ಮೊಳಗಿಸಿ ಭಾವಚಿತ್ರಕ್ಕೆ ಮಾಲಾರ್ಪಣೆ ಪುಷ್ಪ ನಮನ ಸಲ್ಲಿಸಿ, ಜ್ಯೋತಿ ಬೆಳಗುವುದರ ಮೂಲಕ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ತಾಲ್ಲೂಕಿನ ಶಾಸಕರಾದ ಕೆ.ಷಡಕ್ಷರಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹ ಪಠ್ಯ ಚಟುವಟಿಕೆಗಳು ಸಹಾಯಕವಾಗಿವೆ, ಈ ನಿಟ್ಟಿನಲ್ಲಿ ಶಾಲೆಯು ಸುವರ್ಣ ಮಹೋತ್ಸವ ಹಾಗೂ ಶಾಲಾ ವಾರ್ಷಿಕೋತ್ಸವವದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಹೊಸದಾಗಿ ನಮ್ಮ ತಾಲ್ಲೂಕಿಗೆ ನೇಮಕಗೊಂಡ ಜಿಪಿಟಿ ಶಿಕ್ಷಕರಿಗೆ ಸ್ವಾಗತ, ತಾಲ್ಲೂಕಿನ ಶಿಕ್ಷಕರಿಗೆ ಗುರುವಂದನೆಯನ್ನು ಹಮ್ಮಿಕೊಂಡಿರುವುದು ಸಂತಸ ತಂದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕರನ್ನು ಗೌರವಿಸಿ ಸನ್ಮಾನಿಸುವ ಭಾಗ್ಯವನ್ನು ನನಗೆ ನೀಡಿದ ಈ ಶಾಲೆ ಉತ್ತುಂಗ ಸ್ಥಿತಿ ತಲುಪಲಿ. ಇಲ್ಲಿನ ಕ್ರಿಯಾಶೀಲ ಶಿಕ್ಷಕರ ಶ್ರಮ ಸಾರ್ಥಕವಾಗಿದೆ ಎಂದು ತಿಳಿಸಿದರು. ಸರ್ಕಾರ ಮತ್ತು ಸಮುದಾಯ ಜೊತೆಗೂಡಿ ಸರ್ಕಾರಿ ಶಾಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸ ಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅತಿಥಿಗಳಾಗಿ ಭಾಗವಹಿಸಿದ್ದ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಚಂದ್ರಯ್ಯನವರು ಈ ಶಾಲೆಯು ಮಕ್ಕಳಿಗೆ ಅಗತ್ಯವಾಗಿ ಬೇಕಾದಂತ ಎಲ್ಲ ಮೂಲಸೌಕರ್ಯಗಳನ್ನು ಒಳಗೊಂಡಿದೆ , ಇಲ್ಲಿ ಕನ್ನಡ ಹಾಗೂ ಇಂಗ್ಲಿ?ಮಾಧ್ಯಮದ ವಿಭಾಗಗಳಿದ್ದು ಮಕ್ಕಳ ಕಲಿಕೆಗೆ ಅಗತ್ಯವಿರುವ ಕಂಪ್ಯೂಟರ್, ಆಟೋಪಕರಣಗಳು, ಕ್ರೀಡೋಪಕರಣಗಳು, ಹಾಗೂ ಚಟುವಟಿಕೆಯುಕ್ತ ಬೋಧನೆಯನ್ನು ಮಾಡುವ ನುರಿತ ಶಿಕ್ಷಕರನ್ನು ಒಳಗೊಂಡಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಮಕ್ಕಳನ್ನು ದಾಖಲಿಸಬೇಕೆಂದು ಪೋ?ಕರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಮೊಹಮ್ಮದ್ ಗೌಸ್, ಎಸ್.ಡಿ.ಎಂ.ಸಿ ಅಧ್ಯಕ್ಷೆ ನಿಶಾಬಾನು ರವರು, ಮುಖ್ಯಶಿಕ್ಷಕರಾದ ಎಂ. ಎಂ. ಮಂಜಪ್ಪ, ನಂದೀಶ್, ಲಿಂಗರಾಜು ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೆ. ಪಟ್ಟಾಭಿರಾಮು, ಗೌರವಾಧ್ಯಕ್ಷ ಹೆಚ್.ಸಿ. ಓಂಕಾರ್‌ಮೂರ್ತಿ, ಉಪಾಧ್ಯಕ್ಷೆ ಶ್ರೀಮತಿ ಸಿ. ಎಂ. ಸುಮಾ, ಖಜಾಂಚಿ ಶ್ರೀಮತಿ ಎಸ್.ಎಸ್. ಮಮತಾ, ಸಹಕಾರ್ಯದರ್ಶಿ ಸಿ. ಎಸ್. ನಾಗರಾಜು , ಶ್ರೀಮತಿ ಸಾವಿತ್ರಮ್ಮ, ಗುರು ವಂದನೆಯನ್ನು ಸ್ವೀಕರಿಸಿದರು.

ಅಪಾರ ಸಂಖ್ಯೆಯ ಪೋಷಕ ವರ್ಗದವರು ಹಾಗೂ ಶಾಲಾ ಶಿಕ್ಷಕರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಎಂ ಎಂ ಮಂಜಪ್ಪನವರು ಸ್ವಾಗತಿಸಿ, ನಿರೂಪಣೆಯನ್ನು ಶಿಕ್ಷಕ ಸಿದ್ದೇಶ್ವರ ಮತ್ತು ಸುರೇಶ್ ನಡೆಸಿಕೊಟ್ಟರು ಶಾಲಾ ವರದಿಯನ್ನು ಶ್ರೀಮತಿ ಆರ್. ನಾಗವೇಣಿ ವಾಚಿಸಿದರು ವಂದನಾರ್ಪಣೆ ಚಿದಾನಂದ್, ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀಮತಿ ಛಾಯಾ ಹಾಗೂ ಶ್ರೀಮತಿ ಪ್ರತಿಭಾ ನಿರ್ವಹಿಸಿದರು. ಬಹುಮಾನದ ವಿತರಣೆಯನ್ನು ಶ್ರೀಮತಿ ಸುಧಾಮಣಿ ಯವರು ನಡೆಸಿಕೊಟ್ಟರು.



# ಸವಿತಾ ಮಹರ್ಷಿಗಳ ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಮಹಾನ್ ಯುಗಪುರುಷ

**ರಾಮನಗರ:** ಸವಿತಾ ಮಹರ್ಷಿಗಳ ಸಮಾಜದ ಶ್ರೇಷ್ಠತೆಗೆ ಶ್ರಮಿಸಿದ ಮಹಾನ್ ಯುಗ ಪುರುಷ ಎಂದು ಸಮುದಾಯದ ಮುಖಂಡರಾದ ಶ್ರೀನಿವಾಸ್ ಅವರು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸವಿತಾ ಮಹರ್ಷಿಗಳು ಸಮಾಜಮುಖಿಯಾಗಿ ಬೆಳೆದು ದಾರಿದೀಪವಾಗಿದ್ದಾರೆ. ಇಂತಹ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಆದರ್ಶಗಳ ಹಾದಿಯಲ್ಲಿ ನಡೆಯಲು ನಮಗೆ ಬೆಳಕು ಲಭಿಸಿದೆ. ಸವಿತಾ ಸಮಾಜದ ಬಂಧುಗಳು ಮಹರ್ಷಿಗಳ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದು ಹೇಳಿದರು.

ಪೌರಾಣಿಕ ವ್ಯಕ್ತಿಯಾದ ಸವಿತಾ ಮಹರ್ಷಿಯು ರಥಸಮ್ತಿಯ ದಿನ ಮಾಘ ಮಾಸದ ಶುಕ್ಲ ಪಕ್ಷ ದಲ್ಲಿ ಜನಿಸಿದರು. ಧಾರ್ಮಿಕವಾಗಿ ಶಿವನ ಎಡಗಣ್ಣನ್ನು ಚಂದ್ರನಿಗೆ ಬಲಗಣ್ಣನ್ನು ಸೂರ್ಯನಿಗೆ ಹೋಲಿಸಲಾಗುತ್ತದೆ. ಶಿವನ ಬಲಗಣ್ಣಿನಿಂದ ಜನಿಸಿದವನೇ ಸವಿತಾ ಮಹರ್ಷಿ ಎಂದು ಪ್ರತೀತಿಯಿದೆ ಸವಿತಾ ಸಮಾಜದವರನ್ನು ಸೂರ್ಯ ವಂಶಕ್ಕೆ ಸೇರಿದವರೆಂದು ಹೆಮ್ಮೆಯಿಂದ ಹೇಳಬಹುದು ಎಂದರು.

ಅಪಾರ ಜ್ಞಾನಭಂಡಾರ ಹೊಂದಿದ ಸವಿತಾ ಮಹರ್ಷಿಗಳು ನಾಲ್ಕನೇ ವೇದವಾದ ಸಾಮವೇದ ಕೃತಿ ರಚಿಸಿದ್ದಾರೆ. ಇವರ ಮಗಳಾದ ಗಾಯತ್ರಿದೇವಿಯು ಶ್ರೇಷ್ಠಮಂತ್ರವಾದ ಗಾಯತ್ರಿ ಮಂತ್ರವನ್ನು ರಚಿಸಿದ್ದಾರೆ. 12ನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣನವರಿಗೆ ಆಶ್ರಯ ನೀಡಿದ ದೊರೆ ಸವಿತಾ ಸಮಾಜದ ಬಿಜ್ಜಳ ದೊರೆ ಎಂಬುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಅತ್ಯಂತ ಶ್ರೀಮಂತ ಪರಂಪರೆ ಇರುವ ಸವಿತಾ ಸಮಾಜ ಒಗ್ಗಟ್ಟಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಇತರರಿಗೆ ಆದರ್ಶ ಪ್ರಾಯರಾಗಿ ಬೆಳೆಯಬೇಕು ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಮೇಶ್ ಬಾಬು, ಸವಿತಾ ಸಮಾಜದ ಮುಖಂಡರುಗಳಾದ ವೆಂಕಟರಾಮು, ರಘು, ಸತೀಶ್ ಸೇರಿದಂತೆ ಸಮಾಜದ ಗಣ್ಯ ವ್ಯಕ್ತಿಗಳು ಮುಖಂಡರು ಉಪಸ್ಥಿತರಿದ್ದರು.

# ಶಿಕ್ಷಕರ ಧ್ವನಿಯಾಗಿ ಇರುತ್ತೇನೆ

**ತಿಪಟೂರು:** ಆಗ್ನೇಯ ಶಿಕ್ಷಕ ಕ್ಷೇತ್ರದ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಈಗಾಗಲೇ ಶಿಕ್ಷಕ ಕ್ಷೇತ್ರದಿಂದ ಆಯ್ಕೆಯಾದವರು ಶಿಕ್ಷಕರ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಬಲವಾಗಿ ಧ್ವನಿಯೆತ್ತುವಲ್ಲಿ ವಿಫಲರಾಗಿದ್ದಾರೆ ಹಾಗಾಗಿ ನನಗೆ ಒಂದು ಅವಕಾಶ ದೊರೆತರೆ ನಾನು ಶಿಕ್ಷಕರ ಧ್ವನಿಯಾಗಿ ಇರುತ್ತೇನೆ ಎಂದು ರುಪ್ಸಾರಾಜ್ಯ ಸಂಘಟನೆಯ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ ತಿಳಿಸಿದರು.

ನಗರದ ಖಾಸಗಿ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿ ಮಾತನಾಡಿದ ಅವರು ನನಗೊಂದು ಅವಕಾಶ ನೀಡಿದರೆ - ಖಾಸಗಿ, ಅನುದಾನಿತ ಹಾಗೂ ಸರ್ಕಾರಿ ಶಾಲಾಶಿಕ್ಷಕರ,ಉಪನ್ಯಾಸಕರ ',ಆಡಳಿತ ಮಂಡಳಿಗಳ ಹಲವಾರು ವ?ಗಳ ಹಲವು ಸಮಸ್ಯೆಗಳನ್ನು ಹಂತ ಹಂತವಾಗಿ ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸದರು. ರಾಜ್ಯದಲ್ಲಿ 3, ಲಕ್ಷ ಅನುದಾನ ರಹಿತ ಶಿಕ್ಷಕರು ಹಾಗೂ 2 ಲಕ್ಷ , ಅನುದಾನ ಮತ್ತು ಸರ್ಕಾರಿ ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ 2024ರ ರಾಜ್ಯ ಬಜೆಟ್ ನಲ್ಲಿ 44,000 ಕೋಟಿಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟಿದ್ದು ಕೇವಲ ಸರ್ಕಾರಿ ಶಿಕ್ಷಕರು ಸರ್ಕಾರಿ ಶಾಲೆಗಳಿಗೆ ಮಾತ್ರ ವಿನಯೋಗಿಸುತ್ತಿದ್ದು ಮೂರು ಲಕ್ಷ ಶಿಕ್ಷಕರು ಕಡಿಮೆ ಸಂಬಳಕ್ಕೆ ಕೆಲಸ ನಿರ್ವಹಿಸುತ್ತಿದ್ದಾರೆ ಅವರಿಗೆ ಸರ್ಕಾರದಿಂದ ಯಾವುದೇ ಬಿಡುಗಾಸು ಸಿಗುತ್ತಿಲ್ಲ ಹಾಗಾಗಿ ನಮ್ಮ ಹಕ್ಕನ್ನು ಪಡೆಯಬೇಕು. ಅದೇ ರೀತಿ ನೂತನ ಪಿಂಚಣಿ ಯೋಜನೆಯನ್ನು ರದ್ದುಪಡಿಸಿ ಹಳೆ ಪಿಂಚಣಿ ಯೋಜನೆ ಜಾರಿ ಗೊಳಿಸಲು ರಚನಾತ್ಮಕ ಹೋರಾಟ ಬಡ್ತಿ ಶಿಕ್ಷಕರು ಹಾಗೂ ಉಪನ್ಯಾಸಕರ ವೇತನ ತಾರತಮ್ಯ ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ. ಸರ್ಕಾರ ಹಾಗೂ ಇಲಾಖೆ ಅಧಿಕಾರಿಗಳ ಜೊತೆ ಸಮನ್ವಯತೆ ಸಾಧಿಸಿ,ಸರ್ಕಾರದ ನ್ಯಾಯಯುತ ಸವಲತ್ತುಗಳನ್ನು ಶಿಕ್ಷಕರಿಗೆ ಸಕಾಲದಲ್ಲಿ ದೊರಕಿಸಿ ಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಘೋಷಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಶಿಕ್ಷಕರುಗಳಾದ ಕಾಂತರಾಜು ಎಚ್ ಎಮ್ ,ದಕ್ಷಿಣ ಮೂರ್ತಿ, ಕಾಂತರಾಜು, ನಿವೃತ್ತ ಶಿಕ್ಷಕರಾದ ಸದಾಶಿವಯ್ಯ, ಎನ್ ನಾಗೇಶ್, ಮಲ್ಲೇಶಪ್ಪ,ಮತ್ತಿತರರು ಹಾಜರಿದ್ದರು. ಲೋಕೇಶ್ ತಾಳಿಕಟ್ಟೆ ಯಾವುದೇ ಪಕ್ಷಕ್ಕೆ ಹೋಗುವುದಿಲ್ಲ ಹಾಗೂ ಯಾರ ಒತ್ತಡಕ್ಕೂ ಮಣಿಯುವುದಿಲ್ಲ. ಶಿಕ್ಷಕರು ಹಾಗೂ ಶಿಕ್ಷಣ ಸಂಸ್ಥೆಗಳೇ ನನಗೆ ಹೈ ಕಮಾಂಡ್ ಆಗಿದ್ದು, ಪಕ್ಷಗಳಿಗೆ ಹೋದರೆ ಅವರ ಅಣತಿಯಂತೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಶೈಕ್ಷಣಿಕ ಸಮಸ್ಯೆಗಳು ಬೆಟ್ಟದಷ್ಟಿದ್ದು, ಅವುಗಳನ್ನು ನಿವಾರಿಬೇಕಾದರೆ ಪಕ್ಷೇತರವಾಗಿಯೇ ಹೋರಾಟ ನಡೆಸಬೇಕು. ಇನ್ನು ನಾನು ಕಣದಿಂದ ಹಿಂದೆ ಸರಿಯುತ್ತೇನೆ, ಅಥವಾ ಮತ್ತೊಬ್ಬರಿಗೆ ಸಹಾಯ ಮಾಡುತ್ತೇನೆಂಬ ಆರೋಪವನ್ನು ಕೆಲವು ಕಿಡಿಗೇಡಿಗಳು ಮಾಡುತ್ತಿದ್ದು, ಅವು ಸತ್ಯಕ್ಕೆ ದೂರವಾದುದ್ದಾಗಿದ್ದು ಎಂದರು.

# ಪಟ್ಟಣಶಾಲೆ ಮಕ್ಕಳಿಗೆ ಪೈಪೋಟಿ ನೀಡಬೇಕಾಗಿದೆ

**ಪಿರಿಯಾಪಟ್ಟಣ:** ಗ್ರಾಮೀಣ ಶಾಲೆಯ ಮಕ್ಕಳು ಪಟ್ಟಣಶಾಲೆ ಮಕ್ಕಳಿಗೆ ಪೈಪೋಟಿ ನೀಡಬೇಕಾಗಿದೆ ಹಾಗಾಗಿ ಗ್ರಾಮೀಣ ಮಕ್ಕಳಿಗೆ ಅವಶ್ಯಕತೆ ಇರುವ ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸತ್ಯಗಾಲ ಬಿ ಕಾವಲ್ ಸರ್ಕಾರಿ ಶಾಲೆಗೆ ದಿಡೀರ್ ಭೇಟಿ ನೀಡಿದ ಶಿಕ್ಷಣ ಸಚಿವರು ಮಕ್ಕಳ ಕುಂದು ಕೊರತೆಯನ್ನು ವಿಚಾರಿಸಿದರು ಪೌಸ್ಟಿಕಾಂಶ ಇರುವ ಆಹಾರ ನೀಡಬೇಕು ಶಾಲೆಯ ಮೇಲ್ಚಾವಣಿಯು ಬೀಳುತ್ತಿರುವುದನ್ನು ಗಮನಿಸಿ ಶಾಲಾ ಕಟ್ಟಡವನ್ನು ತಕ್ಷಣವೇ ಮಂಜೂರು ಮಾಡೋದಾಗಿ ಹೇಳಿ ಶಾಲೆ ಅಡಿಗೆ ಕೋಣೆಯನ್ನು ಪರಿಶೀಲಿಸಿದರು.

ನಂತರ ಅವಶ್ಯಕತೆ ಇರುವ ಎಲ್ಲಾ ಕೆಲಸಗಳನ್ನು ಗ್ರಾಮ ಪಂಚಾಯತಿ ವತಿಯಿಂದಲೇ ಮಾಡಿಸಬಹುದಾಗಿದೆ ಶಾಲೆಗೆ ಕಾಂಪೌಂಡ್ ಅವಶ್ಯಕತೆ ಇದ್ದು ತಕ್ಷಣ ಕಾಂಪೌಂಡ್ ಕಟ್ಟಲು ಕ್ರಮ ಕೈಗೊಳ್ಳಲಾಗುವುದು ನನಗೆ ಒಂದು ದಿನದಲ್ಲಿ ಶಾಲೆಯ ಕುರಿತಾಗಿ ವರದಿ ನೀಡಬೇಕೆಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಸಂವಿಧಾನ ಪೀಠಿಕೆಯನ್ನು ಮಕ್ಕಳು ನೋಡದೆ ಸಚಿವರಿಗೆ ಬೋಧನೆ ಮಾಡಿದ್ದು ಸಚಿವರಿಗೆ ಸಂತೋಷ ಉಂಟು ಮಾಡಿತು ಹಾಗೂ ಇಂಗ್ಲೀಷ್ ಭಾಷೆಯನ್ನು ನಿರರ್ಗಳವಾಗಿ ಓದಿದ್ದು ನಿಜವಾದ ಗ್ರಾಮೀಣ ಪ್ರತಿಭೆಗಳು ಹಳ್ಳಿಗಳಲ್ಲಿ ಇರುತ್ತವೆ ಈ ಮಕ್ಕಳ ಬಗ್ಗೆ ನಮಗೆ ಹೆಮ್ಮೆ ಇದೆ ಅವುಗಳಿಗೆ ಸೂಕ್ತವಾದ ಸೌಲಭ್ಯಗಳು ನೀಡಿದರೆ ಅವರು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡು ದೇಶದ ಉತ್ತಮ ಪ್ರಜೆಯಾಗಬಲ್ಲರು ಮಕ್ಕಳ ಉದ್ದೇಶಿಸಿ ಮಾತನಾಡಿ ನಿಮಗೆ ಸರಿಯಾದ ಮೊಟ್ಟೆ, ಊಟ ಹಾಲು ರಾಗಿ ಮಾಲ್ಟ್ ಬಟ್ಟೆ ಶೋ ಬುಕ್ಸ್ ಶಿಕ್ಷಕರು ಸರಿಯಾಗಿ ನೀಡುತ್ತಿದ್ದಾರೆಎ ಎಂದು ಮಕ್ಕಳನ್ನು ಪ್ರಶ್ನಿಸಿದರು ಮಕ್ಕಳಿದ್ದಕ್ಕೆ ಸಂತಸದಿಂದ ಉತ್ತರ ನೀಡಿ ಎಲ್ಲವೂ ಸರಿಯಾಗಿ ನೀಡುತ್ತಿದ್ದಾರೆ ಎಂದು ಉತ್ತರಿಸಿದರು.

ಹೊಸದಾಗಿ ಕಟ್ಟಡ ಕಟ್ಟಿಸಲು ಕ್ರಮ ಕೈಗೊಳ್ಳುತ್ತೇನೆ ಮಕ್ಕಳಿಗೆ ಸರಿಯಾದ ಸಮಯಕ್ಕೆ ಅವರಿಗೆ ಆಹಾರ ನೀಡಬೇಕು ಎಂದು ಅಡಿಗೆಯವರಿಗೆ ತಾಕಿತು ಮಾಡಿದರು ಹಾಗೂ ಮಕ್ಕಳ ಕಲಿಕೆ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು ಮಕ್ಕಳಿಗೆ ಸರ್ಕಾರಿ ಶಾಲೆಯಲ್ಲಿ ಉತ್ತಮ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸಬೇಕು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಕಡೆ ಪೋಷಕರು ವಾಲದಂತೆ ಸರ್ಕಾರಿ ಶಾಲೆಗೆ ಹೆಚ್ಚು ಮಕ್ಕಳು ಆಗಮಿಸುವಂತೆ ಮಾಡುವುದು ಶಿಕ್ಷಕರ ಕರ್ತವ್ಯವಾಗಿದೆ ಈ ಕರ್ತವ್ಯವನ್ನು ಶಿಕ್ಷಕರು ಮರೆಯಬಾರದು ಎಂದರು.



# ಪ್ರತಿ ಮನೆಯಲ್ಲಿಯೂ ಶಿವಾಜಿಯಂತಹ ವೀರರು ಹುಟ್ಟಬೇಕು

**ಮಂಡ್ಯ:** ಕೊಂಕಣ ಭಾಗದ ಇಡೀ ಪಶ್ಚಿಮಭಾರತವನ್ನು ತಮ್ಮ ಆಳ್ವಿಕೆಗೆ ತಂದಂತಹ ಶಿವಾಜಿಯ ಶೌರ್ಯ, ಸಾಹಸ ರಾಷ್ಟ್ರಭಕ್ತ ಆಡಳಿತಗಾರರಿಗೆ ಎಂದೆಂದಿಗೂ ಪ್ರೇರಣದಾಯಿ. ಪ್ರತಿ ಮನೆಯಲ್ಲಿಯೂ ಶಿವಾಜಿಯಂತಹ ವೀರರು ಹುಟ್ಟಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಎನ್. ಉದಯಕುಮಾರ್ ಅವರು ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಸಂಘದಲ್ಲಿ ನಡೆದ 2023-24 ನೇ ಸಾಲಿನ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಛತ್ರಪತಿ ಶಿವಾಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಛತ್ರಪತಿ ಶಿವಾಜಿಯವರು ಸ್ವಾಭಿಮಾನಿ ರಾಷ್ಟ್ರ ನಿರ್ಮಾಣಕ್ಕೆ ಹೋರಾಡಿದವರು. ಹಿಂದುಸ್ಥಾನವನ್ನು ಒಗ್ಗೂಡಿಸಲು ಬಹಳ ಶ್ರಮಿಸಿದ್ದಾರೆ. ಇಂತಹ ವೀರ ಶಿವಾಜಿಯ ಜಯಂತಿಯನ್ನು ಮಾಡುತ್ತಿರುವುದು ಪುಣ್ಯದ ಕೆಲಸ ಎಂದರು.

ಪ್ರಸ್ತುತ ಜನರು ದೇಶಕ್ಕೆ ಹಾಗೂ ನಾಡಿಗೆ ಕೊಡುಗೆ ನೀಡಿದಂತಹ ಮಹಾನ್ ವ್ಯಕ್ತಿಗಳ ತ್ಯಾಗ, ಬಲಿದಾನ, ಸಾಧನೆ ಹಾಗೂ ಅವರ ಜೀವನ ಚರಿತ್ರೆಯನ್ನು ಮುಂದಿನ ಪೀಳಿಗೆಗೆ ತಿಳಿಸುವಂತಹ ಕೆಲಸವಾಗಬೇಕು ಎಂಬ ಉದ್ದೇಶದಿಂದ ಸರ್ಕಾರ ಇಂತಹ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಿಸಲು ನಿರ್ಧರಿಸಿದೆ. ಆದ್ದರಿಂದ ಪ್ರತಿಯೊಬ್ಬರು ಕೂಡ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ವಿವೇಕ ವಿದ್ಯಾವಾಹಿನಿ ಟ್ರಸ್ಟ್ ನ ಅಧ್ಯಕ್ಷರು ಹಾಗೂ ಮುಖ್ಯ ಭಾಷಣಕಾರರಾದ ಪ್ರಭಾಂಜನ್ ರವರು ಮಾತನಾಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಕಾರ್ಯಕ್ರಮವನ್ನು ಆಯೋಜಿಸಿದ್ದು ಬಹಳ ಉತ್ತಮ ಕಾರ್ಯವಾಗಿದೆ. ಛತ್ರಪತಿ ಶಿವಾಜಿಯು ಒಬ್ಬ ಮಹಾನ್ ಶ್ರೇಷ್ಠ ಸಾಮ್ರಾಟ. ನಮ್ಮ ಭಾರತ ದೇಶದಲ್ಲಿ ಸತ್ಯ ಹಾಗೂ ಧರ್ಮಕ್ಕೆ ಕುತ್ತು ಉಂಟಾಗುವ ಸಂದರ್ಭಗಳಲ್ಲಿ ಮಹಾಪುರುಷರು ಜನಿಸಿದ್ದಾರೆ. ಅವರಲ್ಲಿ ಶಿವಾಜಿ ಮಹಾರಾಜರು ಕೂಡ ಒಬ್ಬರು. ಅನೇಕ ವರ್ಷಗಳ ಹಿಂದೆ ಮೊಘಲರು, ಗ್ರೀಕರು, ಡಚ್ಚರು, ಪೋರ್ಚುಗೀಸರು, ಬ್ರಿಟಿಷರ ಆಕ್ರಮಣದಿಂದ ನಮ್ಮ ದೇಶ ತತ್ತರಿಸಿ ಅವನತಿಯ ಅಂಚಿನಲ್ಲಿತ್ತು. ಅಂತಹ ಸಂದರ್ಭದಲ್ಲಿಯೇ ಶಕ್ತಿಗಿಂತ ಯುಕ್ತಿಯನ್ನು ಬಳಸಿಕೊಂಡು ಬಿಜಾಪುರದ ಸುಲ್ತಾನ ಆದಿಲ್ ಶಾ ನಿಂದ ಶಿವಾಜಿಯು ತನ್ನದೇ ಆದ ಸ್ವತಂತ್ರ ಸಾಮ್ರಾಜ್ಯವನ್ನು ಕಟ್ಟಿದನು. ಆತನ ಆಡಳಿತದಲ್ಲಿ ಯುರೋಪಿಯನ್ನರು ಸೇರಿದಂತೆ ಎಲ್ಲ ಜಾತಿಗಳು ಮತ್ತು ಧರ್ಮಗಳ ಜನರನ್ನು ನೇಮಿಸಿಕೊಂಡು ಜಾತ್ಯಾತೀತ ರಾಷ್ಟ್ರವನ್ನು ಅಂದಿನ ಕಾಲದಲ್ಲಿ ನಿರ್ಮಾಣ ಮಾಡಿದವನು. ಶಿವಾಜಿಯು ಸಮರ್ಥ ರಾಜನಾಗಿ ಇಡೀ ಹಿಂದೂ ಸಮಾಜವನ್ನು ಏಕೀಕೃತ ಮಾಡಿದರು ಎಂದರು.



ಶಿವಾಜಿಯ ತಾಯಿಯಾದ ಜೀಜಾಬಾಯಿಯು ತನ್ನ ಮಗನನ್ನು ಬೆಳೆಸಿದ ರೀತಿ ಅದ್ಭುತವಾದದ್ದು. ಬಾಲ್ಯದಿಂದಲೇ ಶಿವಾಜಿಗೆ ಧರ್ಮ, ಸತ್ಯ ಹಾಗೂ ನಿಷ್ಠೆಯಂತಹ ಮೌಲ್ಯಗಳನ್ನು ತಿಳಿಸಿ ಆತನನ್ನು ಮಹಾನ್ ವೀರನನ್ನಾಗಿ ರೂಪಿಸಿದರು.

ಶಿವಾಜಿಯ ಬಾಲ್ಯ ಜೀವನದಲ್ಲಿ ನಡೆದ ಕೆಲವು ವಿಚಾರಧಾರೆಗಳನ್ನು ತಿಳಿಸುತ್ತಾ ಚಿಕ್ಕವಯಸ್ಸಿನಲ್ಲಿಯೇ ತಪ್ಪು ಮಾಡಿದವರಿಗೆ ಶಿಕ್ಷೆ ನೀಡುವುದರ ಮೂಲಕ ನ್ಯಾಯವನ್ನು ದೊರಕಿಸಿಕೊಡುತ್ತಿದ್ದರು. ಮಾನವೀಯತೆಯ ಗುಣ ಚಿಕ್ಕಂದಿನಲ್ಲಿಯೇ ಎದ್ದು ಕಾಣುತ್ತಿತ್ತು ಎಂದು ಹೇಳಿದರು.

ಪ್ರಸ್ತುತ ದಿನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರ ಹಾಗೂ ಮೌಲ್ಯವಿಲ್ಲ. ಆದ್ದರಿಂದ ಶಿವಾಜಿಯಂತಹ ಮಹಾನ್ ಶ್ರೇಷ್ಠ ಸಾಧಕರನ್ನು ಪರಿಚಯಿಸುವುದರ ಮೂಲಕ ಮಕ್ಕಳಲ್ಲಿ ಸಂಸ್ಕಾರವನ್ನು ಬೆಳೆಸಬೇಕು. ಮೌಲ್ಯಯುತ ಶಿಕ್ಷಣ ಕೊಡಿಸುವುದರ ಜೊತೆಗೆ ಪ್ರತಿಯೊಬ್ಬ ತಾಯಿಯು ಜೀಜಾಬಾಯಿ ಅವರಂತೆ ತಮ್ಮ ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡಬೇಕು ಎಂದರು. ಸ್ವಾತಂತ್ರ್ಯ ಹೋರಾಟಗಾರ ಹಾಗೂ ಹಿರಿಯರಾದ ಶಂಕರ್, ಮರಾಠ ಸಮಾಜದ ಅಧ್ಯಕ್ಷ ಸುರೇಶ್ ರಾವ್, ಉಪಾಧ್ಯಕ್ಷ ಚಂದ್ರಶೇಖರ್, ಮುಖಂಡರುಗಳಾದ ನಾಗೇಂದ್ರರಾವ್, ಅಂಬಾಜಿರಾವ್, ನಂದೀಶ್ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

## ತೆಲಂಗಾಣದಲ್ಲಿ ಕನ್ನಡೋತ್ಸವ ಸಂಭ್ರಮ –2023 : ಕನ್ನಡ ಸೇವೆಯೇ ನಮ್ಮಧ್ಯೇಯ

# ಕನ್ನಡ ಸೇವಕರನ್ನು ಗುರುತಿಸುವುದು ಸಂಘದ ಕಾರ್ಯ

**ಹೈದರಾಬಾದ:** ತೆಲುಗು ನಾಡಿನಲ್ಲಿ ಕನ್ನಡೋತ್ಸವ ಮಾಡುತ್ತಿರುವುದು, ಹೊರನಾಡಿನಲ್ಲಿ ಇರುವಕನ್ನಡ ಪ್ರತಿಭೆಗಳನ್ನು ಗುರುತಿಸುತ್ತಿರುವ ಕನ್ನಡಿಗರ ಕಲ್ಯಾಣಅಭಿವೃದ್ಧಿ ಸಂಘದಕಾರ್ಯ ಶ್ಲಾಘನೀಯ, ಅನನ್ಯವಾದದ್ದುಎಂದು ಬಸವಕಲ್ಯಾಣದಕಲ್ಯಾಣ ಮಹಾಮನೆಯ ಪೂಜ್ಯ ಬಸವಪ್ರಭು ಸ್ವಾಮಿಜಿ ನುಡಿದರು.

ನಗರದ ಹಫೀಜಪೇಟನಲ್ಲಿ ಭಾನುವಾರ ಸಂಜೆಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘ, ಕರವೇಉತ್ತರ ಕರ್ನಾಟಕ ಮತ್ತುಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಕನ್ನಡೋತ್ಸವ ಸಂಭ್ರಮ–2023 ಸಮಾರಂಭವು ಕನ್ನಡ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪವೃಷ್ಠಿ ಮಾಡಿ, ಕನ್ನಡದಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ದಿವ್ಯಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿ ಮಾತನಾಡಿದರು.ಇಂದು ನಾವು ಕರ್ನಾಟಕದಲ್ಲಿಯೇ ಇದ್ದಿವಿ ಎಂಬ ಭಾವನೆ ಸಮಾರಂಭದಲ್ಲಿ ಸೇರಿರುವಕನ್ನಡಿಗರನ್ನು ನೋಡಿದರೆ ನಾವು ನಮ್ಮ ನಾಡಿನಲ್ಲಿಯೇ ಇದ್ದಿವಿ ಎಂಬುದುಗೊತ್ತಾಗುತ್ತಿದೆ. ಹೀಗಾಗಿ ಈ ಕನ್ನಡ ಸಂಘವು 20 ವರ್ಷಗಳ ನಿರಂತರತೆಲುಗು ನಾಡಿನಲ್ಲಿಕನ್ನಡವನ್ನು ಉಳಿಸಿ



ಬೆಳಸುವ ನಿಟ್ಟಿನಲ್ಲಿಧರ್ಮೇಂದ್ರ ಪೂಜಾರಿಯವರತಂಡ ಹೀಗೆ ಕನ್ನಡ ಸೇವೆ ಮಾಡಲಿ ಎಂದು ಹಾರೈಸಿದರು.

ಹೈದರಾಬಾದನಲ್ಲಿ ಇರುವ ಕನ್ನಡಿಗರ ಸೇವೆಗೆ ಹಾಗೂ ರಕ್ಷಣೆಗೆ ನಾವು ಸದಾ ಸಿದ್ದವಾಗಿ ಇರುತ್ತೇವೆ ನಿಮ್ಮ ನಿರಂತರ ಸೇವೆಯನ್ನು ಮಾಡುವ ಭಾಗ್ಯ ನಮ್ಮಗೆ ಸಿಗಲಿ ಎಂದು ಕರವೇಉತ್ತರಕರ್ನಾಟಕದಅಧ್ಯಕ್ಷ ಶ್ರೀ ಶರಣುಗದ್ದುಗೆ ಅಧ್ಯಕ್ಷತೆವಹಿಸಿ ಮಾತನಾಡಿಕನ್ನಡಿಗರನ್ನು ಹುರಿದುಂಬಿಸುವ ಡಾ. ರಾಜಕುಮಾರಅವರ ಹಾಡು ಹುಟ್ಟಿದರೆಕನ್ನಡ ನಾಡಲಿ ಹುಟ್ಟಬೇಕು, ಮೆಟ್ಟಿದರೆಕನ್ನಡ ನಾಡನ್ನು ಮೆಟಬೇಕು?ಎಂಬ ಹಾಡು ಹಾಡಿಕನ್ನಡಿಗರನ್ನುಕನ್ನಡ ನಾಡಿಗೆಕರೆದ್ಯೋಯಿದರು. ಸಭಿಕರನ್ನುಕುಣಿಯುವಂತೆ ಮಾಡಿದರು. ನಗರದಲ್ಲಿಇರುವ 12ಲಕ್ಷ ಕನ್ನಡಿಗರನ್ನುಒಂದೇ ಸೂರಿನಡೆಗೆತರುವ ಪ್ರಯತ್ನವನ್ನುಕನ್ನಡಿಗರಕಲ್ಯಾಣಅಭಿವೃದ್ಧಿ ಸಂಘವು ನಿರಂತರವಾಗಿಇಪ್ಪತ್ತು ವರ್ಷದಿಂದ ಪ್ರತಿಯೊಂದು ನಗರದ ವಿವಿಧ ಪ್ರದೇಶದಲ್ಲಿಕನ್ನಡೋತ್ಸವ ಹಾಗೂ ಕನ್ನಡ ಸಾಂಸ್ಕೃತಿಕ ಸಮಾರಂಭವು ಆಯೋಜಿಸುತ್ತ ಕನ್ನಡಿಗರಿಗಾಗಿ ಕನ್ನಡಜಾಗೃತಿ ಜಾಥಾ ನಿರಂತರವಾಗಿ ಮಾಡುತ್ತ ಬರುತ್ತಿದೆ ಹಾಗೂ ಹೈದರಾಬಾದನಲ್ಲಿ ಭವ್ಯವಾದಕನ್ನಡ ಭವನ ನಿರ್ಮಾಣದಕನಸ್ಸನ್ನು ಹೊತ್ತುಕೊಂಡು ಈ ಕಾರ್ಯದಲ್ಲಿ ನಮ್ಮ ಸಂಘವು ಮುನ್ನೂಗುತ್ತಿದೆಎಂದು ಸಂಘದಅಧ್ಯಕ್ಷಧರ್ಮೇಂದ್ರ ಪೂಜಾರಿ ಬಗ್ದೂರಿಯವರು ಪ್ರಸ್ತಾವಿಕವಾಗಿ ಮಾತನಾಡಿ ಸಂಘದಕಾರ್ಯ ಚಟುವಟಿಕೆಗಳ ಬಗ್ಗೆ ವಿವಿರ ಮಾಹಿತಿ ನೀಡಿದರು.

ಸಮಾರಂಭದ ವೇದಿಕೆಯಲ್ಲಿ ಕಲಬುರಗಿಯ ಧನರಾಜ, ಬಸವಕಲ್ಯಾಣದ ಅಶೋಕ ಗೌಡ, ಲಕ್ಷ್ಮಣಗೌಡ, ಸಂತೋಷ ಪಸರಗೆ. ಮರಾಠವಾಡ ಕನ್ನಡ ಸಾಂಸ್ಕೃತಿಕ ಸಂಘದಅಧ್ಯಕ್ಷಕೇಶಪ್ಪ ಹೊನ್ನಳ್ಳಿ, ಕಾರ್ಯದರ್ಶಿ ಶ್ರೀನಿವಾಸ ತೇಲಂಗ, ವಾರ್ತಾಇಲಾಖೆಯ ನಿವೃತಅಧಿಕಾರಿ ಜಿ. ಚಂದ್ರಕಾಂತ, ಅವಧೂತಕೀಶೋರದಾಸ, ಬಸವರಾಜ ಹಂಜನಾಳೆ ಉಪಸ್ಥಿತರಿದರು.

ರೋಹಿದಾಸ ಸಮಾಜದ ವಿಶ್ವನಾಥ, ಲಿಂಗಾಯತ ಸಮಾಜದ ಸಂತೋಷ ಪಸರಗೆ, ಸಗರ ಸಮಾಜದ ಲಕ್ಷ್ಮಣ ಸಗರ, ಗೌಡಸಮಾಜದ ಲಕ್ಷ್ಮಣಗೌಡ, ಕಾಮಾಜಿ, ಸಂಜು ಸ್ವಾಮಿ, ಲೋಕೇಶ ಪಟ್ನೆ, ಶಿವಪ್ರಸಾದ ಸಜ್ಜನರ, ಅರ್ಪಿತ ಸಜ್ಜನರ, ಹೀಗೆ ಅನೇಕ ಕನ್ನಡಿಗರು ಭಾಗವಹಿಸಿದರು. ಜನರನ್ನು ನಗ್ಗಿಸಿದ ಕನ್ನಡ ಸಾಂಸ್ಕೃತಿಕಕಲಾವಿಧರಿಂದಕನ್ನಡ ಗೀತೆಗಳನ್ನು ಹಾಡಿಜನಮೆಚ್ಚುವಂತೆ ಮಾಡಿದುಆರ್ ಕೆ ಬಾಲು. ಕಿರಣದೇಸಾಯಿ. ಶಿಲ್ಪಾ, ಜಾನಪದ ಹಾಡು ಹಾಡಿಜನರನ್ನು ನಗ್ಗಿಗಡಲಿನಲ್ಲಿ ತೆಲಿಸಿದರು.

ಗೌರವ ಸನ್ಮಾನ : ಬಡತನದಲ್ಲಿ ಬೆಂದುಇಂದುಕನ್ನಡ ಮಾಧ್ಯಮದಲ್ಲಿಉನ್ನತ ವ್ಯಾಸಂಗ ಮಾಡಿ ಕಲಬುರಗಿ ವಿಶ್ವವಿದ್ಯಾಲಯದಲ್ಲಿಚಿನ್ನದ ಪದಕ ಪಡೆದಗಾಯತ್ರಿಕಟೆಯವರಿಗೆ ವಿಶೇಷ ಸನ್ಮಾನ ಮಾಡಿಗೌರವಿಸಲಾಯಿತು.

## ಬಿಜೆಪಿಯಿಂದ ಸ್ಥಳೀಯರಿಗೆ ಟಿಕೆಟ್ ನೀಡಲು ಪಾಪು ಒತ್ತಾಯ

**ಚಾಮರಾಜನಗರ:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಸ್ಥಳೀಯರಿಗೆ ಟಿಕೆಟ್ ನೀಡಬೇಕು ಎಂದು ಬಿಜೆಪಿ ವರಿಷ್ಠರಲ್ಲಿ ಪಕ್ಷದ ಮುಖಂಡ ಹಾಗೂ ಟಿಕೆಟ್ ಆಕಾಂಕ್ಷಿ ವೆಂಟಕರಮಣಸ್ವಾಮಿ (ಪಾಪು) ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಸ್ಥಳೀಯರಿಗೆ ಸುಮಾರು 44 ವರ್ಷಗಳಿಂದ ಅನ್ಯಾಯವಾಗಿದೆ. ಆದರಿಂದ ನಾನು ಸೇರಿದಂತೆ ಮಾಜಿ ಸಚಿವರಾದ ಎನ್.ಮಹೇಶ್, ಕೋಟೆ ಎಂ.ಶಿವಣ್ಣ, ಮಾಜಿ ಶಾಸಕ ಎಸ್.ಬಾಲರಾಜು, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಅವರು ಪಕ್ಷದಿಂದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇವೆ. ನಾವೆಲ್ಲರೂ ಸ್ಥಳೀಯರಾಗಿದ್ದೇವೆ ನಮ್ಮ ಪೈಕಿಯಲ್ಲಿ ಒಬ್ಬರಿಗೆ ಅವಕಾಶ ಕಲ್ಪಿಸಿಕೊಟ್ಟರು ನಾವೆಲ್ಲರೂ ಪಕ್ಷದ ತೀರ್ಮಾನಕ್ಕೆ ಬದ್ಧರಾಗಿ ಪಕ್ಷದ ಗೆಲುವಿಗೆ ಶ್ರಮಿಸುತ್ತೇವೆ ಎಂದರು.

2008 ರಲ್ಲಿ ಮಾಜಿ ಸಚಿವರಾದ ದಿವಂಗತ ಬೆಂಕಿ ಮಹದೇವಪ್ಪ ಅವರ ನಾಯಕತ್ವದಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದು, ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 44 ವರ್ಷಗಳಿಂದ ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ಜನಪರ ಹೋರಾಟ ಮಾಡಿದ್ದೇನೆ. ಸಂಸದರಾದ ಶ್ರೀನಿವಾಸಪ್ರಸಾದ್, ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ, ಮಾಜಿ ಸಚಿವ ವಿ.ಸೋಮಣ್ಣ, ಗುಂಡ್ಲುಪೇಟೆ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಎನ್.ಮಹೇಶ್ ಅವರ ಪರ ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕೆಲಸ ಮಾಡಿದ್ದೇನೆ. ಈ ಬಾರಿಯು ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಆಗಲಿದೆ ಆಗಾಗಿ ಈ ಬಾರಿ ನನಗೊಂದು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಮಾಜಿ ಸಂಸದರಾದ ದಿವಂಗತ ಧ್ರುವನಾರಾಯಣ್ ಹಾಗೂ ಮಾಜಿ ಸಂಸದರಾದ ಕಾಗಲವಾಡಿ ಶಿವಣ್ಣ ಸ್ಥಳೀಯರು ಆದರಿಂದ ಸಂಸತ್‌ನಲ್ಲಿ ಕ್ಷೇತ್ರದ ಅಭಿವೃದ್ದಿಯ ಬಗ್ಗೆ ಗಮನ ಸೆಳೆದಿದ್ದರು. ಧ್ರುವನಾರಾಯಣ್ ಅವರು ಅಭಿವೃದ್ದಿಯಲ್ಲಿ ರಾಜ್ಯದಲ್ಲಿ ನಂಬರ್ ಒನ್ ಸಂಸದರಾಗಿ ಹೆಸರುಪಡೆದುಕೊಂಡಿದ್ದರು, ಕಾಗಲವಾಡಿ ಶಿವಣ್ಣ ಅವರು ಸಂಸತ್‌ನಲ್ಲಿ ಕನ್ನಡದಲ್ಲಿ ಮಾತನಾಡಿ ಗಮನ ಸೆಳೆದಿದ್ದರು ಎಂದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಂದ ಜನತೆ ಬೇಸತ್ತು ಹೋಗಿದ್ದು, ಪ್ರಧಾನಮಂತ್ರಿ ನರೇಂದ್ರಮೋದಿಯವರ ಆಡಳಿತ, ನಾಯಕತ್ವ ಒಪ್ಪಿಕೊಂಡಿದ್ದು ದೇಶದಲ್ಲಿ ಮೋದಿಯವರ ಅಲೆಯಿದ್ದು ಮೂರನೇ ಬಾರಿಯು ಮೋದಿ ಅವರನ್ನು ಪ್ರಧಾನಿ ಮಾಡಲು ಜನತೆ ಉತ್ಸುಕರಾಗಿದ್ದಾರೆ. ಚಾಮರಾಜನಗರ ಲೋಕಸಭಾ ಸಭಾ ಸೇರಿದಂತೆ ರಾಜ್ಯದ 28 ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಸದರಾದ ವಿ.ಶ್ರೀನಿವಾಸಪ್ರಸಾದ್ ಅವರು ತಮ್ಮ ಅಳಿಯಂದಿರು, ಕುಟುಂಬದ ಪರ ನಿಲ್ಲದೆ ಸ್ಥಳೀಯರಿಗೆ ಟಿಕೆಟ್ ಕೊಡಿಸುವ ಮೂಲಕ ಕಳೆದ ಸಾರಿ ಕ್ಷೇತ್ರದ ಮತದಾರಪ್ರಭು ಕೊಟ್ಟಿರುವ ಸಹಕಾರ, ಆಶೀರ್ವಾದಕ್ಕೆ ಪಾತ್ರರಾಗಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಬಸವನಪುರ ರಾಜಶೇಖರ್, ಗ್ರಾ.ಪಂ.ಸದಸ್ಯ ಶಿವಕುಮಾರ್, ಅಸ್ಲಾಂಷರೀಫ್, ಜಿ.ಎಂ.ಶಂಕರ್, ಲಿಂಗರಾಜು, ಪರಶಿವಮೂರ್ತಿ ಹಾಜರಿದ್ದರು.



## ಕೇಂದ್ರಕನ್ನಡ ಸಾಹಿತ್ಯ ವೇದಿಕೆ ಹಾಸನ ತಾಲೂಕು ಘಟಕದ ವತಿಯಿಂದ

# 30ನೇ ಸಾಹಿತ್ಯ ಪಯಣ ಹೆಜ್ಜೆ

ಹಾಸನ : ಶಶಿಚಂದ್ರಿಕಾರವರ ''ರಸೋ ವೈ ಸಃ'' ಒಂದು ಲೇಖನ, ಪದ್ಯ, ಕಥೆ, ನಾಟಕಗಳನ್ನೊಳಗೊಂಡ ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ್ ಭಾಷೆಯನ್ನೊಳಗೊಂಡ ಕನ್ನಡ ಸಾಹಿತ್ಯದ ವೈವಿದ್ಯಮಯ ಸತ್ವಯುತ ಸಾಹಿತ್ಯಕೃತಿಯಾಗಿದೆಎಂದುಕೇಂದ್ರಕನ್ನಡ ಸಾಹಿತ್ಯ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್‌ಎಸ್.ಉಪ್ಪಾರ್ ಅಭಿಪ್ರಾಯಪಟ್ಟರು.

ಅವರು ಹಾಸನ ತಾಲ್ಲೂಕುಕೇಂದ್ರಕನ್ನಡ ಸಾಹಿತ್ಯ ವೇದಿಕೆ ಸಂಗೀತ ವಿದ್ವಾನ್ ಬಿ.ಎನ್.ಎಸ್. ಮುರುಳಿ ಪ್ರಾಯೋಜಕತ್ವದಲ್ಲಿ ಹಮ್ಮಿಕೊಂಡಿದ್ದ 30ನೇ ಸಾಹಿತ್ಯ ಪಯಣ ಹೆಜ್ಜೆಕಾರ್ಯಕ್ರಮದಲ್ಲಿ ವಿದುಷಿ ಶಶಿಚಂದ್ರಿಕಾರವರ ದ್ವಿತೀಯಕೃತಿ ''ರಸೋ ವೈ ಸಃ'' ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿ ಶಶಿಚಂದ್ರಿಕಾರವರು ನಮ್ಮ ನಡುವಿನ ಸಾಹಿತ್ಯ, ಸಂಗೀತಎರಡೂ ಮೇಳೈಸಿದ ಅಂತರ್ಮುಖಿ ಪ್ರತಿಭೆ.ಸದರಿಕೃತಿಯು ಸಪ್ತಸ್ವರ ಕಲಾ ಕೇಂದ್ರ ನಡೆದು ಬಂದಇಪ್ಪತ್ತೈದು ವರ್ಷಗಳ ಸುವರ್ಣ ಹೆಜ್ಜೆಗಳ ಜೊತೆಜೊತೆಗೆಇವರ ಬಹುಭಾಷಾ ಪಾಂಡಿತ್ಯ, ಸಂಗೀತ ಸಾಧನೆ, ದೇಶಪ್ರೇಮ, ಸಾಹಿತ್ಯಉತ್ಕಟತೆ, ಸುಖೀ ಸಮಾಜದ ಕನಸು ಇವರಕೃತಿಯುದ್ದಕ್ಕೂಓದುಗ 'ನೆದರು ಮುಖಾಮುಖಿಯಾಗುತ್ತದೆ.ಶಶಿ ಚಂದ್ರಿಕಾರವರ ಕವಿತೆಗಳು ದಾಸರ ಪದಗಳನ್ನು, ಸಂತರ ಪದಗಳನ್ನು ನೆನಪಿಸುತ್ತವೆ. ಗದ್ಯದ ಸದೃಢತೆ, ಕಾವ್ಯದಗಟ್ಟಿತನ, ಪದ ಜಿಪುಣತನಗಳು ಕವಯಿತ್ರಿಗೆ ಸಿದ್ದಿಸಿವೆ. ಬಹುಶಃ ಹಾಸನ ಜಿಲ್ಲೆಯಿಂದಕನ್ನಡ ಸಾರಸ್ವತ ಲೋಕಕ್ಕೆ ಸಂದಿದ ವಿಶಿಷ್ಟ ಮೌಲ್ಯಯುತ ಕೃತಿಗಳಲ್ಲಿ ಇದೂಸಹಒಂದಾಗಿದೆಎಂದರು.

ಹಾಸನ ತಾಲೂಕು ಕನ್ನಡ ಸಾಹಿತ್ಯ ವೇದಿಕೆ ಅಧ್ಯಕ್ಷೆ ಕೆ.ಸಿ.ಗೀತಾ ಕಾರ್ಯಕ್ರಮದಅಧ್ಯಕ್ಷತೆ ವಹಿಸಿ ಮಾತನಾಡಿ ಸಂಗೀತ ಆರಾಧಕಿಯಾದ ನನಗೆ ಶಶಿಚಂದ್ರಿಕಾರವರ ''ರಸೋ ವೈ ಸಃ'' ಕೃತಿಅತ್ಯಾನಂದ ನೀಡಿದೆ.ಸಂಪೂರ್ಣ ವರ್ಣಮಯವಾದ ಈ ಕೃತಿಯುಕೈಸೇರುತ್ತಲೇಓದುಗನ ಮನವನ್ನು ಮುದಗೊಳಿಸುತ್ತದೆ.ಇಲ್ಲಿನ ರಚನೆಗಳು ಸಾಮಾನ್ಯರಿಗೆ ಅರ್ಥವಾಗುವುದು ಕಷ್ಟ.ಇವರ ಭಾಷಾ ಪ್ರೌಢಿಮೆಇಲ್ಲಿ ಎದ್ದುಕಾಣುತ್ತದೆ. ನಾನು ಓದಿದ ಶ್ರೇಷ್ಠ ಕೃತಿಗಳಲ್ಲಿ ಇದೂಒಂದುಎಂದರು.

ಹಿರಿಯ ಸಂಸ್ಕೃತ ವಿದ್ವಾಂಸರಾದಪಿ.ವಿ.ಪರಮೇಶ್ವರ ಭಟ್‌ರವರುಕೃತಿಕುರಿತು ಮಾತನಾಡಿ ಶಶಿಚಂದ್ರಿಕಾರವರ ''ರಸೋ ವೈ ಸಃ'' ಒಂದು ವಿದ್ವತ್‌ಪೂರ್ಣಕೃತಿಯಾಗಿದೆ. ಬಹುಭಾಷಿತ, ಬಹುಪ್ರಕಾರದ ಸಮ್ಮಿಳಿತದ ಕೃತಿ. ಇದರಲ್ಲಿನ ರಚನೆಗಳು ಕೇವಲ ಹಾಡುಗಳಲ್ಲ. ಸಾಮಾಜಿಕ ವ್ಯವಸ್ಥೆಯ ದರ್ಪಣಗಳಾಗಿವೆ. ಮಾನವೀಯ ಬದುಕಿಗೆ ಬೇಕಾಗಿರುವ ಮೌಲ್ಯಗಳಾಗಿವೆ ಎಂದರು.

ಹಿರಿಯ ಸಾಹಿತಿಚಂದ್ರಕಾಂತ ಪಡೆಸೂರಅವರಿಕೃತಿಕುರಿತು ಮಾತನಾಡಿಕ್ಷುಲ್ಲಕ ಆಸಕ್ತಿಗಳಿಗೆ ಅಕಲ್ಪನೀಯ ಮಾನವ ಸಾಮರ್ಥ್ಯ ಪೋಲಾಗುತ್ತಿರುವ ಬಗ್ಗೆ ಕವಯಿತ್ರಿ ಶಶಿಚಂದ್ರಿಕಾರವರ



ಆತಂಕ ''ರಸೋ ವೈ ಸಃ'' ಕೃತಿಯಲ್ಲಿ ಪಲ್ಲವಿಸಿದೆ.ಯಾಗ, ಯೋಗ, ಭೋಗ, ತ್ಯಾಗದದಟ್ಟವಾದಛಾಯೆಇಲ್ಲಿಓದುಗನನ್ನು ಸುತ್ತುವರಿಯುತ್ತದೆ.ರಾಜಾಶ್ರಯದಕಾಲದ ಕವಿಗಳ ಬದುಕು, ಜನಾಶ್ರಯದ ಕವಿಗಳ ಬದುಕು, ನಿತ್ಯ ನಿರಂತರವಾಗಿಕಾಡುವ ಪ್ರತಿಭಾ ಮತ್ಸರಗಳ ಬಗ್ಗೆ ಕವಯಿತ್ರಿ ನೇರ ಹಾಗೂ ನಿಷ್ಠುರವಾಗಿತಮ್ಮ ಬರಹದಲ್ಲಿಕಟ್ಟಿಕೊಟ್ಟಿದ್ದಾರೆ. ಜೀವಭಾವದಲ್ಲಿರುವ ತಪಸ್ವಿಗೆ ಲೋಕಜೀವನದಅಗ್ನಿ ಪರೀಕ್ಷೆಯೂ ಏನೂ ಮಾಡಲಾರದುಎಂಬುದನ್ನು ಮನೋಜ್ಞವಾಗಿ ತಿಳಿಸಿದ್ದಾರೆ ಎಂದರು.

ಕವಯಿತ್ರಿರೇಖಾಪ್ರಕಾಶ್‌ಕೃತಿ ಬಗ್ಗೆ ಮಾತನಾಡಿ ಬೆಳೆಯುವ ಸಸಿಗೆ, ನೀರು, ಗೊಬ್ಬರ, ರಕ್ಷಣೆಕೊಟ್ಟರೆ ಆ ಸಸಿ ಸಮೃದ್ಧಿಯಾಗಿ ಬೆಳೆಯುತ್ತದೆ, ಹಾಗೆಯೇ ಬೆಳೆಯುವ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರಕೊಟ್ಟರೆ ಆ ಮಗು ಒಳ್ಳೆಯ ಸತ್ಪಜೆಯಾಗಿ ಬೆಳೆಯುತ್ತದೆ, ಉತ್ತಮ ಹವ್ಯಾಸಗಳನ್ನು ಮಕ್ಕಳಿಗೆ ರೂಢಿಸಿಕೊಳ್ಳಲು ನೆರವಾಗಬೇಕು, ಉತ್ತಮ ಹವ್ಯಾಸಗಳೆಂದರೆ, ಒಳ್ಳೆಯ ಪುಸ್ತಕ ಓದುವುದು, ಬರೆಯುವ ಹವ್ಯಾಸ, ಹಾಗೂ ಸಂಗೀತ ಕಲಿಕೆ ಇತ್ಯಾದಿ ಇತ್ಯಾದಿ, ಸಂಗೀತಎಂಬುದುಎಂತ ಅರಸಿಕನನ್ನು ರಸಿಕನನ್ನಗಿಸುತ್ತೆ, ಶಶಿ ಚಂದ್ರಿಕ ಮೇಡಂರವರ ಪುಸ್ತಕದಲ್ಲಿ ಸಂಗೀತದರಸಧಾರೆಯೇ ಹರಿದಿದೆಎಂದರು.

ಕವಯಿತ್ರಿಗಿರಿಜಾ ನಿರ್ವಾಣಿ ಮಾತನಾಡಿ ವಿದುಷಿ ಶಶಿ ಚಂದ್ರಿಕಾರವರ ರಸೋ ವೈ ಸ: ಕೃತಿಯಲ್ಲಿ ಸಂಗೀತದ ಕಲೆ ನಡೆದು ಬಂದ ಹಾದಿಯನ್ನು ವರ್ಣಿಸಲಾಗಿದೆ, ವಾದ್ಯಗಳಿಂದಲೂ ಸಹ ಸಂಗೀತವನ್ನು ಆಲಿಸಬಹುದು. ಕೊಳಲನಾದಕೆ ತುರುಗಳು ಬಂದುಗಾನವನ್ನು ಆಲಿಸುವುದು, ಮೃಗ ಖಗ ಸಸ್ಯಗಳೆಲ್ಲ ತಲೆದೂಗುವುದು... ವಿದ್ಯಾರಣ್ಯ ಸ್ವಾಮಿಗಳು ಸಂಗೀತ ಸಮಯ ಸಾರ ಎಂಬ ಹೆಸರನ್ನು ಪಡೆದವರು . ವಚನ ಸಾಹಿತ್ಯಕ್ಕೆ ಬಂದಾಗ ಹಲವು ವಚನ ಸಾಹಿತ್ಯಕಾರರು ಸಂಗೀತಕ್ಕೆತಮ್ಮಅಪಾರ ಕೊಡಗೆಗಳನ್ನು ನೀಡಿದ್ದಾರೆ.ಕವಿ ಶ್ರೇಷ್ಟನಾದ ಕಾಳಿದಾಸ ಕವಿಯು ಸಹ ತಮ್ಮ ಕಾವ್ಯಗಳಲ್ಲಿ ಸಂಗೀತಕ್ಕೆ ಪ್ರಾಧ್ಯಾನತೆಯನ್ನು ನೀಡಿದ್ದಾರೆಎಂದರು.

ಕವಿ ವಿನಯಚಂದ್ರಅವರುಕೃತಿಕುರಿತು ಮಾತನಾಡಿ ವಿದುಷಿ ಶಶಿಚಂದ್ರಿಕಾ ಅವರಕೃತಿರಸೋ ವೈ ಸಃ ಬಹಳ ಅಪರೂಪದಕೃತಿಯಾಗಿದೆ.ಇದರಲ್ಲಿ ಸಾಹಿತ್ಯ ಸಂಗೀತಅಧ್ಯಾತ್ಮ ಮೂರೂ ಸಹ ಮೇಳೈಸಿವೆ. ಕಾವ್ಯ, ಲೇಖನ, ನೃತ್ಯರೂಪಕದಂತಹ ಸಾಹಿತ್ಯದ ನಾಲ್ಕೈದು ಪ್ರಕಾರಗಳು ಇಲ್ಲಿಒಟ್ಟಾಗಿ ಸೇರಿದ್ದರೂ ಸಹ ಇವೆಲ್ಲವುಗಳ ಅಂತಃಸ್ಥಾಯಿಯಾಗಿಇಲ್ಲಿ ಸಂಗೀತವಿದೆ. ಅತಿಯಾದ ಸ್ವಕೇಂದ್ರಿತ ಚಿಂತನೆಗಳನ್ನು ತ್ಯಜಿಸಬೇಕು, ಮಾನಾಪಮಾನಗಳನ್ನು ಭಗವಂತನಿಗೆಅರ್ಪಣೆ ಮಾಡಿ ಮುನ್ನಡೆಯಬೇಕುಎನ್ನುವಂತಹ ಅನೇಕ ಮಾತುಗಳಲ್ಲಿ ಮನೋವೈಜ್ಞಾನಿಕ ಮತ್ತುಅಧ್ಯಾತ್ಮಒಟ್ಟೊಟ್ಟಾಗಿ ಸಾಗಿಬರುವುದನ್ನು ಗಮನಿಸಬಹುದು.ಸಾಹಿತ್ಯ ಮತ್ತು ಸಂಗೀತಎರಡರಲ್ಲೂ ಶಶಿಚಂದ್ರಿಕಾರವರು ಪರಿಣಿತಿಯನ್ನು ಸಾಧಿಸಿರುವುದರಿಂದ ನಾಡಿನಖ್ಯಾತ ವಾಗ್ಗೇಯಕಾರರ ಹಾದಿಯಲ್ಲಿ ಮುನ್ನಡೆದು ಶಾಸ್ತ್ರೀಯ ಸಂಗೀತಕ್ಕೆ ಬೇಕಾದ ಸಾಹಿತ್ಯರಚನೆಯನ್ನು ಮಾಡುವುದರ ಮೂಲಕ ಖ್ಯಾತಿಯನ್ನು ಗಳಿಸಲಿ ಎಂದರು.

ಜಯದೇವಪ್ಪ, ಬಿ.ಎನ್.ಎಸ್.ಮುರುಳಿ, ವಾಸು ಸಮುದ್ರವಳ್ಳಿ, ಗಿರೀಶ್ ಬಾಬು ಹೊಸಮನೆ, ಪ್ರಕಾಶ್, ಮಂಜುನಾಥ್, ಪಂಕಜ, ಕು.ವಿಮರ್ಶಾಚಂದ್ರ, ಎ.ಆರ್. ಪ್ರೇಮಲತಾ, ಶ್ರೀರಾಜೇಂದ್ರ, ಮಾಲಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ನಂತರ ನಡೆದ ಕವಿಗೋಷ್ಠಿಯಲ್ಲಿಚಂದ್ರಕಾಂತ ಪಡೆಸೂರ, ಶಶಿಚಂದ್ರಿಕಾ, ನೀಲಾವತಿ ಸಿ.ಎನ್, ಸರೋಜಟಿ.ಎಂ, ಎಚ್.ಬಿ.ಚೂಡಾಮಣಿ, ಡಾ.ಎಂ. ಮಂಜುನಾಥ್, ಭಾರತಿಎಚ್.ಎನ್, ಕುಮಾರ್ ಹೊನ್ನೇನಹಳ್ಳಿ, ವಿನಯಚಂದ್ರ, ಧರ್ಮಕೆರಲೂರು, ರೇಖಾ ಪ್ರಕಾಶ್, ಗಿರಿಜಾ ನಿರ್ವಾಣಿ, ಕೆ.ಸಿ.ಗೀತಾ ಸೇರಿದಂತೆ ಹಲವರುಕಾವ್ಯ ವಾಚನ ಮಾಡಿದರು.

## ದುಗ್ಗಹಟ್ಟಿ, ಅಂಬಳೆ ಗ್ರಾಮದಲ್ಲಿ ಸಂವಿಧಾನ ಜಾಗೃತಿ

**ಚಾಮರಾಜನಗರ:** ಪ್ರತಿಯೊಬ್ಬ ಭಾರತೀಯ ಪ್ರಜೆಯು ಸಮಾಜದಲ್ಲಿ ಸೂಕ್ತ ಸ್ಥಾನಮಾನ ಪಡೆದು ಉತ್ತಮ ಬದುಕು ಕಟ್ಟಿಕೊಳ್ಳಲು ಸಂವಿಧಾನ ಎಲ್ಲಾ ರೀತಿಯ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ ಎಂದು ಮಾಂಬಳ್ಳಿ ಶಾಲೆಯ ಶಿಕ್ಷಕರಾದ ಮಹದೇವು ಅವರು ತಿಳಿಸಿದರು.

ತಾಲ್ಲೂಕಿನ ದುಗ್ಗಹಟ್ಟಿ ಗ್ರಾಮ ಪಂಚಾಯಿತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಇಂದು ಆಯೋಜಿಸಿದ್ದ ಸಂವಿಧಾನ ಜಾಗೃತಿ ಜಾಥಾದ ವೇದಿಕೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದರು.

ಸಂವಿಧಾನ ನಮಗೆ ನೀಡಿರುವ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಅರಿತುಕೊಂಡು ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಬಹುದು ಎಂದರು.

ಸ್ವಾತಂತ್ರ್ಯ ಭಾರತದ ನಂತರದ ದಿನಗಳಲ್ಲಿ ದೇಶದಲ್ಲಿ ಅನೇಕ ಸವಾಲುಗಳು ಎದುರಾದ ಸಂದರ್ಭದಲ್ಲಿ ದೇಶದ ಆಡಳಿತ ನಿರ್ವಹಣೆಗಾಗಿ ಕಾನೂನಿನ ಅವಶ್ಯಕತೆ ಕಂಡುಬರುತ್ತದೆ. ದೇಶವನ್ನು ಏಕತೆಯಿಂದ ನಡೆಸಲು ಒಂದು ಕಾನೂನು ಸುವ್ಯವಸ್ಥೆಯನ್ನು ರೂಪಿಸುವ ಸಂವಿಧಾನ ಅವಶ್ಯಕತೆ ಇರುವುದನ್ನು ಮನಗಂಡು ಡಾ. ಬಾಬು ರಾಜೇಂದ್ರ ಪ್ರಸಾದ್ ರವರ ಅಧ್ಯಕ್ಷತೆಯಲ್ಲಿ ಸಂವಿಧಾನ ರಚನ ಸಭೆ ನಡೆಸಿ ಸಂವಿಧಾನ ಕರುಡು ರಚಿಸಲು ಸಮಿತಿಯನ್ನು ರಚಿಸಿ ಆ ಸಮಿತಿಗೆ ಡಾ. ಬಿ.ಆರ್ ಅಂಬೇಡ್ಕರ್‌ರವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜೇಶ ಮಾತನಾಡಿ ದೇಶದ ಕಟ್ಟ ಕಡೆಯ ವ್ಯಕ್ತಿಗೂ ಸಂವಿಧಾನ ಸ್ವಾತಂತ್ರ್ಯ, ಸಮಾನತೆಯನ್ನು ನೀಡಿ ಸರ್ವರ ಏಳಿಗೆಗೂ ನೆರವಾಗಿದೆ. ಇಂದಿನ ಮಕ್ಕಳು ಸಂವಿಧಾನದ ಬಗ್ಗೆ ಹೆಚ್ಚು ತಿಳಿದುಕೊಂಡು ಜಾಗೃತರಾಗಬೇಕು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಗ್ರಂಥಾಲಯ ಕೇಂದ್ರಕ್ಕೆ ಪುಸ್ತಕ ಜೋಳಿಗೆಯ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವಂತಹ ಪುಸ್ತಕಗಳನ್ನು ನೀಡಲಾಯಿತು.



## ಕಚೇರಿ ಕಾರ್ಯಾರಂಭ

**ಕೋಲಾರ :** ನಗರದ ಮಿನಿ ವಿಧಾನ ಸೌದ ಮೊದಲನೇ ಮಹಡಿಯಲ್ಲಿ ಹಲವಾರು ತಿಂಗಳುಗಳಿಂದ ಹಿರಿಯ ನೋಂದಣಾಧಿಕಾರಿ ಕಛೇರಿ ಕಾರ್ಯ ನಿರ್ವಹಿಸುತ್ತಿದ್ದು ದಿನನಿತ್ಯ ವಿಕಲ ಚೇತನರು ,ಹಿರಿಯ ನಾಗರಿಕರು ಮತ್ತು ವಯಸ್ಸಾದ ಮಹಿಳೆಯರು ಕಛೇರಿ ಕೆಲಸ ಕಾರ್ಯಗಳಿಗೆ ಮೆಟ್ಟಿಲೇರಿ ಬರಲು ಕಷ್ಟವಾಗುತ್ತಿತ್ತು. ಹಾಗಾಗಿ ಮೇಲಾಧಿಕಾರಿಗಳೊಡನೆ ಚರ್ಚಿಸಿ ಮಿನಿ ವಿಧಾನ ಸೌಧದ ನೆಲಮಹಡಿಯಲ್ಲಿ ಕಛೇರಿ ಕಾರ್ಯರಂಭ ಮಾಡಿದ್ದೇವೆ. ವೃದ್ಧರು, ಅಂಗ ವಿಕಲರು ಮತ್ತು ವಯಸ್ಸಾದ ಮಹಿಳೆಯರು ಮೊದಲನೇ ಮಹಡಿಗೆ ಬರುವಂತಿಲ್ಲ. ಅವರ ಸಂಪೂರ್ಣ ಕೆಲಸ ಕಾರ್ಯಗಳು ಇಲ್ಲೇ ಮಾಡಿಕೊಡಲಾಗುತ್ತದೆ ಎಂದು ಹಿರಿಯ ಉಪ ನೋಂದಣಾಧಿಕಾರಿ ಪ್ರಸನ್ನ ಕುಮಾರ್ ತಿಳಿಸಿದರು. ಕೋಲಾರ ತಾಲೂಕಿನ ಜನತೆಯ ಬಹುದಿನಗಳ ಬೇಡಿಕೆ ಇದಾಗಿದ್ದು. ಇಂದು ಸಮಸ್ಯೆ ಬಗೆಹರಿದಿದೆ. ನೆಲಮಹಡಿಯ ಕಛೇರಿ ಕಾರ್ಯರಂಭದಿಂದ ವಿಕಲ ಚೇತನರು ಹಿರಿಯ ನಾಗರೀಕರು ಮತ್ತು ಮಹಿಳೆಯರು ಹೆಚ್ಚಿನ ಸಮಯ ಕಾಯುವ ಅವಶ್ಯಕತೆ ಇಲ್ಲ . ಇಲ್ಲಿಗೆ ಬರುವ ಜನಸಾಮಾನ್ಯರನ್ನು ಹೆಚ್ಚಿನ ಸಮಯ ಕಾಯಿಸದೆ ಆದಷ್ಟು ಬೇಗ ಕೆಲಸ ಮಾಡಿಕೊಡುವಂತೆ ಅಧಿಕಾಳಿರಗೆ ಸೂಚನೆ ನೀಡಿದ್ದೇವೆ. ದಯವಿಟ್ಟು ವಯಸ್ಸಾದವರು ಮೆಟ್ಟಿಲೇರಿ ಬರಬೇಡಿ. ನಿಮಗಾಗಿ ಈ ಸೇವೆ ಪ್ರಾರಂಭ ಮಾಡಿದ್ದೇವೆ. ಇದರ ಸೇವೆ ಪಡೆದುಕೊಳ್ಳಿ. ನಿಮ್ಮ ಜೊತೆಗಾರರಿಗೂ ಈ ಮಾಹಿತಿ ನೀಡಿ ಎಂದರು.

## ರೈತರಿಗೆ ಬೆಳೆ ಹಾನಿ ಪರಿಹಾರಕ್ಕೆ ಹಣ ಬಿಡುಗಡೆ

**ಚಿಕ್ಕಬಳ್ಳಾಪುರ:** ಮಾನ್ಯ ಕೇಂದ್ರ ಸರ್ಕಾರದ SDRENDRF ಮಾರ್ಗಸೂಚಿಯಂತೆ ಬರ ಪರಿಸ್ಥಿತಿಯಿಂದ ಶೇ.33% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಉಂಟಾದ ಬೆಳೆ ಹಾನಿಗೆ ಗರಿಷ್ಟ 2 ಹೆಕ್ಟೇರ್‌ಗಳಿಗೆ ಸೀಮಿತಗೊಳಿಸಿ ಮಳೆಯಾಶ್ರಿತ ಬೆಳಗೆ ಪ್ರತಿ ಹೆಕ್ಟೇರ್‌ಗೆ ರೂ. 8,500/– ನೀರಾವರಿ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ. 17,000/– ಮತ್ತು ಬಹುವಾರ್ಷಿಕ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ. 22,500/– ನಿಗದಿಪಡಿಸಲಾಗಿರುತ್ತದೆ. ಮಾನ್ಯ ಕೇಂದ್ರ ಸರ್ಕಾರದಿಂದ NDRF ರಡಿ ಈವರೆಗೂ ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಮಾನ್ಯ ರಾಜ್ಯ ಸರ್ಕಾರದಿಂದ 2023ನೇ ಸಾಲಿನ ಮುಂಗಾರು ಹಂಗಾಮಿನ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ ಅಥವಾ SDRF/ NDRF ಮಾರ್ಗಸೂಚಿಯಂತೆ ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ಪ್ರತಿ ರೈತರಿಗೆ ಗರಿಷ್ಠ ರೂ 2,000/– ರವರೆಗೆ ರೈತರಿಗೆ ಪಾವತಿಸಲು ಮಾನ್ಯ ಸರ್ಕಾರವು ಅನುಮತಿಯನ್ನು ನೀಡಲಾಗಿರುತ್ತದೆ ಮತ್ತು ಮುಂದಿನ ದಿನಗಳಲ್ಲಿ ಮಾನ್ಯ ಕೇಂದ್ರ ಸರ್ಕಾರದಿಂದ NDRF ಅನುದಾನ ಬಿಡುಗಡೆಯಾದ ನಂತರ, SDRE ಮಾರ್ಗಸೂಚಿಗಳ ಪ್ರಕಾರ ಹೆಚ್ಚುವರಿ ಮೊತ್ತಕ್ಕೆ ಅರ್ಹತೆಯಿರುವ ರೈತರಿಗೆ ಹೆಚ್ಚುವರಿ ಬೆಳೆಹಾನಿ ಪರಿಹಾರ ಬಿಡುಗಡೆಗೊಳಿಸಲಾಗುವುದು ಎಂದು ತಿಳಿಸಿರುತ್ತಾರೆ. ಮಾನ್ಯ ಸರ್ಕಾರದ ನಿರ್ದೇಶನದಂತೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2023ನೇ ಸಾಲಿನ ಮುಂಗಾರು ಹಂಗಾಮಿನ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಸಮೀಕ್ಷೆಯಲ್ಲಿ ಎಫ್.ಐ.ಡಿ. ಹೊಂದಿರುವ ರೈತರ ಮಾಹಿತಿಯನ್ನಾಧರಿಸಿ ಪರಿಹಾರ ತಂತ್ರಾಂಶದ ಮೂಲಕ ಹಂತ ಹಂತವಾಗಿ ಪರಿಹಾರ ವಿತರಣೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅದರಂತ ಒಂದರಿಂದ ಏಳನೇ ಹಂತಗಳಲ್ಲಿ ಒಟ್ಟು 96700 ರೈತರಿಗೆ ರೂ. 17.60 ಕೋಟಿಗಳ ಇನ್‌ಪುಟ್ ಸಬ್ಸಿಡಿಯನ್ನು ಜಮೆ ಮಾಡಲು ಅನುಮೋದನೆ ನೀಡಲಾಗಿರುತ್ತದೆ. ಮಾನ್ಯ ಸರ್ಕಾರದಿಂದ ನೇರವಾಗಿ ಆಧಾರ ಸಂಖ್ಯೆ ಹೊಂದಿರುವ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರ ಧನವನ್ನು ಜಮೆ ಮಾಡಿರುತ್ತಾರೆ ಹಾಗೂ ಬಾಕಿ ಉಳಿದ ರೈತರಿಗೆ ಹಂತ–ಹಂತವಾಗಿ ಪರಿಹಾರ ನೀಡುವುದು ಪ್ರಗತಿ ಹಂತದಲ್ಲಿದ್ದು, ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಆಯಾ ತಹಶೀಲ್ದಾರ್ ಕಾರ್ಯಾಲಯಕ್ಕೆ ಭೇಟಿ ನೀಡಬಹುದು ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ಜಿಲ್ಲೆಯ ರೈತರಿಗೆ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲ್ಲೂಕು ಕನಕ ನೌಕರರ ಕ್ಷೆಜಮಾಭಿವೃದ್ಧಿ ಸಂಘದ ವತಿಯಿಂದ ತಾಲ್ಲೂಕು ಕುರುಬ ಸಮಾಜ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಯಲ್ಲಿ 2022–23ನೇ ಸಾಲಿನಲ್ಲಿ ಶೇ.90 ಕ್ಕಿಂತ ಮೇಲ್ಪಟ್ಟು ಅಂಕ ಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತ ಕುರುಬ ಸಮಾಜದ ಬಂಧುಗಳು ಈ ಕೆಳಕಂಡ ಸಂಘ ದ ಪದಾಧಿಕಾರಿಗಳಾದ. ಆರ್. ಪರಶಿವಮೂರ್ತಿ.9481555189, ರಮೇಶ್ ಕೆಂಬಾಳ್.9742918664, ಸುರೇಶ್ 9449912873, ಬಸವರಾಜ್ ಪಲ್ಲಕ್ಕಿ 7829298149, ದುರ್ಗಯ್ಯ.8660645607, ಶಿವಕುಮಾರ್ 9845035610, ರಾಜಶೇಖರ್ 8105038391, ವೆಂಕರಮಣ 9380898389, ಇವರುಗಳಲ್ಲಿ ಜೆರಾಕ್ಸ್ ಅಂಕಪಟ್ಟಿಯೊಂದಿಗೆ ಹೆಸರು ನೋಂದಾಯಿಸಿಕೊಳ್ಳಲು ಕೋಲಾಗಿದೆ.

## ಜಗತ್ತಿಗೆ ಸಮಾನತೆ ಸಾರಿದ ಕರುನಾಡ ಮಹಾಪುರುಷ

**ಚಾಮರಾಜನಗರ:** 12ನೇ ಶತಮಾನದಲ್ಲಿಯೇ ಜಗತ್ತಿಗೆ ಸಮಾನತೆಯನ್ನು ಭೋದಿಸಿ, ಸ್ತ್ರೀಯರಿಗೆ ಸ್ವಾತಂತ್ರವನ್ನು ಕಲ್ಪಿಸಿಕೊಟ್ಟ ಮಹಾಪುರುಷ ಬಸವಣ್ಣ ಅವರು ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕಿ ಪದ್ಮಜಾ ತಿಳಿಸಿದರು. ನಗರದ ಜಿಲ್ಲಾಡಳಿತ ಭವನದಲ್ಲಿ ಸರ್ಕಾರದ ಆದೇಶದಂತೆ ಸಾಂಸ್ಕೃತಿ ರಾಯಭಾರಿ ಬಸವಣ್ಣ ಅವರು ಭಾವಚಿತ್ರ ಅಳವಡಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಾಂಸ್ಕೃತಿಕ ರಾಯಭಾರಿ ಬಸವಣ್ಣ ಅವರ ಭಾವಚಿತ್ರವನ್ನು ಅನಾವರಣ ಮಾಡಿ ಅವರು ಮಾತನಾಡಿದರು. ಅನುಭವ ಮಂಟಪವನ್ನು ಸ್ಥಾಪನೆ ಮಾಡಿ, ಎಲ್ಲಾ ವರ್ಗದವರು ಹಾಗೂ ಎಲ್ಲಾ ಧರ್ಮೀಯರಿಗೆ ಸಮಾನವಾದ ಅವಕಾಶಗಳನ್ನು ನೀಡುವ ಮೂಲಕ ಸಮಾಜ ಪರಿವರ್ತನೆಗೆ ಮುಂದಾಗಿದ್ದರು. ಅಂದಿನ ಅನುಭವ ಮಂಟಪದ ಪರಿಕಲ್ಪನೆಯೇ ಇಂದಿನ ಸಂಸತ್ ಹಾಗೂ ವಿಧಾನಸಭೆ ಯಾಗಿದೆ. ಅವರ ತತ್ವ ಆದರ್ಶಗಳು ಹಾಗೂ ವಚನಗಳ ಸಾರವನ್ನು ತಿಳಿದುಕೊಂಡು ನಡೆಯುವ ಮೂಲಕ ಸಮ ಸಮಾಜವನ್ನು ನಿರ್ಮಾಣ ಮಾಡೋಣ ಎಂದರು.

## ನಾಡುಕಂಡ ಶ್ರೇಷ್ಠ ರಾಜಕಾರಣಿ ಕೆಂಗಲ್ ಹನುಮಂತಯ್ಯ

**ಚನ್ನಪಟ್ಟಣ:** ನಮ್ಮ ರಾಜ್ಯದ ಹಲವು ಧೀಮಂತ ಹಾಗೂ ಪ್ರಭಾವಿ ರಾಜಕೀಯ ನಾಯಕರನ್ನು ಹೈಕಮಾಂಡ್ ಎನಿಸಿಕೊಳ್ಳುವ ದಿಲ್ಲಿಯ ನಾಯಕರು ರಾಜಕೀಯವಾಗಿ ಮುಗಿಸಿದರು. ಅದರಲ್ಲಿ ಈ ನಾಡುಕಂಡ ಶ್ರೇಷ್ಠ ರಾಜಕಾರಣಿ ಕೆಂಗಲ್ ಹನುಮಂತಯ್ಯನವರು ಸಹ ಒಬ್ಬರು ಎಂದು ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದರು.

ತಾಲೂಕಿನ ಮತ್ತೀಕೆರೆ ಶೆಟ್ಟಿಹಳ್ಳಿಯ ನಿವೃತ್ತ ಶಿಕ್ಷಕ ಶ್ರೀನಿವಾಸ್ ರವರ ತೋಟದಲ್ಲಿರುವ ಸಾಹಿತ್ಯ ಕುಟೀರದಲ್ಲಿ ಜೈ ಹಿಂದೂಸ್ತಾನ್ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಕೆಂಗಲ್ ಹನುಮಂತಯ್ಯ ಸಂಸ್ಮರಣೆ, ಕವಿಗೋಷ್ಠಿ ಹಾಗೂ ಗೌರವ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಕೆಂಗಲ್ ಹನುಮಂತಯ್ಯನವರು ದೇಶ ಹಾಗೂ ನಮ್ಮ ರಾಜ್ಯ ಕಂಡ ಅಪರೂಪದ ರಾಜಕಾರಣಿ. ಕೇವಲ ರಾಜಕಾರಣಿಯಷ್ಟೇ ಅಲ್ಲದೇ ಅವರೊರ್ವ ಸಾಹಿತ್ಯ ಹಾಗೂ ಸಂಗೀತಪ್ರೇಮಿಯಾಗಿದ್ದರು. ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಅವರು ನೀಡಿದ ಕೊಡುಗೆಗಳು ಅಪಾರ. ಆಧುನಿಕ ಕರ್ನಾಟಕದ ನಿರ್ಮಾಣಕ್ಕೆ ತಮ್ಮದೇ ಆದ ಅಮೂಲ್ಯ ಕೊಡುಗೆ ಕೊಟ್ಟ ಮಹಾನಾಯಕರು. ಭವ್ಯವಾದ ವಿಧಾನಸೌಧ ನಿರ್ಮಾಣ ಮಾಡುವ ಮೂಲಕ ರಾಜ್ಯದ ಕೀರ್ತಿಯನ್ನು ಬೆಳಗಿಸಿದವರು. ಅಪಾರವಾದ ದೂರದೃಷ್ಟಿಯ ಹೊಂದಿದ್ದ ಅವರು, ಇಡೀ ವಿಶ್ವವೇ ಮೆಚ್ಚುವ ಆಡಳಿತ ಸೌಧವನ್ನು ನಿರ್ಮಾಣ ಮಾಡಿದರು ಎಂದು ಸ್ಮರಿಸಿದರು.

ಕೆಂಗಲ್ ಹನುಮಂತಯ್ಯನವರಿಗೆ ತಾವೇ ನಿರ್ಮಿಸಿದ ವಿಧಾನಸೌಧದಲ್ಲಿ ಆಡಳಿತ ಮಾಡುವ ಅವಕಾಶ ಸಿಗಲಿಲ್ಲ. ಅವರ ಆಡಳಿತ ಚಾಕಚಾಕ್ಯತೆಯನ್ನು ಗಮನಿಸಿ ಪ್ರೋತ್ಸಾಹಿಸಬೇಕಾದ ಕಾಂಗ್ರೆಸ್ ನ ದೆಹಲಿ ನಾಯಕರು, ಅವರನ್ನು ರಾಜಕೀಯವಾಗಿ ಹಣಿಯುವ ಕೆಲಸವನ್ನು ತೆರೆಮರೆಯಲ್ಲಿ ಯಶಸ್ವಿಯಾಗಿ ನಡೆಸಿದರು. ಕೇವಲ ಕೆಂಗಲ್ ಹನುಮಂತಯ್ಯನವರಷ್ಟೇ ಅಲ್ಲದೇ ರಾಜ್ಯದ ಹಲವಾರು ಧೀಮಂತ ರಾಜಕೀಯ ನಾಯಕರನ್ನು ತುಳಿಯುವ ಕೆಲಸವನ್ನು ಕಾಂಗ್ರೆಸ್ ಹೈಕಮಾಂಡ್ ನಡೆಸಿರುವುದು ಇತಿಹಾಸದ ಪುಟದಲ್ಲಿದೆ. ಇದು ನಮ್ಮ ರಾಜ್ಯದ ದುರಂತ. ಇಂತಹ ಮಹನೀಯರನ್ನು ಸ್ಮರಿಸುವ ಕಾರ್ಯಕ್ರಮ ರೂಪಿಸಿರುವ ಜೈ ಹಿಂದೂಸ್ತಾನ್ ಟ್ರಸ್ಟ್ ಕೆಲಸ ಶ್ಲಾಘನೀಯ ಎಂದರು.

ಮಾಜಿ ಶಾಸಕ ಡಿ.ಟಿ.ರಾಮು ಪುತ್ರ, ಖ್ಯಾತ ವೈದ್ಯ ಡಾ. ಭಗತ್ ರಾಂ ಮಾತನಾಡಿ, ಧೀಮಂತ ರಾಜಕಾರಣಿ ಕೆಂಗಲ್ ಹನುಮಂತಯ್ಯನವರು ನಮ್ಮ ಜಿಲ್ಲೆಯವರು ಎಂಬುದೇ ನಮಗೆ ಹೆಮ್ಮೆಯ ವಿಚಾರ. ನಿಜವಾಗಿಯೂ ಅವರೊರ್ವ ದುರಂತ ನಾಯಕರು ಎಂದರೆ ತಪ್ಪಾಗಲಾರದು. ಕರ್ನಾಟಕ ಏಕೀಕರಣ ಹಾಗೂ ರಾಜ್ಯದ ಅಭಿವೃದ್ಧಿಗೆ ಅವರ ಕೊಡುಗೆ ಅಪಾರವಾದದ್ದು. ಅವರ ಆದರ್ಶಗಳು ಇಂದಿನ ರಾಜಕಾರಣಿಗಳು ಮೈಗೂಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ಪ್ರಗತಿಪರ ರೇಷ್ಮೆ ಕೃಷಿಕ ರಮೇಶ್ ಹೆಗ್ಗಡೆ ಮಾತನಾಡಿ, ಇಂದಿನ ಯುವಸಮುದಾಯದಲ್ಲಿ ಸಾಹಿತ್ಯದ ಬಗ್ಗೆ ಒಲವು ಕಡಿಮೆಯಾಗಿರುತ್ತಿರುವುದು ನಮ್ಮ ಸಮಾಜದ ದುರಂತ. ಪ್ರಸುತ್ತ ಓದುವ ಅಭಿರುಚಿ ಕಡಿಮೆಯಾಗುತ್ತಿದೆ. ಜೀವನದಲ್ಲಿ ಮಹತ್ತರವಾದ ಸಾಧನೆಗೆ ಸಾಹಿತ್ಯದ ನಂಟಿನ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ತಾಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಅಭಿಲಾಷ್ ತಿಟ್ಟಮಾರನಹಳ್ಳಿ ಮಾತನಾಡಿ, ನಾಡು ಕಂಡ ಶ್ರೇಷ್ಠ ರಾಜಕಾರಣಿ ಕೆಂಗಲ್ ಹನುಮಂತಯ್ಯನವರ ಹೆಸರು ಸದಾ ಶಾಶ್ವತವಾಗಿ ಇರುತ್ತದೆ. ಇಂತಹಾ ಅಪರೂಪದ ನಾಯಕ ನಮ್ಮ ನೆಲದವರು ಎಂಬುದೇ ಹೆಮ್ಮೆಯ ವಿಚಾರ. ಆದರೆ, ಇಂತಹ ಮಹಾನಾಯಕರನ್ನು ಸ್ಮರಿಸುವ ಕೆಲಸವಾಗುತ್ತಿಲ್ಲ. ಅವರ ಜನ್ಮಜಯಂತಿಯನ್ನು ಜಿಲ್ಲಾಡಳಿತ ಮರೆತ್ತಿರುವುದೇ ಇದಕ್ಕೆ ಉದಾಹರಣೆ ಎಂದು ಬೇಸರವ್ಯಕ್ತಪಡಿಸಿದರು.

ಟ್ರಸ್ಟ್ ಕಾರ್ಯದರ್ಶಿ ಮಂಜೇಶ್ ಬಾಬು ಸೇರಿದಂತೆ ಹಲವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಅಂಧರ ಸಂಗೀತ ಶಿಕ್ಷಕ ಅಪ್ಪಾಜಿಯವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕವಿಗಳಾದ ಎಲಿಯೂರು ರಾಜು, ಮತ್ತೀಕೆರೆ ಚೆಲುವರಾಜು, ದೇ. ನಾರಾಯಣಸ್ವಾಮಿ, ಮೇದರದೊಡ್ಡಿ ಹನುಮಂತು, ಸೀಬನಹಳ್ಳಿ ಪಿ.ಸ್ವಾಮಿ, ಕಿರಣ್ ರಾಜ್ ತುಂಬೇನಹಳ್ಳಿ ಕವನ ವಾಚನ ಮಾಡಿದರು. ಗೋವಿಂದಹಳ್ಳಿ ಶಿವಣ್ಣ ಗೀತಗಾಯನ ನಡೆಸಿದರು. ಶಂಕರ್ ಬಾಬು ಮಿಮಿಕ್ರಿ ನಡೆಸಿಕೊಟ್ಟರು.

## ಕಾಂಗ್ರೆಸ್‌ನಿಂದ ಎಸ್‌ಸಿ, ಎಸ್‌ಟಿಗಳಿಗೆ ಅನ್ಯಾಯ

**ಚಾಮರಾಜನಗರ:** ದಲಿತ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರು ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್ .ಸಿ.ಮಹದೇವಪ್ಪ ಸಂವಿಧಾನ ಜಾಗೃತಿ ಜಾಥಾವನ್ನು ಪ್ರತಿವರ್ಷವೂ ಆಚರಿಸುವಂತೆ ಶಾಸನ ಹೊರಡಿಸಬೇಕು ಎಂದು ಬಿಜೆಪಿ ಎಸ್‌ಟಿ ಮೋರ್ಚಾದ ರಾಜ್ಯ ಕಾರ?ಯಕಾರಿಣಿ ಸದಸ್ಯ ಎಂ.ಎನ್. ಅಗರರಾಜು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯ ಸರ್ಕಾರ ಸಂವಿಧಾನ ಜಾಥವನ್ನು ಈ ವರ್ಷಕ್ಕೆ ಸೀಮಿತಗೊಳಿಸದೆ ಪ್ರತಿವರ್ಷ ಆಚರಿಸುವಂತಾಗಬೇಕು. ಈ ವರ್ಷಕ್ಕೆ ಸೀಮಿತಗೊಳಿಸಿದರೆ ಅದು ಚುನಾವಣೆ ಗಿಮಿಕ್ ಆಗುತ್ತದೆ ಎಂದರು.

ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಗಣರಾಜೋತ್ಸವ ದಿನವನ್ನು ಸಂವಿಧಾನ ದಿನವನ್ನಾಗಿ ಹಾಗೂ ಸಾವಿತ್ರಿಬಾಫುಲೆ ದಿನಾಚರಣೆಯನ್ನು ಜಾರಿ ಮಾಡಿದರು.ಎಸ್‌ಸಿಎಸ್‌ಟಿಗಳ ಕಲ್ಯಾಣಕ್ಕಾಗಿ ಹೆಚ್ಚಿನ ಅನುದಾನ ನೀಡಿದರು ಎಂದರು.

ಕಾಂಗ್ರೆಸ್ ಎಸ್‌ಸಿ,ಎಸ್‌ಟಿಗಳ ಮೂಗಿಗೆ ತುಪ್ಪ ಸವರುತ್ತದೆ : ಕಾಂಗ್ರೆಸ್ ಮೊದಲಿನಿಂದಲ್ಲೂ ಅನ್ಯಾಯ ಮಾಡಿಕೊಂಡು



ಬಂದಿದೆ. ಈ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಸ್‌ಸಿ, ಎಸ್‌ಟಿಗಳ ಅಭಿವೃದ್ಧಿಗೆ ಒತ್ತು ನೀಡಿಲ್ಲ. ಗ್ಯಾರಂಟಿ ಯೋಜನೆಗಳಿಗೆ ಎಸ್‌ಇಪಿ,ಟಿಎಸ್‌ಪಿ ಅನುದಾನದಲ್ಲಿ 11.500 ಕೋಟಿ ರೂ.ಗಳನ್ನು ಬಳಕೆ ಮಾಡಿಕೊಂಡಿದ್ದಾರೆ. ಒಟ್ಟಾರೆ ಈ ಬಜೆಟ್ ಗ್ಯಾರಂಟಿ ಯೋಜನೆಗಳ ಲೋಪ ಸರಿದೂಗಿಸುವುದಾಗಿ. ಗ್ಯಾರಂಟಿ ಯೋಜನೆಗಳು ಜೀವನ ನಿರ್ವಹಣೆಯ ಭಾಗ ಹೊರತು ಅಭಿವೃದ್ದಿಯಲ್ಲ ಎಂದು ದೂರಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಶ್ರೀವಾಲ್ಮೀಕಿ ಅಭಿವೃದ್ದಿ ನಿಗಮ, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ದಿ ನಿಗಮಗಳಿಂದ ಹೆಚ್ಚಿನ ಸಾಲಸೌಲಭ್ಯ, ಸಲವತ್ತುಗಳನ್ನು ನೀಡಲಾಗುತ್ತಿತ್ತು. ಆದರೆ ಕಾಂಗ್ರೆಸ್ ಸರ್ಕಾರದಲ್ಲಿ ಕೇವಲ 7 ಮಂದಿ ಫಲಾನುಭವಿಗೆ ಮಾತ್ರ ನೇರ ಸಾಲ ನೀಡಲಾಗಿದೆ. ಇದರಿಂದ ಎಸ್‌ಸಿ, ಎಸ್‌ಟಿ ಅಭಿವೃದ್ದಿ ಆಗುವುದಿಲ್ಲ ಆಗಾಗಿ ಕನಿಷ್ಠ ಒಂದು ಕ್ಷೇತ್ರಕ್ಕೆ 100 ಮಂದಿಗೆ ನೇರಸಾಲವನ್ನು 3 ಲಕ್ಷದಿಂದ 5 ಲಕ್ಷದವರಗೆ ನೀಡಬೇಕು. ಸ್ವಯಂ ಉದ್ಯೋಗ ಕೈಗೊಳ್ಳಲು 15 ಲಕ್ಷದಿಂದ 20 ಲಕ್ಷ ರೂ. ನೀಡಬೇಕು ಎಂದು ರಾಜು ಆಗ್ರಹಿಸಿದರು.

ಗುತ್ತಿಗೆ ಕಾಮಗಾರಿಗಳನ್ನು ಎಸ್‌ಸಿ, ಎಸ್‌ಟಿಗಳಿಗೆ ನೀಡಲು ಕಾನೂನು ರೂಪಿಸಲು ಆಗ್ರಹ : ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಗುತ್ತಿಗೆ ಕಾಮಗಾರಿಗಳಲ್ಲಿ ಎಸ್‌ಸಿ, ಎಸ್‌ಟಿಗಳಿಗೆ ಮೀಸಲಿಡಬೇಕು ಎಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

# ಸಂಜೆ ಟಿಪ್ಸ್




## ಜಿಯೋಏರ್ ಫೈಬರ್ ಈಗ ಕರ್ನಾಟಕದ ಇನ್ನೂರಕ್ಕೂ ಹೆಚ್ಚು ನಗರ, ಪಟ್ಟಣಗಳಲ್ಲಿ ಲಭ್ಯ

ಜಿಯೋ ಏರ್ ಫೈಬರ್ ಈಗ ಕರ್ನಾಟಕದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ, ಇನ್ನೂರಕ್ಕೂ ಹೆಚ್ಚು ನಗರಗಳಲ್ಲಿ ಮತ್ತು ಮಟ್ಟಣಗಳಲ್ಲಿ ಲಭ್ಯ ಇದೆ. ಇದರ ಜತೆಗೆ ಇನ್ನೂ ಖುಷಿಯ ವಿಚಾರ ಏನೆಂದರೆ, ಈ ನಗರಗಳು ಮತ್ತು ಪಟ್ಟಣಗಳಿಗೆ ಹೊಂದಿಕೊಂಡಿರುವ ನೂರಾರು ಹಳ್ಳಿಗಳಲ್ಲೂ ಜಿಯೋಏರ್ ಫೈಬರ್ ಅನುಕೂಲಗಳು ದೊರೆಯಲಿದೆ. ಜಿಯೋದ ಆಪ್ಟಿಕಲ್ ಫೈಬರ್ ಮೂಲಸೌಕರ್ಯವು ಭಾರತದಾದ್ಯಂತ 1.5 ಮಿಲಿಯನ್, ಅಂದರೆ ಹದಿನೈದು ಲಕ್ಷ ಕಿಲೋಮೀಟರ್‌ಗಳಷ್ಟು ವ್ಯಾಪಿಸಿದೆ. ಜಿಯೋದ ವ್ಯಾಪಕವಾದ ಆಪ್ಟಿಕಲ್-ಫೈಬರ್ ಅಳವಡಿಕೆಯಿಂದಾಗಿ ಜಿಯೋ ಈಗ 200 ಮಿಲಿಯನ್ (ಇಪ್ಪತ್ತು ಕೋಟಿ) ಸ್ಥಳಗಳಿಗೆ ಹತ್ತಿರದಲ್ಲಿದೆ. ಆದರೂ ಭೌತಿಕವಾಗಿ ಕೊನೆಯ ಸ್ಥಳದ ತನಕ ಸಂಪರ್ಕವನ್ನು ಒದಗಿಸುವುದಕ್ಕೆ ಸಾಮಾನ್ಯವಾಗಿ ನಮ್ಮ ದೇಶದ ಹೆಚ್ಚಿನ ಭಾಗಗಳಲ್ಲಿ ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ. ಈ ಕಾರಣದಿಂದಾಗಿ ಹತ್ತಾರು ಲಕ್ಷ ಸಂಭಾವ್ಯ ಗ್ರಾಹಕರು ಹೋಮ್ ಬ್ರಾಡ್‌ಬ್ಯಾಂಡ್ ವಂಚಿತರಾಗುತ್ತಾರೆ. ಏಕೆಂದರೆ ಅವರಿರುವ ಸ್ಥಳಕ್ಕೆ ಆಪ್ಟಿಕಲ್ ಫೈಬರ್ ಅನ್ನು ವಿಸ್ತರಿಸುವುದಕ್ಕೆ ಅದರದೇ ಆದ ರೀತಿಯಲ್ಲಿ ಸಂಕೀರ್ಣತೆ ಮತ್ತು ವಿಳಂಬ ಎದುರಾಗುತ್ತಿದೆ. ಜಿಯೋ ಏರ್ ಫೈಬರ್ ಅತ್ಯುತ್ತಮ ದರ್ಜೆಯ ಮೌಲ್ಯವನ್ನು ಗ್ರಾಹಕರಿಗೆ ಒದಗಿಸುತ್ತದೆ ಮತ್ತು ಪ್ರತಿಪಾದನೆ ಮತ್ತು ಜಿಯೋಫೈಬರ್ ನಂತೆಯೇ ಪ್ಲಾನ್ ಗಳನ್ನು ಒದಗಿಸುತ್ತದೆ ಮತ್ತು ಸಕ್ರಿಯಗೊಳಿಸುತ್ತದೆ. ಡಿಜಿಟಲ್ ಎಂಟರ್ ಟೇನ್ ಮೆಂಟ್ ಎಲ್ಲ ಪ್ರಮುಖ 550+ ಡಿಜಿಟಲ್ ಟಿವಿ ಚಾನೆಲ್‌ಗಳು: ನಿಮ್ಮ ಮೆಚ್ಚಿನ ಎಲ್ಲ ಟಿವಿ ಚಾನೆಲ್‌ಗಳು ಹೈ-ಡೆಫಿನಿಷನ್‌ನಲ್ಲಿ ಲಭ್ಯವಿದೆ ಕ್ಯಾಚ್-ಅಪ್ ಟಿವಿ: ಬಳಕೆದಾರರು ಈಗ ಅವರು ಬಯಸಿದಷ್ಟು ಹಿಂದಿನ ತನಕ ಕಾರ್ಯಕ್ರಮಗಳನ್ನು ಹೆಕ್ಕಿ, ನೋಡಬಹುದು. - ಅತ್ಯಂತ ಜನಪ್ರಿಯ 16+ ಒಟಿಟಿ ಅಪ್ಲಿಕೇಷನ್‌ಗಳು: ಜಿಯೋಏರ್ ಫೈಬರ್ ಬಳಕೆದಾರರು ಪ್ರಮುಖ ಒಟಿಟಿ ಅಪ್ಲಿಕೇಷನ್‌ಗಳನ್ನು ಉಚಿತವಾಗಿ ವೀಕ್ಷಿಸಬಹುದು. ಬಳಕೆದಾರರು ಈ ಚಂದಾದಾರಿಕೆಯನ್ನು ಬಳಸಿಕೊಳ್ಳಬಹುದು.

## ಸಬ್ಬಕ್ಕಿ ಟಿಕ್ಕಾ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ಸಾಬಕ್ಕಿ - 125 ಗ್ರಾಂ, ಬೇಯಿಸಿದ ಆಲೂಗಡ್ಡೆ - 130 ಗ್ರಾಂ, ಹಸಿರು ಮೆಣಸಿನಕಾಯಿ 2, ಜೀರಿಗೆ ಪುಡಿ 1/2 ಚಮಚ, ಗೋಡಂಬಿ 10-15, ಆಮ್ಚೂರ್ ಪುಡಿ 1/2 ಚಮಚ, ಉಪ್ಪು ರುಚಿಗೆ ತಕ್ಕಷ್ಟು

### ಮಾಡುವ ವಿಧಾನ

ಸಬ್ಬಕ್ಕಿ ಯನ್ನು ತೊಳೆದು ರಾತ್ರಿಯಿಡಿ ನೆನೆಹಾಕಿ. ಬೆಳಿಗ್ಗೆ ನೀರು ತೆಗೆದು ಬೇರ್ಪಡಿಸಿ. ಒಂದು ಬಾಣಲೆಗೆ ಎಣ್ಣೆ ಹಾಕಿ ಮೇಲಿನ ಎಲ್ಲ ಪದಾರ್ಥವನ್ನು ಹಾಕಿ. ನಂತ್ರ ಸಬ್ಬಕ್ಕಿ ಹಾಕಿ ಮಿಕ್ಸ್ ಮಾಡಿ. ತಯಾರಿಸಿದ ಮಿಶ್ರಣವನ್ನು ಟಿಕ್ಕಾ ಮಾಡಿ. ಇನ್ನೊಂದು ಬಾಣಲೆಗೆ ಎಣ್ಣೆ ಹಾಕಿ ಬಿಸಿಯಾದ್ಮೇಲೆ ಟಿಕ್ಕಾ ಹಾಕಿ ಗೋಲ್ಡನ್ ಬಣ್ಣಕ್ಕೆ ಬರುವವರೆಗೆ ಕರಿಯಿರಿ. ನಂತ್ರ ಬಿಸಿ ಬಿಸಿಯಾಗಿ ಸೇವಿಸಿ.

## ವಿದ್ಯಾರ್ಥಿನಿಯರ ರೀಲ್ಸ್‌ಗೆ ಕಾಮೆಂಟ್ ಮಾಡಿದ ನಟ ವಿಜಯ್ ದೇವರಕೊಂಡ



ನಟ ವಿಜಯ್ ದೇವರಕೊಂಡಗೆ ಸಾಕಷ್ಟು ಜನ ಫ್ಯಾನ್ಸ್ ಇದ್ದಾರೆ, ಅರ್ಜುನ್ ರೆಡ್ಡಿ ಮೂವಿಗಿಂತ ಮುನ್ನ ವಿಜಯ್ ಸಣ್ಣ ನಟನಾಗಿದ್ದರು. ಅರ್ಜುನ್ ರೆಡ್ಡಿ ಮೂವಿಯಲ್ಲಿ ನಟಿಸದ ಬಳಿಕ, ಇಡೀ ಭಾರತೀಯ ಚಿತ್ರರಂಗವೇ ಮೆಚ್ಚುವಂಥ ನಟನಾಗಿ ಹೊರಹೊಮ್ಮಿದರು. ಇನ್ನು ವಿಜಯ್ ದೇವರಕೊಂಡಗೆ ಫಿಮೇಲ್ ಫ್ಯಾನ್ ಫಾಲೋವರ್ಸ್ ಹೆಚ್ಚು ಅಂತ ಹೇಳಬಹುದು.ಇದೀಗ ವಿಷಯ ಏನಂದ್ರೆ, ಇಬ್ಬರು ವಿದ್ಯಾರ್ಥಿನಿಯರು ರೀಲ್ಸ್ ಮಾಡಿ, ಈ ರೀಲ್ಸ್‌ಗ ವಿಜಯ್ ದೇವರಕೊಂಡ ಕಾಮೆಂಟ್ ಮಾಡಿದರಷ್ಟೇ ನಾವು ನಮ್ಮ ಪರೀಕ್ಷೆಗೆ ತಯಾರಿ ನಡೆಸುತ್ತೇವೆ ಎಂದಿದ್ದಾರೆ. ಈ ವೀಡಿಯೋ ನೋಡಿದವರು, ನಿಮಗೇನು ಹುಚ್ಚಾ..? ನಿಮ್ಮಂಥರ ವೀಡಿಯೋಗೆಲ್ಲ ಕಾಮೆಂಟ್ ಮಾಡುವಷ್ಟು ವಿಜಯ್ ಫ್ರೀ ಇರ್ತಾರೆ ಅಂತಾ ತಿಳ್ಕೊಂಡಿದ್ದೀರಾ..? ಚಾನ್ಸೇ ಇಲ್ಲಾ ಎಂದಿದ್ದಾರೆ. ಇನ್ನು ಕೆಲವರು ವಿಜಯ್ ಕಾಮೆಂಟ್ ಮಾಡುವಷ್ಟು ನಿಮ್ಮ ರೀಲ್ಸ್ ಬೊಂಬಾಟ್ ಆಗಿದೆಯಾ ಅಂತಾ ಪ್ರಶ್ನಿಸಿದ್ದಾರೆ. ಹಲವರು ವಿಜಯ್ ಕಾಮೆಂಟ್ ಬರೋದಿಲ್ಲ ಅನ್ನೋ ರೀತಿಯೇ ಕಾಮೆಂಟ್ ಮಾಡಿದ್ದಾರೆ. ಆದರೆ ಅಚ್ಚರಿ ಏನಂದ್ರೆ, ವಿಜಯ್ ದೇವರಕೊಂಡ ಈ ರೀಲ್ಸ್‌ಗ ಕಾಮೆಂಟ್ ಮಾಡಿದ್ದಾರೆ. ನೀವು ಪರೀಕ್ಷೆಯಲ್ಲಿ 90% ಅಂಕ ಗಳಿಸಿ, ನಾನು ನಿಮ್ಮನ್ನು ಭೇಟಿಯಾಗುತ್ತೇನೆ ಎಂದು ಬರೆದಿದ್ದಾರೆ. ವಿಜಯ್ ಮಾಡಿದ ಕಾಮೆಂಟ್ ಕಂಡು ಹಲವರು ಅಚ್ಚರಿ ವ್ಯಕ್ತಪಡಿಸಿದರೆ, ಇನ್ನು ಕೆಲವರು ವಿಜಯ್ ಕೆಲಸಕ್ಕೆ ಮೆಚ್ಚುಗೆ ಸೂಚಿಸಿದ್ದಾರೆ. ಈ ಮೂಲಕ ವಿಜಯ್‌ಗೆ ಫ್ಯಾನ್ಸ್ ಹೆಚ್ಚಾಗಿದ್ದಾರೆ. ಈಗ ರೀಲ್ಸ್ ಮಾಡಿದ ಹುಡುಗಿಯರು 90% ಅಂಕ ಗಳಿಸಿ, ನೆಚ್ಚಿನ ನಟನನ್ನು ಭೇಟಿ ಮಾಡುತ್ತಾರಾ ಅಂತಾ ಕಾದು ನೋಡಬೇಕಿದೆ.

## ಸ್ಟ್ರೆಚ್ ಮಾರ್ಕ್‌ಗೆ ಸುಲಭ ಟಿಪ್ಸ್

### ಹೆಲ್ತ್ ಟಿಪ್ಸ್



ದೇಹದ ಮೇಲೆ ಯಾವುದೆ ಕಲೆ ಇರಬಾರದೆಂದು ಪ್ರತಿಯೊಬ್ಬ ಮಹಿಳೆ ಬಯಸ್ತಾಳೆ. ಆದ್ರೆ, ಹೆರಿಗೆ ನಂತ್ರ ಕಾಡುವ ಈ ಸ್ಟ್ರೆಚ್ ಮಾರ್ಕ್ ಸುಲಭವಾಗಿ ಹೋಗುವುದಿಲ್ಲ. ಮಾರುಕಟ್ಟೆಗೆ ಅನೇಕ ಸ್ಟ್ರೆಚ್ ಮಾರ್ಕ್ ಕ್ರೀಮ್ ಗಳು ಬಂದಿವೆ. ಅನೇಕ ಬಾರಿ ಇದು ಪ್ರಯೋಜನಕ್ಕೆ ಬರುವುದಿಲ್ಲ.

ಸ್ಟ್ರೆಚ್ ಮಾರ್ಕ್ ಅನೇಕ ಮಹಿಳೆಯರ ಕಿರಿಕಿರಿಗೆ ಕಾರಣವಾಗುತ್ತದೆ. ಸುಂದರ ಡ್ರೆಸ್ ಧರಿಸಲು ಇದು ಅಡ್ಡಿ ಎನ್ನುವವರಿದ್ದಾರೆ. ನೀವು ಸ್ಟ್ರೆಚ್ ಮಾರ್ಕ್ ಕಿರಿಕಿರಿ ಅನುಭವಿಸುತ್ತಿದ್ದರೆ ಸುಂದರ ತ್ವಚೆ ಪಡೆಯಲು ಕೆಲವೊಂದು ಸುಲಭ ಟಿಪ್ಸ್ ಬಳಸಿ. ಸ್ಟ್ರೆಚ್ ಮಾರ್ಕ್ ಇಲ್ಲದ ತ್ವಚೆ ಪಡೆಯಿರಿ.

ನೀರು, ಆರೋಗ್ಯದ ಜೊತೆಗೆ ಸೌಂದರ್ಯವನ್ನು ಕಾಪಾಡುತ್ತದೆ. ಪ್ರತಿದಿನ 10 ಗ್ಲಾಸ್ ನೀರನ್ನು ಅವಶ್ಯವಾಗಿ ಕುಡಿಯಿರಿ. ಹೀಗೆ ಮಾಡುವುದರಿಂದ ನಿಮ್ಮ ಸ್ಟ್ರೆಚ್ ಮಾರ್ಕ್ ನಲ್ಲಿ ಸಾಕಷ್ಟು ಬದಲಾಣೆಯಾಗುವುದನ್ನು ನೀವೇ ಗಮನಿಸಬಹುದು.

ಸ್ಟ್ರೆಚ್ ಮಾರ್ಕ್ ಸಮಸ್ಯೆಯಿರುವ ಮಹಿಳೆಯರು ಅಲೋವೇರಾ ಬಳಸಿ. ಅಲೋವೇರಾ ಜೆಲ್ ಸ್ಟ್ರೆಚ್ ಮಾರ್ಕ್ ಹೋಗಲಾಡಿಸುವ ಕೆಲಸ ಮಾಡುತ್ತದೆ. ಸ್ಟ್ರೆಚ್ ಮಾರ್ಕ್ ಮೇಲೆ ಜೆಲ್ ಹಚ್ಚಿ ಸ್ವಲ್ಪ ಮಸಾಜ್ ಮಾಡುತ್ತ ಬನ್ನಿ. ಕೆಲವೇ ದಿನಗಳಲ್ಲಿ ಪರಿಣಾಮ ಗೊತ್ತಾಗುತ್ತದೆ.

ಆರೋಗ್ಯಕರ ಹಾಗೂ ಸ್ವಚ್ಛ ಚರ್ಮಕ್ಕೆ ವಿಟಮಿನ್ ಸಿ ಹಾಗೂ ವಿಟಮಿನ್ ಇ ಅವಶ್ಯಕ. ಆಹಾರದ ಜೊತೆ ಸ್ಟ್ರಾಬೆರಿ, ಹಣ್ಣುಗಳು, ಪಾಲಕ್, ಕ್ಯಾರೆಟ್, ಹಸಿರು ಬಟಾಣಿ, ಬದಾಮಿ ಮುಂತಾದವುಗಳನ್ನು ಸೇವಿಸುತ್ತ ಬನ್ನಿ. ನಿಂಬೆ ರಸ ಸ್ಟ್ರೆಚ್ ಮಾರ್ಕ್ ಹೋಗಲಾಡಿಸುವ ಕೆಲಸ ಮಾಡುತ್ತದೆ. ಪ್ರತಿದಿನ ನಿಂಬೆ ರಸವನ್ನು ಸ್ಟ್ರೆಚ್ ಮಾರ್ಕ್ ಇರುವ ಜಾಗಕ್ಕೆ ಹಚ್ಚಿ 10 ನಿಮಿಷ ಬಿಟ್ಟು ಸ್ವಚ್ಛಗೊಳಿಸಿಕೊಳ್ಳಿ.

## ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಹಯೋಗದೊಂದಿಗೆ ಕಂಪ್ಯೂಟರ್ ಲ್ಯಾಬ್ ಸ್ಥಾಪನೆ




ಭಾರತದ ಅತಿದೊಡ್ಡ ಉಡುಪು ತಯಾರಕ ಮತ್ತು ರಫ್ತುದಾರ ಆಗಿರುವ ಶಾಹಿ ಎಕ್ಸ್ಪೋರ್ಟ್ಸ್, ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಅರ್ಥಪೂರ್ಣ ಮತ್ತು ಸಕಾರಾತ್ಮಕ ಬದಲಾವಣೆಗಳನ್ನು ತರಲು ನಗರದ ಅನೇಕ ಶಾಲೆಗಳಿಗೆ ತನ್ನ ಬೆಂಬಲವನ್ನು ವಿಸ್ತರಿಸಿದೆ. ಈ ಅಕ್ಷರ ಕಾರ್ಯಕ್ರಮದ ಉಪಕ್ರಮದ ಭಾಗವಾಗಿ, ಶಾಹಿ ಅವರು ಪೀಣ್ಯದ ಚೊಕ್ಕಸಂದ್ರದಲ್ಲಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಸಹಯೋಗದೊಂದಿಗೆ ಕಂಪ್ಯೂಟರ್ ಲ್ಯಾಬ್ ಅನ್ನು ಒದಗಿಸಿದ್ದಾರೆ ಮತ್ತು ಸ್ಯಾನಿಟರಿ ನ್ಯಾಪ್ಕಿನ್ ಇನ್ಸಿನರೇಟರ್ ಯಂತ್ರ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಪೂರೈಸುವಲ್ಲಿ ಬೆಂಬಲ ನೀಡಿದ್ದಾರೆ. ನಗರದಲ್ಲಿ ಶಾಹಿ ತಂಡ, ಶಾಲಾ ಅಧಿಕಾರಿಗಳು, ಶಿಕ್ಷಕರು, ಮಕ್ಕಳ ಸಮ್ಮುಖದಲ್ಲಿ ಈ ನೂತನ ಸೌಲಭ್ಯದ ಉದ್ಘಾಟನೆ ನಡೆಯಿತು.ಶಾಲೆಯ ಮೂಲಸೌಕರ್ಯ ಅಭಿವೃದ್ಧಿಯ ವಿವರಗಳನ್ನು ಹಂಚಿಕೊಂಡ ಶಾಹಿ, ಕಂಪೆನಿಯ ಅಧಿಕಾರಿಗಳು ಶಾಲಾ ಮಕ್ಕಳಿಗೆ ಒದಗಿಸಲಾದ ಸೌಲಭ್ಯಗಳ ಕೆಳಗಿನ ಪಟ್ಟಿಯನ್ನು ನೀಡಿದ್ದಾರೆ.

ಕಂಪ್ಯೂಟರ್ ಲ್ಯಾಬ್: 5 ರಿಂದ 8 ನೇ ತರಗತಿಯ ಮಕ್ಕಳಿಗೆ 10 ಕಂಪ್ಯೂಟರ್ಗಳು ಮತ್ತು ಗಿಕಖ ಬ್ಯಾಟರಿಗಳು

1 ರಿಂದ 3 ನೇ ತರಗತಿಯ ಮಕ್ಕಳಿಗೆ ಫ್ಲೋರ್ ಆರ್ಟ್ ಪೇಂಟಿಂಗ್ (ನಲಿ ಕಲಿ ತಟ್ಟೆಗಳು)? ಮೂಲಭೂತ ಸೌಕರ್ಯಗಳು: ಬೀರುಗಳು, ಕ್ರೀಡಾ ಸಾಮಗ್ರಿಗಳು, ಗ್ರಂಥಾಲಯ ಪುಸ್ತಕಗಳು, ಹಸಿರು ಬೋರ್ಡ್ಗಳು, ಸಲಹೆ ಪೆಟ್ಟಿಗೆ, ಕುರ್ಚಿಗಳು, ಟೇಬಲ್ಗಳು ಮತ್ತು ಎಲ್ಲಾ ಮಕ್ಕಳು ಮತ್ತು ಸಿಬ್ಬಂದಿಗೆ ಶೈಕ್ಷಣಿಕ ಸಂಬಂಧಿತ ಚಾರ್ಟ್ಗಳು? ಆಡಿಯೋ-ವಿಶುವಲ್ ಪರಿಕರಗಳು ಮತ್ತು ವರ್ಚುವಲ್ ತರಗತಿಗಳಿಗೆ ಸಂವಾದಾತ್ಮಕ ಪರದೆ: ಇದನ್ನು 1 ರಿಂದ 8 ನೇ-ತರಗತಿಯ ವಿದ್ಯಾರ್ಥಿಗಳು ಸ್ಮಾರ್ಟ್ ಕ್ಲಾಸ್ಗಾಗಿ ಬಳಸುತ್ತಾರೆ? ಸ್ಯಾನಿಟರಿ ನ್ಯಾಪ್ಕಿನ್ ಇನ್ಸಿನರೇಟರ್: ಶಾಲಾ ಸಮಯದಲ್ಲಿ ಹುಡುಗಿಯರು ಸ್ಯಾನಿಟರಿ ನ್ಯಾಪ್ಕಿನ್ ಅನ್ನು ನಾಶ ಮಾಡಲು ಬಳಸಲಾಗುತಿದ್ದು ಇದು ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಕಾರ್ಯಕ್ರಮದಲ್ಲಿ ಪೀಣ್ಯ ಬೆಂಗಳೂರು ಬ್ಲಾಕ್ ಶಿಕ್ಷಣಾಧಿಕಾರಿ ಆಂಜನಪ್ಪ,ಬೆಂಗಳೂರು ಉತ್ತರದ ಬಿಬಿಎಂಪಿ ಕಾರ್ಪೊರೇಟರ್ ಎಂ.ಮುನಿಯಪ್ಪ, ಶಾಹಿ ಮಾನವ ಸಂಪನ್ಮೂಲ ಹಿರಿಯ ಪ್ರಧಾನ ವ್ಯವಸ್ಥಾಪಕರಾದ ವೆಂಕಟಾಚಲಪತಿ, ಹಿರಿಯ ಪ್ರಧಾನ ವ್ಯವಸ್ಥಾಪಕರು, ಸಾಂಸ್ಥಿಕ ಅಭಿವೃದ್ಧಿ ಸುಗುಣ ಸರೋಜಿನಿ ಮನ್ನೆ,ಹಿರಿಯ ವ್ಯವಸ್ಥಾಪಕಿ ಕು|ಚಿತ್ರಾ ಪ್ರಸಾದ್ ಮತ್ತು ಉತ್ಪಾದನಾ ವಿಭಾಗದ ಜನರಲ್ಮ್ಯಾನೇಜರ್‌ಆಗಿರುವ ಶ್ರೀ ರಾಮಪ್ರಸಾದ್ ಮುರುಗೇಶನ್ ಅವರು ಉಪಸ್ಥಿತರಿದ್ದರು. ಅಕ್ಷರ ಕಾರ್ಯಕ್ರಮವನ್ನು ಶಾಹಿಯ ಶಿಕ್ಷಣಂ ಉಪಕ್ರಮದ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಕಾರ್ಯಕ್ರಮವು ಶಾಲೆಗಳು ಮತ್ತು ಅಂಗನವಾಡಿಗಳ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಂಪೂರ್ಣ ಅಗತ್ಯ-ಮೌಲ್ಯಮಾಪನ ಅಧ್ಯಯನವನ್ನು ನಡೆಸುತ್ತದೆ ಮತ್ತು ಬೆಂಬಲವನ್ನು ಒದಗಿಸಲು ಯೋಜನೆಯನ್ನು ನಿರ್ಮಿಸುತ್ತದೆ. ಮೌಲ್ಯಮಾಪನದಲ್ಲಿ ಕಂಡುಬರುವ ಸಮಸ್ಯೆಗಳು ಮೂಲಭೂತ ಸೌಕರ್ಯಗಳ ಸುಧಾರಣೆ, ಶಾಲಾ ಮಕ್ಕಳಿಗೆ ಶಿಕ್ಷಣವನ್ನು ಪಡೆಯಲು ಮೂಲಭೂತ ಸೌಕರ್ಯಗಳು ಮತ್ತು ಶೈಕ್ಷಣಿಕ ಪ್ರೋತ್ಸಾಹದ ಅಗತ್ಯತೆಯನ್ನು ಒದಗಿಸುತ್ತಿದೆ . ಶಾಹಿ ಈ ಅಕ್ಷರ ಕಾರ್ಯಕ್ರಮದ ಮೂಲಕ ಸುಮಾರು 2824 ಮಕ್ಕಳು, 11296 ಪೋಷಕರು ಮತ್ತು ಕುಟುಂಬದ ಸದಸ್ಯರ ಮೇಲೆ ರಾಷ್ಟ್ರಮಟ್ಟದಲ್ಲಿ ಪ್ರಭಾವ ಬೀರಿದ್ದಾರೆ.

## ಮೊಸರು-ನಿಂಬೆಯ ಫೇಸ್‌ಪ್ಯಾಕ್

### ಬ್ಯೂಟಿ ಟಿಪ್ಸ್



ಮೊಸರು ಮತ್ತು ಲಿಂಬೆಯಿಂದ ಮಾಡಿರುವಂತಹ ಪ್ಯಾಕ್ ಅನ್ನು ನೀವು ಬಳಸಿಕೊಳ್ಳಬಹುದರಿಂದ ಮುಖದ ಸೌಂದರ್ಯ ಕಾಪಾಡಬಹುದು. ಈ ಎರಡನ್ನು ಹೆಚ್ಚಾಗಿ ಹಲವಾರು ಸೌಂದರ್ಯವರ್ಧಕಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಮೊಸರಿನಲ್ಲಿ ಲ್ಯಾಕ್ಟಿಕ್ ಆಮ್ಲವು ಸಮೃದ್ಧವಾಗಿದ್ದು, ಇದು ಚರ್ಮಕ್ಕೆ ಅದ್ಭುತವನ್ನು ಉಂಟು ಮಾಡಲಿದೆ. ಲಿಂಬೆಯು ನಿಮ್ಮ ಚರ್ಮಕ್ಕೆ ಕಾಂತಿ ಹಾಗೂ ಕಲೆರಹಿತವಾಗಿ ಮಾಡುವುದು. ಇದಕ್ಕಾಗಿ 2 ಚಮಚ ಮೊಸರು, 2 ಚಮಚ ನಿಂಬೆರಸ ಇದ್ದರೆ ಸಾಕು.

**ತಯಾರಿಸುವ ವಿಧಾನ:** ಒಂದು ಪಾತ್ರೆ ತೆಗೆದುಕೊಂಡು ಅದಕ್ಕೆ ಮೊಸರನ್ನು ಹಾಕಿ. ಇದಕ್ಕೆ ತಾಜಾ ನಿಂಬೆಯ ರಸ ಹಾಕಿ ಮತ್ತು ಎರಡನ್ನು ಮಿಶ್ರಣ ಮಾಡಿಕೊಂಡು ದಪ್ಪಗಿನ ಪೇಸ್ಟ್ ಮಾಡಿ. ಮೊಸರು ಮತ್ತು ನಿಂಬೆಯ ಫೇಸ್ ಪ್ಯಾಕ್ ನ್ನು ಮುಖ ಹಾಗೂ ಕುತ್ತಿಗೆಗೆ ಹಚ್ಚಿಕೊಳ್ಳಿ. ವೃತ್ತಾಕಾರದಲ್ಲಿ ಇದನ್ನು ಮುಖದಲ್ಲಿ ಮಸಾಜ್ ಮಾಡಿ. ಇದು ಕಣ್ಣಿಗೆ ತಾಗದಂತೆ ಎಚ್ಚರಿಕೆ ವಹಿಸಿ. 20 ನಿಮಿಷ ಕಾಲ ಹಾಗೆ ಬಿಡಿ ಮತ್ತು ಚರ್ಮವು ಇದನ್ನು ಸರಿಯಾಗಿ ಹೀರಿಕೊಳ್ಳಲಿ. 20 ನಿಮಿಷ ಬಿಟ್ಟು ಬಳಿಕ ಸಾಮಾನ್ಯ ನೀರಿನಿಂದ ತೊಳೆಯಿರಿ.ಅಂತಿಮವಾಗಿ ಮೊಶ್ಚಿರೈಸರ್ ಹಚ್ಚಿಕೊಳ್ಳಿ ಮತ್ತು ಇದು ಚರ್ಮವನ್ನು ತೇವಾಂಶದಿಂದ ಇಡುವುದು. ವಾರದಲ್ಲಿ 2-3 ಸಲ ಇದನ್ನು ಬಳಸಿಕೊಂಡರೆ ಆಗ ನಿಮಗೆ ಕಾಂತಿಯುತ ಮತ್ತು ಕಲೆರಹಿತವಾಗಿರುವ ತ್ವಚೆ ನೀಡುವುದು.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ಕೆಲಸದಲ್ಲಿ ಏಕಾಗ್ರತೆ, ತಾಳ್ಮೆ ಅಗತ್ಯ, ತಾಯಿಯಿಂದ ಸಹಾಯ, ಆದಾಯಕ್ಕಿಂತ ಖರ್ಚು ಜಾಸ್ತಿ

**ವೃಷಭ:** ಯಾರನ್ನು ಹೆಚ್ಚಾಗಿ ನಂಬಬೇಡಿ, ಪರಿಶ್ರಮದಿಂದ ಅಭಿವೃದ್ಧಿ, ದುಷ್ಟ ಜನರಿಂದ ದೂರವಿರಿ, ಭೂ ಲಾಭ.

**ಮಿಥುನ:** ಯತ್ನ ಕಾರ್ಯಭಂಗ, ಕಲಹ ಸಾಧ್ಯತೆ, ಆತ್ಮೀಯರ ಭೇಟಿ, ಸ್ವಯಂಕೃತ ಅಪರಾಧ.

**ಕಟಕ:** ಪರರಿಂದ ಮೋಸ, ಆರ್ಥಿಕ ಪರಿಸ್ಥಿತಿ ಬಿಕ್ಕಟ್ಟು, ಋಣಭಾದೆ, ಚಂಚಲ ಮನಸ್ಸು, ಸಲ್ಲದ ಅಪವಾದ ನಿಂದನೆ.

**ಸಿಂಹ:** ಅನ್ಯಾರಿಗೆ ಉಪಕಾರ ಮಾಡುವಿರಿ, ಆಕಸ್ಮಿಕ ದೂರ ಪ್ರಯಾಣ, ದ್ರವ್ಯ ಲಾಭ, ದ್ವೇಷ ಸಾಧನೆ ಒಳ್ಳೆಯದಲ್ಲ

**ಕನ್ಯಾ:** ವಿಧೇಯತೆಯೇ ಯಶಸ್ಸಿನ ಮೆಟ್ಟಿಲು, ವ್ಯಾಪಾರ ವ್ಯವಹಾರಗಳಲ್ಲಿ ಮಂದಗತಿ, ಅನಿರೀಕ್ಷಿತ ದ್ರವ್ಯ ಲಾಭ

**ತುಲಾ:** ಪ್ರತಿಭೆಗೆ ತಕ್ಕ ಫಲ, ಕಾರ್ಯಸಿದ್ಧಿ, ಸಕಾಲಕ್ಕೆ ಭೋಜನ ಇಲ್ಲದಿರುವಿಕೆ, ವಯುಕ್ತಿಕ ವಿಚಾರಗಳತ್ತ ಗಮನ ಕೊಡಿ.

**ವೃಷಭ:** ಅವಕಾಶ ಕೈ ತಪ್ಪಿ ಹೋಗುತ್ತೆ, ಅಧಿಕ ಖರ್ಚು, ಧಾರ್ಮಿಕ ಕಾರ್ಯ, ಕುಟುಂಬದಲ್ಲಿ ಪ್ರೀತಿ

**ಧನಸ್ಸು:** ಗುರಿಯನ್ನು ಸಾಧಿಸುವಿರಿ, ನಯ ವಂಚಕರಿಂದ ತೊಂದರೆ, ತೀರ್ಥಯಾತ್ರೆ

**ಮಕರ:** ಅತಿಯಾದ ಆತ್ಮವಿಶ್ವಾಸ, ವ್ಯಾಪಾರದಲ್ಲಿ ಮೈಮರೆಯಬೇಡಿ, ಸುಖ ಭೋಜನ.

**ಕುಂಭ:** ರಫ್ತು ವ್ಯಾಪಾರದಲ್ಲಿ ಅಲ್ಪ ಲಾಭ, ಅನ್ಯರಲ್ಲಿ ವೈ ಮನಸ್ಸು,ಪಾಪ ಬುದ್ಧಿ, ಕೆಲಸದಲ್ಲಿ ಶ್ರದ್ಧೆ, ಮಾತಿನ ಮೇಲೆ ಹಿಡಿತವಿರಲಿ.

**ಮೀನ:** ವಿವಾದಾತ್ಮಕ ವಿಚಾರಗಳಿಂದ ದೂರವಿರಿ, ನಂಬಿಕಸ್ತರಿಂದ ಅಶಾಂತಿ, ನೌಕರಿಯಲ್ಲಿ ಕಿರಿಕಿರಿ, ಕೋಪ ಜಾಸ್ತಿ, ಆರೋಗ್ಯದಲ್ಲಿ ಏರುಪೇರು.

## ವಿಶ್ವ ಸಾಮಾಜಿಕ ನ್ಯಾಯದ ದಿನ

ವಿಶ್ವ ಸಾಮಾಜಿಕ ನ್ಯಾಯದ ದಿನವನ್ನು ವಾರ್ಷಿಕವಾಗಿ ಫೆಬ್ರವರಿ 20 ರಂದು ಆಚರಿಸಲಾಗುತ್ತದೆ. ಅಂತರಾಷ್ಟ್ರೀಯವಾಗಿ, ಪ್ರಪಂಚವು ದುರದೃಷ್ಟಕರ ಸಮಸ್ಯೆಗಳಿಂದ ಪೀಡಿತವಾಗಿದ್ದು, ಲಕ್ಷಾಂತರ ವ್ಯಕ್ತಿಗಳು ನ್ಯಾಯಯುತ ಜೀವನವನ್ನು ನಡೆಸುವುದನ್ನು ನಿಷೇಧಿಸುತ್ತದೆ. ಪ್ರಪಂಚದ ಅನೇಕ ಜನಸಂಖ್ಯೆಯು ತಮ್ಮದೇ ಆದ ತಪ್ಪಿಲ್ಲದೆ, ಮನೆಗಳು, ಉದ್ಯೋಗಗಳು, ಆರೋಗ್ಯ ರಕ್ಷಣೆ, ಶಿಕ್ಷಣ, ಪೋಷಣೆ ಮತ್ತು ಹೆಚ್ಚಿನವುಗಳಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸಾಮಾಜಿಕ ನ್ಯಾಯವು ರೂಢಿಯಲ್ಲಿರುವ ನ್ಯಾಯಯುತ ಜಗತ್ತನ್ನು ನಾವು ರಚಿಸಬಹುದು ಎಂದು ಖಚಿತಪಡಿಸಿಕೊಳ್ಳುವುದು ಸವಲತ್ತುಗಳ ಜವಾಬ್ದಾರಿಯಾಗಿರಬೇಕು. ನೀವು ಅತ್ಯಂತ ಅರ್ಥಪೂರ್ಣ ರೀತಿಯಲ್ಲಿ ಕೊಡುಗೆ ನೀಡಲು ಬಯಸಿದರೆ, ನೀವು ಕಾನೂನು ವೃತ್ತಿಯನ್ನು ಪ್ರವೇಶಿಸಬಹುದು - ಕಾನೂನು ಶಾಲೆ ದುಬಾರಿಯಾಗಿದೆ ಆದರೆ ಸಹಾಯ ಮಾಡುವ ಕೆಲವು ಕಾನೂನು ವಿದ್ಯಾರ್ಥಿವೇತನಗಳು ಇಲ್ಲಿವೆ.ಗಂಭೀರ ಆರ್ಥಿಕ ಬಿಕ್ಕಟ್ಟುಗಳು, ಹೆಚ್ಚಿನ ನಿರುದ್ಯೋಗ ದರಗಳು, ಬಡತನ, ಸಮಾಜಗಳ ನಡುವೆ ಹೊರಗಿಡುವಿಕೆ, ತಾರತಮ್ಯ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಜಾಗತಿಕ ಆರ್ಥಿಕತೆಯಲ್ಲಿ ಸಂಪೂರ್ಣ ಭಾಗವಹಿಸುವಿಕೆಯನ್ನು ನಿಷೇಧಿಸುವ ಸೌಲಭ್ಯಗಳಿಗೆ ಪ್ರವೇಶದ ಕೊರತೆ ಸೇರಿದಂತೆ ಮಹತ್ವದ ಸಮಸ್ಯೆಗಳನ್ನು ಜಗತ್ತು ಎದುರಿಸುತ್ತಿದೆ. 1995 ರಲ್ಲಿ, ಕೋಪನ್ ಹ್ಯಾಗನ್, ಡೆನ್ಮಾರ್ಕ್, ಸಾಮಾಜಿಕ ಅಭಿವೃದ್ಧಿಗಾಗಿ ವಿಶ್ವ ಶೃಂಗಸಭೆಯನ್ನು ಆಯೋಜಿಸಿತು. ಇದು ಕೋಪನ್ ಹ್ಯಾಗನ್ ಘೋಷಣೆ ಮತ್ತು ಕ್ರಿಯೆಯ ಕಾರ್ಯಕ್ರಮಕ್ಕೆ ಕಾರಣವಾಯಿತು. 100 ಕ್ಕೂ ಹೆಚ್ಚು ರಾಜಕೀಯ ನಾಯಕರು ಬಡತನವನ್ನು ನಿವಾರಿಸಲು, ಪೂರ್ಣ ಉದ್ಯೋಗದ ಕಡೆಗೆ ಕೆಲಸ ಮಾಡಲು ಮತ್ತು ಸ್ಥಿರ, ಸುರಕ್ಷಿತ ಮತ್ತು ನ್ಯಾಯಯುತ ಸಮಾಜಗಳನ್ನು ರಚಿಸಲು ಪ್ರತಿಜ್ಞೆ ಮಾಡಿದರು. ಅಭಿವೃದ್ಧಿ ಯೋಜನೆಗಳ ಕೇಂದ್ರದಲ್ಲಿ ಜನರನ್ನು ಇರಿಸಬೇಕೆಂದು ಅವರು ನಿರ್ಧರಿಸಿದರು.

2005 ರಲ್ಲಿ ನ್ಯೂಯಾರ್ಕ್ನಲ್ಲಿ, ಯು.ಎನ್.ನ ಸದಸ್ಯ ರಾಷ್ಟ್ರಗಳು ಸಾಮಾಜಿಕ ಅಭಿವೃದ್ಧಿ ಆಯೋಗದ ಅಧಿವೇಶನದಲ್ಲಿ ಕೋಪನ್ ಹ್ಯಾಗನ್ ಘೋಷಣೆ ಮತ್ತು ಕ್ರಿಯೆಯ ಕಾರ್ಯಕ್ರಮವನ್ನು ಪರಿಶೀಲಿಸಿದವು. ಸಾಮಾಜಿಕ ಅಭಿವೃದ್ಧಿಯನ್ನು ಮುಂದುವರಿಸಲು ಅವರು ಬದ್ಧರಾಗಲು ಒಪ್ಪಿಕೊಂಡರು. ಎರಡು ವರ್ಷಗಳ ನಂತರ ನವೆಂಬರ್ 26, 2007 ರಂದು, ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು ಜನರಲ್ ಅಸೆಂಬ್ಲಿಯ ಅರವತ್ತಮೂರನೇ ಅಧಿವೇಶನದಿಂದ ಪ್ರಾರಂಭಿಸಿ, ಫೆಬ್ರವರಿ 20 ಅನ್ನು ವಾರ್ಷಿಕವಾಗಿ ವಿಶ್ವ ಸಾಮಾಜಿಕ ನ್ಯಾಯದ ದಿನವಾಗಿ ಆಚರಿಸಲಾಗುತ್ತದೆ ಎಂದು ಘೋಷಿಸಿತು. ಜೂನ್ 10, 2008 ರಂದು, ಇಂಟರ್ನ್ಯಾಷನಲ್ ಲೇಬರ್ ಆರ್ಗನೈಸೇಶನ್ ಋ.ಐ.ಔ. ನ್ಯಾಯಯುತ ಜಾಗತೀಕರಣಕ್ಕಾಗಿ ಸಾಮಾಜಿಕ ನ್ಯಾಯದ ಘೋಷಣೆ.ವಿಶ್ವಸಂಸ್ಥೆ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಕಚೇರಿ ಸೇರಿದಂತೆ ಪ್ರಪಂಚದಾದ್ಯಂತದ ಸಂಸ್ಥೆಗಳು ಜನರಿಗೆ ಸಾಮಾಜಿಕ ನ್ಯಾಯದ ಮಹತ್ವದ ಕುರಿತು ಹೇಳಿಕೆಗಳನ್ನು ನೀಡುತ್ತವೆ. ಸಮಸ್ಯೆಗಳನ್ನು ನಿಭಾಯಿಸಲು ಮತ್ತು ಸಾಮಾಜಿಕ ನ್ಯಾಯವನ್ನು ಉತ್ತೇಜಿಸಲು ಸಂಸ್ಥೆಗಳು ಯೋಜನೆಗಳನ್ನು ಸಿದ್ಧಪಡಿಸುತ್ತವೆ ಮತ್ತು ಪ್ರಸ್ತುತಪಡಿಸುತ್ತವೆ.

# ಮಹಿಳೆಯರಿಗೆ 2.67 ಲಕ್ಷ ಸಬ್ಸಿಡಿ




**ನವದೆಹಲಿ:** ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅವಧಿಯನ್ನ ಡಿಸೆಂಬರ್ 2024ರವರೆಗೆ ವಿಸ್ತರಿಸಲಾಗಿದೆ. ಈ ಯೋಜನೆಯಡಿ ಮಹಿಳೆಯರಿಗೆ ಗೃಹ ಸಾಲ ಸಿಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ಭಾರಿ ಅನುದಾನ ನೀಡುತ್ತಿದೆ. ಈ ಯೋಜನೆಯು ಮುಖ್ಯವಾಗಿ ಕಡಿಮೆ ಮತ್ತು ಮಧ್ಯಮ ಆದಾಯದವರಿಗೆ ಶಾಶ್ವತ ವಸತಿ ಒದಗಿಸುವ ಗುರಿಯನ್ನ ಹೊಂದಿದೆ. ಈ ಸೌಲಭ್ಯವು ಎಲ್ಲಾ ಮೂರು ವಿಭಾಗಗಳಲ್ಲಿ ಲಭ್ಯವಿದೆ. ಒಂದು ಇಢಾಖ, ಐಖಲು, ಎರಡನೆಯದು MIG-1 ಮತ್ತು ಮೂರನೆಯದು MIG-2. EWS ಆರ್ಥಿಕವಾಗಿ ದುರ್ಬಲ ಘಟಕವಾಗಿದೆ. MIG-1 ಕಡಿಮೆ ಆದಾಯದ ಜನರು ಮತ್ತು MIG-2 ಮಧ್ಯಮ ಆದಾಯದ ಜನರು. ಈ ಪ್ರಕರಣದಲ್ಲಿ ರಿಯಾಯಿತಿ ಪಡೆಯಲು ಮಾತ್ರ ಷರತ್ತು ಎಂದರೆ ಮನೆಯ ಮಾಲೀಕರು ಮಹಿಳೆಯಾಗಿರಬೇಕು. ಕುಟುಂಬದ ಆದಾಯ 6 ಲಕ್ಷ ರೂಪಾಯಿ ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಮನೆಯ ಕಾರ್ಪೆಟ್ ಪ್ರದೇಶವು ಆರ್ಥಿಕವಾಗಿ ಹಿಂದುಳಿದ ವರ್ಗ ಸಂದರ್ಭದಲ್ಲಿ 30 ಚದರ ಮೀಟರ್ ಮತ್ತು ಎಲ್ಐಜಿಯ ಸಂದರ್ಭದಲ್ಲಿ 60 ಚದರ ಮೀಟರ್ ಆಗಿರಬೇಕು. ಸಬ್ಸಿಡಿ ಪಡೆಯಲು ಮುಖ್ಯ ಷರತ್ತು ಎಂದರೆ ಆಸ್ತಿ ಮಹಿಳೆಯ ಹೆಸರಿನಲ್ಲಿರಬೇಕು. ಈ ಸಂದರ್ಭದಲ್ಲಿ, ಗರಿಷ್ಠ ಸಾಲದ ಮೊತ್ತ 6 ಲಕ್ಷ ರೂಪಾಯಿಗಳು. ಹಿಂದಿನ ಮನೆ ಕುಟುಂಬದ ಸದಸ್ಯರ ಹೆಸರಿನಲ್ಲಿ ಇರಬಾರದು. ಗರಿಷ್ಠ ರೂ.2.67 ಲಕ್ಷ ಸಹಾಯಧನ ನೀಡಲಾಗುವುದು. ಈ ಹಣವನ್ನ ಆಕೆಯ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

# ಫೆಲಸ್ತೀನ್ ವಿದೇಶಾಂಗ ಸಚಿವರ ಜತೆ ಜೈಶಂಕರ್ ಚರ್ಚೆ



**ಮ್ಯೂನಿಚ್:** ಜರ್ಮನಿಯಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಮ್ಯೂನಿಚ್ ಭದ್ರತಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ರವಿವಾರ ಫೆಲಸ್ತೀನ್ ವಿದೇಶಾಂಗ ಸಚಿವ ರಿಯಾದ್ ಅಲ್–ಮಲೀಕಿಯನ್ನು ಭೇಟಿಯಾಗಿ ಯುದ್ಧದಿಂದ ಜರ್ಝರಿತಗೊಂಡಿರುವ ಗಾಝಾದಲ್ಲಿನ ಪ್ರಸಕ್ತ ಸ್ಥಿತಿಗತಿಯ ಬಗ್ಗೆ ಚರ್ಚೆ ನಡೆಸಿದರು ಎಂದು ವರದಿಯಾಗಿದೆ.ಫೆಲೆಸ್ತೀನ್ ಸಮಸ್ಯೆಗೆ ದ್ವಿರಾಷ್ಟ್ರ ಸೂತ್ರವೇ ಸೂಕ್ತ ಪರಿಹಾರ ಮಾರ್ಗವಾಗಿದೆ ಎಂದು ಭಾರತ ದೀರ್ಘಾವಧಿಯಿಂದ ಪ್ರತಿಪಾದಿಸುತ್ತಿದೆ. ಮ್ಯೂನಿಚ್ ಸಮಾವೇಶದ ಸಂದರ್ಭ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಜೈಶಂಕರ್ 'ಫೆಲೆಸ್ತೀನ್ ಸಮಸ್ಯೆಗೆ ದ್ವಿರಾಷ್ಟ್ರ ಸೂತ್ರವೇ ಸೂಕ್ತ ಪರಿಹಾರ ಎಂದು ಪ್ರತಿಪಾದಿಸುವ ದೇಶಗಳ ಸಂಖ್ಯೆ ಹೆಚ್ಚಿದೆ. ಆದರೆ ಇದೀಗ ಈ ಬಗ್ಗೆ ತ್ವರಿತ ನಿರ್ಧಾರ ಕೈಗೊಳ್ಳುವ ಅಗತ್ಯವಿದೆ' ಎಂದರು.

## ನಿವಾಸದಿಂದ 'ಜೈ ಶ್ರೀರಾಂ' ಧ್ವಜವನ್ನು ತೆಗೆದ ಕಮಲನಾಥ

**ಹೊಸದಿಲ್ಲಿ:** ಕಾಂಗ್ರೆಸ್ ತೊರೆದು ಬಿಜೆಪಿ ಸೇರುವ ವದಂತಿಗಳ ನಡುವೆಯೇ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲನಾಥ ಅವರು ಇಲ್ಲಿಯ ತನ್ನ ನಿವಾಸದಿಂದ 'ಜೈ ಶ್ರೀರಾಂ' ಧ್ವಜವನ್ನು ತೆಗೆದಿದ್ದಾರೆ. ಮಾಧ್ಯಮ ವರದಿಯಂತೆ ಕಮಲನಾಥ ರವಿವಾರ ತನ್ನ ದಿಲ್ಲಿ ನಿವಾಸದ ಮೇಲೆ ಕೇಸರಿ ಧ್ವಜವನ್ನು ಹಾರಿಸಿದ್ದರು. ರವಿವಾರ ಕಮಲನಾಥ ಮತ್ತು ಅವರ ಪುತ್ರ ಮಧ್ಯಪ್ರದೇಶದ ಏಕೈಕ ಕಾಂಗ್ರೆಸ್ ಸಂಸದ ನಕುಲ್ನಾಥ ದಿಲ್ಲಿಗೆ ಆಗಮಿಸುವುದರೊಂದಿಗೆ ಬಿಜೆಪಿ ಸೇರ್ಪಡೆ ವದಂತಿಗಳು ಇನ್ನಷ್ಟು ದಟ್ಟಗೊಂಡಿದ್ದವು. ನಕುಲ್ ಈಗಾಗಲೇ ತನ್ನ ಸಾಮಾಜಿಕ ಮಾಧ್ಯಮ ಪ್ರೊಫೈಲ್ನಿಂದ ಪಕ್ಷದ ಹೆಸರನ್ನು ತೆಗೆದಿದ್ದಾರೆ. ಕಮಲನಾಥ ದಿಲ್ಲಿಯಲ್ಲಿ ಬಿಜೆಪಿ ನಾಯಕತ್ವದೊಂದಿಗೆ ಮಾತುಕತೆಗಳನ್ನು ನಡೆಸಬಹುದು ಎಂಬ ವದಂತಿಗಳೂ ಹರಡಿದ್ದವು. ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಜೀತು ಪಟ್ವಾರಿಯವರು ಕಮಲನಾಥ ಪಕ್ಷವನ್ನು ತೊರೆದು ಬಿಜೆಪಿಗೆ ಸೇರುವ ಸಾಧ್ಯತೆಯನ್ನು ನಿರಾಕರಿಸಿದ್ದಾರೆ.





# ಭಾರತದ ಬಾಳೆಹಣ್ಣಿಗೆ ರಷ್ಯಾದಲ್ಲಿ ಭಾರಿ ಬೇಡಿಕೆ

**ದೆಹಲಿ:** ಭಾರತದ ಬಾಳೆಹಣ್ಣಿಗೆ ರಷ್ಯಾದಲ್ಲಿ ಬೇಡಿಕೆ ಹೆಚ್ಚಾಗಿದ್ದು, ಭಾರತ ಸರ್ಕಾರ ಹಡಗಿನ ಮೂಲಕ, ಬಾಳೆಹಣ್ಣನ್ನು ರಷ್ಯಾಗೆ ರವಾನಿಸಿದೆ. ಇನ್ನಷ್ಟು ಬಾಳೆಹಣ್ಣನ್ನು ರಷ್ಯಾ ಆಮದು ಮಾಡಿಕೊಳ್ಳುವ ನಿರೀಕ್ಷೆ ಇದೆ. ರಷ್ಯಾ ಮಾತ್ರವಲ್ಲದೇ, ಮಾಸ್ಕೋಗೂ ಕೂಡ ಬಾಳೆಹಣ್ಣನ್ನು ರಫ್ತು ಮಾಡಲಾಗಿದೆ.

ಆಂಧ್ರಪ್ರದೇಶದ ರೈತರು ಬೆಳೆಯುವ ಬಾಳೆಹಣ್ಣಿಗೆ ಹೆಚ್ಚಿನನ ಬೇಡಿಕೆ ಇದ್ದು, ಈ ರೈತರಿಂದ ಸರ್ಕಾರ ಹಣ್ಣು ಖರೀದಿಸಿ, ವಿದೇಶಕ್ಕೆ ರಫ್ತು ಮಾಡುತ್ತಿದೆ. ಈಗಾಗಲೇ ಭಾರತ ಹಲವು ದೇಶಗಳಿಗೆ ಬಾಳೆಹಣ್ಣು ರಫ್ತು ಮಾಡುತ್ತಿದೆ. ಮುಂಬೈನ ಸಮುದ್ರದ ಮೂಲಕ, ಹಡಗಿನಲ್ಲಿ ಬಾಳೆಹಣ್ಣುಗಳನ್ನು ರಫ್ತು ಮಾಡಲಾಗುತ್ತಿದ್ದು, ದೇಶದ ಹಲವು ರಾಜ್ಯಗಳಿಂದಲೂ, ಬಾಳೆಹಣ್ಣನ್ನು ಖರೀದಿಸಿ, ವಿದೇಶಕ್ಕೆ ರಫ್ತು ಮಾಡಲು ಭಾರತ ಸರ್ಕಾರ ನಿರ್ಧರಿಸಿದೆ.

# ಮೋದಿ ಅವಧಿಯಲ್ಲಿ ದೇಶವು ಭಯೋತ್ಪಾದನೆ, ನಕ್ಸಲಿಸಂನಿಂದ ಮುಕ್ತವಾಗಲಿದೆ: ಅಮಿತ್ ಶಾ




**ದೆಹಲಿ:** ದೆಹಲಿಯಲ್ಲಿ ನಡೆಯುತ್ತಿರುವ ಬಿಜೆಪಿ ರಾಷ್ಟ್ರೀಯ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ, ಇಂದು, ದೇಶದಲ್ಲಿ ಬಂಡಾಯ, ಭಯೋತ್ಪಾದನೆ ಮತ್ತು ನಕ್ಸಲಿಸಂ ಕೊನೆಯ ಉಸಿರನ್ನು ಎಣಿಸುತ್ತಿದೆ. ಮೋದಿ ಸರ್ಕಾರದ ಮೂರನೇ ಅವಧಿಯಲ್ಲಿ ದೇಶವು ಭಯೋತ್ಪಾದನೆ, ಪ್ರತ್ಯೇಕತಾವಾದ ಮತ್ತು ನಕ್ಸಲಿಸಂನಿಂದ ಸಂಪೂರ್ಣ ಮುಕ್ತವಾಗಲಿದೆ ಎಂದರು.

2024ರಲ್ಲಿ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಲಿದ್ದಾರೆ ಎಂದು ದೇಶವೀಗ ನಿರ್ಧರಿಸಿದೆ. ಚುನಾವಣೆಗೂ ಮುನ್ನ ನಡೆಯುತ್ತಿರುವ ಈ ರಾಷ್ಟ್ರೀಯ ಸಮಾವೇಶದ ಗುರಿ, 2047ರ ವೇಳೆಗೆ ಪ್ರಧಾನಿ ಮೋದಿಯವರ ಅಭಿವೃದ್ಧಿ ಹೊಂದಿದ ಭಾರತದ ಲಕ್ಷ್ಯಕ್ಕಾಗಿ ನಮ್ಮ ಬದ್ಧತೆಯನ್ನು ತೋರಿಸುವುದಕ್ಕಾಗಿ. ಈ ಸಂದೇಶದೊಂದಿಗೆ ನಮ್ಮ ಪಕ್ಷವು ದೇಶದ ಪ್ರತಿಯೊಂದು ಭಾಗವನ್ನು ತಲುಪಲಿದೆ. ಬಿಜೆಪಿ ಮೂರನೇ ಬಾರಿಗೆ ಗೆದ್ದು ಭಾರತವನ್ನು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ.ಜಮ್ಮು ಮತ್ತು ಕಾಶ್ಮೀರದಿಂದ 370ನೇ ವಿಧಿಯನ್ನು ರದ್ದುಗೊಳಿಸಿದಾಗ ಪ್ರತಿಪಕ್ಷಗಳು ಸಾಕಷ್ಟು ಗದ್ದಲವೆಬ್ಬಿಸಿದ್ದವು. ಆದಾಗ್ಯೂ, , ವಿಧಿ 370ನ್ನು ತೆಗೆದುಹಾಕಿದ ನಂತರ ಜಮ್ಮು ಮತ್ತು ಕಾಶ್ಮೀರವು ಹೊಸ ಬದಲಾವಣೆಗಳೊಂದಿಗೆ ಪ್ರಗತಿಯ ಹಾದಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ, ದೇಶವು ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿದ್ದು, ದೇಶದ ಆರ್ಥಿಕತೆ 11 ನೇ ಶ್ರೇಣಿಯಿಂದ 5 ನೇ ಶ್ರೇಣಿಗೆ ಉನ್ನತಿ ಹೊಂದಿದೆ. ಈ 10 ವರ್ಷಗಳಲ್ಲಾದ ಬೆಳವಣಿಗೆಯು, ಮೋದಿಯವರು ಮತ್ತೊಮ್ಮೆ ದೇಶದ ಪ್ರಧಾನಿಯಾಗಲಿದ್ದಾರೆ ಎಂಬುದಕ್ಕೆ ಯಾವುದೇ ಶಂಕೆಗೆ ಆಸ್ಪದ ನೀಡುವುದಿಲ್ಲ.

75 ವರ್ಷಗಳಲ್ಲಿ , ಈ ದೇಶವು 17 ಲೋಕಸಭಾ ಚುನಾವಣೆಗಳು, 22 ಸರ್ಕಾರಗಳು ಮತ್ತು 15 ಪ್ರಧಾನ ಮಂತ್ರಿಗಳಿಗೆ ಸಾಕ್ಷಿಯಾಗಿದೆ ಎಂದು ಗೃಹ ಮತ್ತು ಸಹಕಾರ ಸಚಿವರು ಹೇಳಿದರು. ದೇಶದ ಹಿಂದಿನ ಪ್ರತಿಯೊಂದು ಸರ್ಕಾರಗಳು ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಮಾಡಲು ಪ್ರಯತ್ನಿಸಿವೆ. ಆದರೆ ಇಂದು ಸಮಗ್ರ ಅಭಿವೃದ್ಧಿ, ಪ್ರತಿಯೊಂದು ಕ್ಷೇತ್ರದ ಅಭಿವೃದ್ಧಿ, ಪ್ರತಿಯೊಬ್ಬ ವ್ಯಕ್ತಿಯ ಅಭಿವೃದ್ಧಿ ನರೇಂದ್ರ ಮೋದಿಯವರ 10 ವರ್ಷಗಳಲ್ಲಿ ಮಾತ್ರ ನಡೆದಿದೆ ಎಂದು ಯಾವುದೇ ಗೊಂದಲವಿಲ್ಲದೆ ಹೇಳಬಹುದು. ಈ 10 ವರ್ಷಗಳಲ್ಲಿ ಮೋದಿಯವರು ಸ್ವಜನಪಕ್ಷಪಾತ, ಜಾತೀಯತೆ ಮತ್ತು ತುಷ್ಟೀಕರಣವನ್ನು ತೊಡೆದುಹಾಕಲು ಕೆಲಸ ಮಾಡಿದ್ದಾರೆ.

ಇಂಡಿಯ ಮೈತ್ರಿಕೂಟ ಮತ್ತು ಕಾಂಗ್ರೆಸ್ ಪಕ್ಷವು ಯಾವಾಗಲೂ ಭ್ರಷ್ಟಾಚಾರ, ಸ್ವಜನಪಕ್ಷಪಾತ, ತುಷ್ಟೀಕರಣ ಮತ್ತು ಜಾತೀಯತೆಯನ್ನು ಉತ್ತೇಜಿಸಿದೆ. ಆದರೆ, ಪ್ರಧಾನಿ ಮೋದಿಯವರು ಈ 10 ವರ್ಷಗಳಲ್ಲಿ ದೇಶದಿಂದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ತುಷ್ಟೀಕರಣ ಮತ್ತು ಜಾತೀಯತೆಯನ್ನು ತೊಡೆದುಹಾಕಲು ಮತ್ತು ಅಭಿವೃದ್ಧಿಯತ್ತ ಗಮನ ಹರಿಸಲು ಶ್ರಮಿಸಿದ್ದಾರೆ.ಮತ್ತಷ್ಟು ತೀಕ್ಷ್ಣತೆಯಿಂದ ವಾಗ್ದಾಳಿ ಮುಂದುವರೆಸಿದ ರಾಜಕೀಯ ಚಾಣಕ್ಯ ಷಾ , 'ಇಂಡಿಯಾ ಮೈತ್ರಿಕೂಟವು ಏಳು ಕುಟುಂಬ ಆಧಾರಿತ ಪಕ್ಷಗಳ ಒಕ್ಕೂಟವಾಗಿದೆ, ಇದು ದೇಶದಲ್ಲಿ 2ಜಿ, 3ಜಿ ಮತ್ತು 4ಜಿ ರೂಪದಲ್ಲಿದೆ' ಎಂದರು.

## ನವಾಲ್ನಿ ಸಾವಿನ ತನಿಖೆ ಚುರುಕು

**ಮಾಸ್ಕೋ:** ಅಲೆಕ್ಸಿ ನವಾಲ್ನಿಯ ಸಾವಿನ ಕುರಿತ ತನಿಖೆ ನಡೆಯುತ್ತಿದೆ ಎಂದು ರಶ್ಯ ಅಧ್ಯಕ್ಷರ ಕಚೇರಿ ಸೋಮವಾರ ಹೇಳಿದ್ದು, ಅಲೆಕ್ಸಿ ನವಾಲ್ನಿ ಸಾವಿನ ಪ್ರಕರಣದಲ್ಲಿ ರಶ್ಯ ಸರಕಾರವನ್ನು ಹೊಣೆಯಾಗಿಸಬೇಕೆಂಬ ಆಗ್ರಹ ಹಾಸ್ಯಾಸ್ಪದ ಎಂದು ಖಂಡಿಸಿದೆ. ನವಾಲ್ನಿ ಸಾವಿನ ತನಿಖೆ ಪಾರದರ್ಶಕ ರೀತಿಯಲ್ಲಿ ಮುಂದುವರಿದಿದೆ. ನವಾಲ್ನಿ ಸಾವಿನ ಪ್ರಕರಣದ ಕುರಿತ ಕೀಳುಮಟ್ಟದ ಹೇಳಿಕೆಗಳು ಸ್ವೀಕಾರಾರ್ಹವಲ್ಲ ಎಂದು ರಶ್ಯ ಅಧ್ಯಕ್ಷರ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ. ಈ ಮಧ್ಯೆ, ತನ್ನ ಪತಿಯ ಕೆಲಸವನ್ನು ಮತ್ತು ಸ್ವತಂತ್ರ ರಶ್ಯಕ್ಕಾಗಿನ ಹೋರಾಟವನ್ನು ನಾನು ಮುಂದುವರಿಸುತ್ತೇನೆ. ಸ್ವತಂತ್ರ ರಶ್ಯದಲ್ಲಿ ಬದುಕಲು ನಾನು ಬಯಸುತ್ತೇನೆ' ಎಂದು ಅಲೆಕ್ಸಿ ನವಾಲ್ನಿಯ ಪತ್ನಿ ಯೂಲಿಯಾ ನವಲ್ನಾಯಾ ಹೇಳಿದ್ದಾರೆ.



## ಗಾಜಾ ಪಟ್ಟಿಯ ರಫಾ ನಗರವನ್ನು ಆಕ್ರಮಿಸಲಾಗುವುದು : ಇಸ್ರೇಲ್ ಬೆದರಿಕೆ

**ಇಸ್ರೇಲ್:** ಹಮಾಸ್ ಬಂಡುಕೋರರು ತಮ್ಮ ವಶದಲ್ಲಿರುವ ಎಲ್ಲ ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದರೆ, ರಂಜಾನ್ ತಿಂಗಳ ಆರಂಭದ ಸಂದರ್ಭದಲ್ಲಿ ಗಾಜಾ ಪಟ್ಟಿಯ ರಫಾ ನಗರವನ್ನು ಆಕ್ರಮಿಸಲಾಗುವುದು ಎಂದು ಇಸ್ರೇಲ್ ಬೆದರಿಕೆ ಹಾಕಿದೆ. ಕದನ ವಿರಾಮದ ಸಂದರ್ಭದಲ್ಲಿ ನಡೆದ ಮಾತುಕತೆಗಳು ನಿರೀಕ್ಷಿತ ಫಲವನ್ನು ನೀಡಿಲ್ಲ ಮತ್ತು ಇಸ್ರೇಲ್ ಬೆದರಿಕೆ ಹಾಕಿದ ಬೆನ್ನಲ್ಲೇ ವಿಶ್ವಸಂಸ್ಥೆ, ಅಮೆರಿಕ ಹಾಗೂ ಅನೇಕ ದೇಶಗಳು ರಫಾ ಮೇಲೆ ಆಕ್ರಮಣ ಮಾಡುವ ನಿರ್ಧಾರವನ್ನು ಕೈ ಬಿಡಬೇಕು ಎಂದು ಇಸ್ರೇಲ್ಗೆ ಮನವಿ ಮಾಡಿಕೊಂಡಿವೆ. ರಫಾ ನಗರದಲ್ಲಿ ಆಶ್ರಯ ಪಡೆದಿರುವ ಪ್ಯಾಲೆಸ್ಟೀನ್ ನಾಗರಿಕರ ರಕ್ಷಣೆ ಕುರಿತು ಇಸ್ರೇಲ್ ಮೇಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಒತ್ತಡ ಇದ್ದರು ಈ ಬೆದರಿಕೆಯನ್ನು ಇಸ್ರೇಲ್ ಹಮಾಸ್ ಮೇಲೆ ಹಾಕಿದೆ.

## ನೂಪುರ್ ಶರ್ಮಾ ಬೆಂಬಲಿಸಿ ವೈಯಕ್ತಿಕ ಸಂದೇಶ ಕಳಿಸಿದ್ದೇನೆಂದ ಡಚ್ ನಾಯಕ

**ಆಮ್ಸ್ಟರ್ಡ್ಯಾಮ್:** ಇಸ್ಲಾಂ ವಿರೋಧಿ ನಿಲುವುಗಳಿಗೆ ಹೆಸರುವಾಸಿಯಾಗಿದ್ದ ಡಚ್ ಬಲಪಂಥೀಯ ನಾಯಕ ಗೀರ್ಟ್ ವೈಲ್ಡರ್ಸ್ ಅವರೀಗ ಮತ್ತೆ ಸುದ್ದಿಯಲ್ಲಿದ್ದಾರೆ.ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ ಕುರಿತು ಅವಹೇಳಕಾರಿ ಹೇಳಿಕೆ ನೀಡಿ, ದೇಶಾದ್ಯಂತ ವ್ಯಾಪಕ ಟೀಕೆಗೆ ಗುರಿಯಾಗಿದ್ದ ನೂಪುರ್ ಶರ್ಮಾ ಬೆಂಬಲಿಸಿ ಎಕ್ಸ್ ಖಾತೆಯಲ್ಲಿ ಸಂದೇಶವೊಂದನ್ನು ಹಂಚಿಕೊಂಡಿದ್ದಾರೆ. ಧೈರ್ಯಶಾಲಿ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ವೈಯಕ್ತಿಕ ಸಂದೇಶ ಕಳುಹಿಸಿದ್ದೇನೆ ಎಂದು ಗೀರ್ಟ್ ವೈಲ್ಡರ್ಸ್ X ಖಾತೆಯಲ್ಲಿ ತಿಳಿಸಿದ್ದಾರೆ. ಅಲ್ಲದೇ ಕಳೆದ ವರ್ಷ ಸಂಸತ್ತಿನ ಚುನಾವಣೆಯಲ್ಲಿ ಗೆಲವು ಸಾಧಿಸಿದ ವೈಲ್ಡರ್ಸ್ ನೂಪುರ್ ಅವರನ್ನು ಭೇಟಿಯಾಗಲು ಬಯಸುತ್ತೇನೆ ಎಂಬುದಾಗಿಯೂ ಹೇಳಿಕೊಂಡಿದ್ದಾರೆ. ಸತ್ಯವನ್ನು ಮಾತನಾಡಿದ್ದಕ್ಕಾಗಿ ಇಸ್ಲಾಮಿಸ್ಟ್‌ಗಳಿಂದ ಬೆದರಿಕೆ ಎದುರಿಸುತ್ತಿರುವ ಧೈರ್ಯಶಾಲಿ ನೂಪುರ್ ಶರ್ಮಾ ಅವರಿಗೆ ವೈಯಕ್ತಿಕವಾಗಿ ಬೆಂಬಲಿಸುವ ಸಂದೇಶ ಕಳುಹಿಸಿದ್ದೇನೆ. ಪ್ರಪಂಚದಾದ್ಯಂತ ಇರುವ ಸ್ವಾತಂತ್ರ್ಯ ಪ್ರೇಮಿಗಳು ಅವಳನ್ನು ಬೆಂಬಲಿಸಬೇಕು. ಭಾರತಕ್ಕೆ ಭೇಟಿ ನೀಡುವಾಗ ಒಂದು ದಿನ ಅವರನ್ನು ಭೇಟಿಯಾಗಲು ಬಯಸುತ್ತೇನೆ ಎಂದು ಗೀರ್ಟ್ ವೈಲ್ಡರ್ಸ್ ಬರೆದುಕೊಂಡಿದ್ದಾರೆ. ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ಈ ಹಿಂದೆಯೂ ವೈಲ್ಡರ್ಸ್ ಹೊಗಳಿದ್ದರು. ನೂಪುರ್ ಶರ್ಮಾ ಸತ್ಯವನ್ನು ಬಿಟ್ಟು ಬೇರೇನೂ ಮಾತನಾಡದ ವೀರ ಮಹಿಳೆ. ಇಡೀ ಜಗತ್ತು ಅವಳ ಬಗ್ಗೆ ಹೆಮ್ಮೆ ಪಡಬೇಕು. ಅವಳು ನೊಬೆಲ್ ಪ್ರಶಸ್ತಿಗೆ ಅರ್ಹಳು ಎಂದು ಹೇಳಿದ್ದರು.



# MSP ಆಫರ್ ತಿರಸ್ಕರಿಸಿದ ರೈತ ಸಂಘಟನೆ!



**ದೆಹಲಿ:** ಐದು ವರ್ಷಗಳ ಎಂಎಸ್ಪಿ ಆಫರ್ ಸಂಬಂಧ ಸರ್ಕಾರ ಮತ್ತು ಪ್ರತಿಭಟನಾ ರೈತರ ನಡುವೆ ಭಾನುವಾರ ರಾತ್ರಿ ನಾಲ್ಕನೇ ಸುತ್ತಿನ ಮಾತುಕತೆ ಬಳಿಕ ಇದೀಗ ರೈತ ಸಂಘಗಳ ಒಕ್ಕೂಟ ಸಂಘಟನೆಯಾದ ಸಂಯುಕ್ತ ಕಿಸಾನ್ ಮೋರ್ಚಾ ಹಳೆಯ ಒಖಕ ನಲ್ಲಿ ಮೂರು ವಿಧದ ಬೇಳೆಕಾಳುಗಳು, ಜೋಳ ಮತ್ತು ಹತ್ತಿಯನ್ನು ಖರೀದಿಸಲು ಕೇಂದ್ರ ಸರ್ಕಾರದ ಐದು ವರ್ಷಗಳ ಒಪ್ಪಂದ ಪ್ರಸ್ತಾಪವನ್ನು ತಿರಸ್ಕರಿಸಿದೆ.

ಸೋಮವಾರ ಸಂಜೆ ಕೇಂದ್ರ ಸರ್ಕಾರದ ಪ್ರಸ್ತಾವನೆಯನ್ನು ರೈತರ ಬೇಡಿಕೆಗಳನ್ನು ದಿಕ್ಕು ತಪ್ಪಿಸುವವು ಎಂದು ಹೇಳಿ ಎಸ್ಕೆಎಂ ಟೀಕಿಸಿತು.

ಭಾನುವಾರ ತಡರಾತ್ರಿ, ರೈತ ಮುಖಂಡರೊಂದಿಗಿನ ಸಭೆಯಿಂದ ನಿರ್ಗಮಿಸಿದ ಕೇಂದ್ರ ಸಚಿವ ಪಿಯೂಷ್ ಗೋಯಲ್, ಕೃಷಿ ಮತ್ತು ರೈತ ಕಲ್ಯಾಣ ಸಚಿವ ಅರ್ಜುನ್ ಮುಂಡಾ ಮತ್ತು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅವರೊಂದಿಗೆ ಮೂವರು ಕೇಂದ್ರ ಸಚಿವರ ಸಮಿತಿಯು ಐದು ವರ್ಷಗಳ ಯೋಜನೆಯನ್ನು ಪ್ರಸ್ತಾಪಿಸಿದೆ ಎಂದು ಹೇಳಿದರು. ದ್ವಿದಳ ಧಾನ್ಯಗಳು, ಮೆಕ್ಕೆಜೋಳ ಮತ್ತು ಹತ್ತಿ ಬೆಳೆಗಳನ್ನು ರೈತರಿಂದ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸುವುದು ಇದರಲ್ಲಿ ಸೇರಿದೆ.

ಆದ್ರೆ, ಸೋಮವಾರ ಸಂಜೆ ಎಸ್ಕೆಎಂ ಕೇಂದ್ರ ಸ್ರಕಾರದ ಪ್ರಸ್ತಾಪವನ್ನು ರೈತರು ತಿರಸ್ಕರಿಸಿದ್ದಾರೆ ಎಂದು ಹೇಳಿದೆ. ರೈತರ ಮೂಲಭೂತ ಬೇಡಿಕೆಗಳನ್ನು ಬೇರೆಡೆಗೆ ತಿರುಗಿಸುವುದು ಈ ಆಫರ್ ಹಿಂದಿರುವ ಉದ್ದೇಶವಾಗಿದೆ ಎಂದು ಟೀಕಿಸಿದೆ. ಎಲ್ಲಾ ಬೆಳೆಗಳನ್ನು ಖರೀದಿಗೆ ಖಾತರಿಪಡಿಸಿದ ಸಂಗ್ರಹಣೆ ಗಿಂತ ಕಡಿಮೆಯಿಲ್ಲದೇ ಖರೀದಿಸಬೇಕು. 2014ರ ಪ್ರಣಾಳಿಕೆಯಲ್ಲಿ ತಿಳಿಸಲಾದ ಬೇಡಿಕೆಯನ್ನು ಈಡೇರಿಸಬೇಕು ಎಂದು ಒಕ್ಕೂಟವು ಹೇಳಿದೆ.

# ಅಂಡರ್ ವರ್ಲ್ಡ್ ಡಾನ್ ಅಮೀರ್ ಬಾಲಾಜ್ ಟೈಪು ಹತ್ಯೆ



**ದೆಹಲಿ:** ಭೂಗತ ಪಾತಕಿಯನ್ನು ಮದುವೆ ಮೆರವಣಿಗೆ ಸಂದರ್ಭದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿರುವ ಘಟನೆ ಪಾಕಿಸ್ತಾನದ ಲಾಹೋರ್ ನಲ್ಲಿ ನಡೆದಿದೆ.

ಅಮೀರ್ ಬಾಲಾಜ್ ಟಿಪ್ಪು ಮೃತ ಭೂಗತ ಪಾತಕಿ. ಘಟನೆಯ ವೇಳೆ ಮದುವೆಗೆ ಬಂದಿರುವ ಅತಿಥಿಗಳಲ್ಲಿ ಮೂವರಿಗೆ ಗಾಯಗಳಾಗಿವೆ. ದಾಳಿಯಿಂದ ಗಾಯಗೊಂಡವರನ್ನು ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು.

ಆದರೆ ಅಮೀರ್ ಅದಾಗಲೇ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ.ಮೃತ ಅಮೀರ್ ಎದೆಗೆ ನಾಲ್ಕು ಗುಂಡುಗಳು ತಗುಲಿದ್ದು, ಗುಂಡಿನ ದಾಳಿಯಿಂದಾಗಿ ತೀವ್ರ ರಕ್ತಸ್ರಾವವಾಗಿ ಅಮೀರ್ ಸಾವನ್ನಪ್ಪಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಅಮೀರ್ ಸಾವಿನ ಸುದ್ದಿ ಬೆಂಬಲಿಗರನ್ನು ಕೆರಳಿಸಿದೆ. ಕೂಡಲೇ ಆಸ್ಪತ್ರೆಯ ಹೊರಗೆ ಅಮೀರ್ ಬೆಂಬಲಿಗರು ಜಮಾಯಿಸಿದರು. ಮಹಿಳೆಯರಂತೂ ತಮ್ಮ ಎದೆಗೆ ಹೊಡೆದುಕೊಂಡು ದುಷ್ಕರ್ಮಿಗಳ ಕೃತ್ಯ ಖಂಡಿಸಿದರು.

# ಶುಭ್ಮನ್ ಗಿಲ್ ಪಂಜಾಬ್‌ನ ರಾಜ್ಯ ಚುನಾವಣಾ ಐಕಾನ್ ಆಗಿ ಆಯ್ಕೆ

**ದೆಹಲಿ:** ಲೋಕಸಭೆ ಚುನಾವಣೆಗೂ ಮುನ್ನ ಟೀಂ ಇಂಡಿಯಾದ ಸ್ಟಾರ್ ಬ್ಯಾಟ್ಸ್ಮನ್ ಶುಭ್ಮನ್ ಗಿಲ್ಗೆ ರಾಜ್ಯ ಚುನಾವಣಾ ಆಯೋಗ ದೊಡ್ಡ ಜವಾಬ್ದಾರಿಯನ್ನು ವಹಿಸಿದ್ದು, ಯುವ ಆರಂಭಿಕ ಆಟಗಾರನನ್ನು ಪಂಜಾಬ್ನ ರಾಜ್ಯ ಚುನಾವಣಾ ಐಕಾನ್ ಆಗಿ ಆಯ್ಕೆ ಮಾಡಿದೆ.

ಇದೀಗ ಹೊಸ ಜವಬ್ದಾರಿಯನ್ನು ವಹಿಸಿಕೊಂಡಿರುವ ಶುಭ್ಮನ್ ಗಿಲ್, ಚುನಾವಣೆಗೂ ಮುನ್ನ ಮತದಾರರಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮಾಡಲಿದ್ದಾರೆ.ಸ್ವತಃ ಈ ಮಾಹಿತಿಯನ್ನು ಮುಖ್ಯ ಚುನಾವಣಾಧಿಕಾರಿ ಸಿಬಿನ್ ಸಿ. ಹಂಚಿಕೊಂಡಿದ್ದಾರೆ.

ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಮುಖ್ಯ ಚುನಾವಣಾಧಿಕಾರಿ, ಕ್ರಿಕೆಟಿಗ ಶುಭ್ಮನ್ ಗಿಲ್ಗೆ ಹೊಸ ಜವಾಬ್ದಾರಿ ನೀಡಲಾಗಿದೆ. ಅದರಂತೆ ಗಿಲ್ ಪ್ರತ್ಯೇಕವಾಗಿ ಲೋಕಸಭಾ ಚುನಾವಣಾ ಪ್ರಚಾರದ ಭಾಗವಾಗಲಿದ್ದಾರೆ. ರಾಜ್ಯದಲ್ಲಿ ಮತದಾನದ ಪ್ರಮಾಣ ಶೇ 70ರ ಗಡಿ ದಾಟುವಂತೆ ಮತದಾರರಲ್ಲಿ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ. 2019 ರ ಲೋಕಸಭಾ ಚುನಾವಣೆಯಲ್ಲಿ ಪಂಜಾಬ್ನಲ್ಲಿ 13 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶೇಕಡಾ 65.96 ರಷ್ಟು ಮತದಾನವಾಗಿತ್ತು. ಈ ಬಾರಿಯ ಮತದಾನವನ್ನು ಶೇ.70ರಷ್ಟಕ್ಕೆ ಏರಿಸುವುದು ನಮ್ಮ ಗುರಿಯಾಗಿದೆ ಎಂದು ಚುನಾವಣಾಧಿಕಾರಿ ಹೇಳಿದ್ದಾರೆ. 'ಈ ಬಾರಿ 70 ದಾಟಬೇಕು' ಎಂಬ ಘೋಷವಾಕ್ಯದೊಂದಿಗೆ ಆಯೋಗ ಚುನಾವಣಾ ಪ್ರಚಾರ ನಡೆಸುತ್ತಿದೆ.




# ಉತ್ತರ ಭಾರತದ ಹಲವೆಡೆ ಭಾರಿ ಮಳೆ ಮುನ್ಸೂಚನೆ

**ನವದೆಹಲಿ:** ಉತ್ತರ ಭಾರತದ ಹಲವೆಡೆ ಜಮ್ಮು ಮತ್ತು ಕಾಶ್ಮೀರ ಮತ್ತು ಹಿಮಾಚಲ ಪ್ರದೇಶದಲ್ಲಿ, ಹಿಮಪಾತದ ಜತೆಗೆ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಎತ್ತರದ ಪ್ರದೇಶಗಳಲ್ಲಿ ಭಾರೀ ಹಿಮಪಾತ ಮತ್ತು ಬಯಲು ಸೀಮೆಯಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಮುಂದಿನ ಮೂರು ದಿನಗಳ ಕಾಲ ಇದು ಮುಂದುವರೆಯುವ ಸಾಧ್ಯತೆಯಿದೆ.ಫೆಬ್ರವರಿ 21 ರವರೆಗೆ ಜಮ್ಮು–ಕಾಶ್ಮೀರ, ಲಡಾಖ್ ಮತ್ತು ಹಿಮಾಚಲ ಪ್ರದೇಶದಲ್ಲಿಭಾರೀ ಮಳೆ, ಹಿಮಪಾತ ಮತ್ತು ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯನ್ನು ಸೂಚಿಸಿ ರೆಡ್ ಅಲರ್ಟ್ ಘೋಷಿಸಲಾಗಿದೆ.ಎತ್ತರದ ಪ್ರದೇಶಗಳಲ್ಲಿ ಹಿಮ ಬೀಳುವ ಸಾಧ್ಯತೆಯಿದೆ. ಈ ಅವಧಿಯಲ್ಲಿ ವಾಯುವ್ಯ ಮತ್ತು ಈಶಾನ್ಯ ರಾಜಸ್ಥಾನ ಮತ್ತು ವಾಯವ್ಯ ಮಧ್ಯಪ್ರದೇಶದಲ್ಲಿ ಕೆಲವೆಡೆ ಲಘು ಮಳೆಯೊಂದಿಗೆ ಬಲವಾದ ಗಾಳಿ ಬೀಸುವ ಸಾಧ್ಯತೆ ಇದೆ. ಶ್ರೀನಗರ–ಲೇಹ್ ಹೆದ್ದಾರಿಯಲ್ಲಿ ವಾಹನ ಸಂಚಾರವನ್ನು ಮುಚ್ಚಲಾಗಿದೆ. ಬಾರ್ಡರ್ ರೋಡ್ಸ್ ಆರ್ಗನೈಸೇಶನ್ ರಸ್ತೆಯಿಂದ ಹಿಮವನ್ನು ತೆಗೆದುಹಾಕುವಲ್ಲಿ ನಿರತವಾಗಿದೆ.



ಮಂಗಳವಾರ 20.2.2024
ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಟಾಪ್‌ಲೆಸ್ ಅವತಾರದಲ್ಲಿ ಸೋನಾಲ್



ಮುಂಬೈ ಬೆಡಗಿ ಸೋನಾಲ್ ರಾವತ್ ಅವರು 'ಬಿಗ್ ಬಾಸ್' ಹಿಂದಿ ಸೀಸನ್ 8ರಲ್ಲಿ ಸದ್ದು ಮಾಡಿದವರು. ಈಗ ಹಾಟ್ ಫೋಟೋಶೂಟ್ ಮೂಲಕ ಸೋಷಿಯಲ್ ಮೀಡಿಯಾದಲ್ಲಿ ಸೆನ್ಸೇಷನ್ ಕ್ರಿಯೇಟ್ ಮಾಡಿದ್ದಾರೆ.

ಸದಾ ಒಂದಲ್ಲಾ ಒಂದು ಫೋಟೋಶೂಟ್ ಮೂಲಕ ಸದ್ದು ಮಾಡುವ ನಟಿ ಸೋನಾಲಿ ಅವರು ಈಗ ಟಾಪ್‌ಲೆಸ್ ಆಗಿ ಕಾಣಿಸಿಕೊಂಡಿದ್ದಾರೆ. ನಟಿ ಹ್ಯಾಟ್ ಅಡ್ಡ ಇಟ್ಟಿದ್ದಾರೆ. ಸೋನಾಲಿ ಹಾಟ್ ಲುಕ್‌ಗೆ ಹಾಟ್, ಸೆಕ್ಸಿ, ಬ್ಯೂಟಿ ಎಂದೆಲ್ಲಾ ಬಗೆ ಬಗೆಯ ಕಾಮೆಂಟ್‌ಗಳು ನೆಟ್ಟಿಗರಿಂದ ಹರಿದು ಬರುತ್ತಿವೆ. 2014ರಲ್ಲಿ ಸೋನಾಲಿ ಅವರು ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದ್ದರು. ಬಳಿಕ ಬಿಗ್ ಬಾಸ್ 8ರಲ್ಲಿ ಸೋನಾಲಿ ಗಟ್ಟಿಗಿತ್ತಿ ಆಗಿ ಗುರುತಿಸಿಕೊಂಡಿದ್ದರು. 105 ದಿನಗಳ ಕಾಲ ಸೋನಾಲಿ ದೊಡ್ಮನೆಯಲ್ಲಿ ಇದ್ದರು.

ಸೋನಾಲಿ ರಾವತ್ ಅವರು ಪ್ರತಿಷ್ಠಿತ ಕ್ಯಾಲೆಂಡರ್‌ವೊಂದರಲ್ಲಿ ಮಾಡೆಲ್ ಆಗಿದ್ದರು. ಅಂದಿನ ಅವರ ಹಾಟ್ ಲುಕ್ ಸೋಷಿಯಲ್ ಮೀಡಿಯಾದಲ್ಲಿ ಸಂಚಲನ ಮೂಡಿಸಿತ್ತು. ಸಖತ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದರು.

ಸಾಕಷ್ಟು ಸಿನಿಮಾಗಳಲ್ಲಿ ಸೋನಾಲಿ ರಾವತ್ ನಟಿಸಿದ್ದಾರೆ. ಆದರೆ ಅವರು



ನಟಿಸಿದ ಸಿನಿಮಾಗಳಿಂದ ಕೆರಿಯರ್‌ಗೆ ಸಕ್ಸಸ್ ಸಿಗಲಿಲ್ಲ. ಉತ್ತಮ ಕಥೆಗಳಿಗಾಗಿ ಸೋನಾಲಿ ಎದುರು ನೋಡ್ತಿದ್ದಾರೆ. ಆದರೆ ಸಾಮಾಜಿಕ ಜಾಲತಾಣದಲ್ಲಿ ರೀಲ್ಸ್, ಫೋಟೋಶೂಟ್, ಪ್ರಾಡೆಕ್ಟ್ ಪ್ರಚಾರಗಳಲ್ಲಿ ಆಕ್ಟೀವ್ ಆಗಿದ್ದಾರೆ.ದಿ ಎಕ್ಸ್‌ಪೋಸ್, ಗ್ರೇಟ್ ಗ್ರ್ಯಾಂಡ್ ಮಸ್ತಿ, ವೆಬ್ ಸಿರೀಸ್, ಮ್ಯೂಸಿಕ್ ಆಲ್ಬಂಗಳಲ್ಲಿ ಸೋನಾಲಿ ನಟಿಸಿದ್ದಾರೆ. ಟಿವಿ ಶೋಗಳಲ್ಲಿ ಸೋನಾಲಿ ಕಾಣಿಸಿಕೊಂಡಿದ್ದಾರೆ.

# ಸಮಂತಾ ಡಿವೋರ್ಸ್‌ಗೆ ಆಪ್ತ ಸ್ನೇಹಿತೆನೇ ಕಾರಣನಾ?

ಸೌತ್ ನಟಿ ಸಮಂತಾ ಅವರು ಡಿವೋರ್ಸ್ ಆದ್ಮೇಲೆ ಸಿಕ್ಕಾಪಟ್ಟೆ ಸುದ್ದಿಯಲ್ಲಿದ್ದಾರೆ. ಸದಾ ಒಂದಲ್ಲಾ ಒಂದು ವಿಷ್ಯವಾಗಿ ಪುಷ್ಪ ನಟಿ ಸುದ್ದಿಯಲ್ಲಿದ್ದಾರೆ. ಈಗ ಸಮಂತಾ ಡಿವೋರ್ಸ್‌ಗೆ ಇವರೇ ಕಾರಣ ಅಂತ ಸ್ಯಾಮ್ ಬೆಸ್ಟ್ ಫ್ರೆಂಡ್ ಮೇಘನಾ ಕಡೆ ಬೆಟ್ಟು ಮಾಡಿ ತೋರಿಸುತ್ತಿದ್ದಾರೆ. ಹೀಗೊಂದು ಸುದ್ದಿ ಟಾಲಿವುಡ್‌ನಲ್ಲಿ ಭಾರೀ ಚರ್ಚೆಯಾಗುತ್ತಿದೆ.

ನನ್ನ ಎಲ್ಲಾ ಉತ್ತಮ ನಿರ್ಧಾರಗಳಿಗೆ ಹಿಂದೊಂದು ಮುಖವಿದೆ ಎಂದು ಕ್ಯಾಪ್ಷನ್ ನೀಡಿ, ಆಪ್ತ ಸ್ನೇಹಿತೆ ಮೇಘನಾ ಜೊತೆಯಿರುವ ಫೋಟೋವನ್ನು ಸಮಂತಾ ಶೇರ್ ಮಾಡಿದ್ದಾರೆ. ಈ ಪೋಸ್ಟ್ ಹಂಚಿಕೊಳ್ತಿದ್ದಂತೆ, ನಿಮ್ಮ ಡಿವೋರ್ಸ್‌ಗೆ ಮೇಘನಾನೇ ಕಾರಣನಾ? ಅಂತ ನೆಟ್ಟಿಗರು ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆ ಮಾಡಿದ್ದಾರೆ.





ಅಷ್ಟಕ್ಕೂ ಮೇಘನಾ ಯಾರು? ಸಮಂತಾ ಅವರ ಆಪ್ತ ಸ್ನೇಹಿತೆ ಮೇಘನಾ ವಿನೋದ್ ಅವರು ಮಲೇ?ಯಾದಲ್ಲಿ ನೆಲೆಸಿದ್ದಾರೆ. ಸ್ಯಾಮ್- ಮೇಘನಾ ಹಲವು ವರ್ಷಗಳಿಂದ ಫ್ರೆಂಡ್ಸ್. ಸಮಂತಾ ನೋವು, ನಲಿವಿಗೆ ಮೇಘನಾ ಜೊತೆಯಾಗಿ ನಿಂತಿದ್ದಾರೆ. ಸದ್ಯ ಸ್ಯಾಮ್ ಪೋಸ್ಟ್‌ಗೆ ನಿಮ್ಮಿಂದಲೇ ಸಮಂತಾಗೆ ಡಿವೋರ್ಸ್ ಆಯ್ತಾ? ಎಂದೆಲ್ಲಾ ನೆಟ್ಟಿಗರು ಕೇಳಿದ್ದಾರೆ.

ವಿವಾದ, ಅನಾರೋಗ್ಯ, ಯಶಸ್ಸು ಎಲ್ಲವೂ ಅನುಭವಿಸಿರುವ ಜೀವ ಸಮಂತಾ. ನಾಗಚೈತನ್ಯ ಜೊತೆಗಿನ ದಾಂಪತ್ಯಕ್ಕೆ ಅಂತ್ಯ ಹಾಡಿದ ಮೇಲೆ ಸಮಂತಾ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದ್ದರು. ಎಲ್ಲಾ ವಿಚಾರಕ್ಕೂ ಸಮಂತಾ ಕಡೆಯೇ ಬೆಟ್ಟು ಮಾಡಿ ತೋರಿಸುತ್ತಿದ್ದರು. ಸಹವಾಸವೇ ಬೇಡ ಅಂತ ವೃತ್ತಿರಂಗದಲ್ಲಿ ಬ್ಯುಸಿಯಾದರು. 'ಪುಷ್ಪ' ಚಿತ್ರದಲ್ಲಿ ಸೊಂಟ ಬಳುಕಿಸಿದ ಮೇಲೆ ಸಮಂತಾ ಲಕ್ ಬದಲಾಯ್ತು.

ಆದರೆ 'ಯಶೋದ' ಮತ್ತು 'ಖುಷಿ' ಸಿನಿಮಾ ಆದ್ಮೇಲೆ ಬಿಗ್ ಸ್ಕ್ರೀನ್ ಮೇಲೆ ಕಾಣಿಸಿಕೊಂಡಿರಲಿಲ್ಲ. ಎರಡೂ ಹೀನಾಯವಾಗಿ ಸೋತ ಚಿತ್ರಗಳು. ಸೋಲಿನ ಹೊಡೆತಕ್ಕೆ ಅನಾರೋಗ್ಯದ ಆಘಾತ ಎರಡನ್ನೂ ಸಹಿಕೊಳ್ಳೋಕೆ ಸ್ಯಾಮ್‌ಗೆ 6 ತಿಂಗಳು ಹಿಡಿಯಿತು. ಕೆಲದಿನಗಳ ಹಿಂದೆ ನಟನೆಗೆ ಮರಳುವ ಸುದ್ದಿ ನೀಡಿದ್ದರು ಸಮಂತಾ.

ಬಣ್ಣ ಹಚ್ಚದೆ 6 ತಿಂಗಳು ಸಮಂತಾ ವನವಾಸ ಮುಗಿಸಿದ್ದಾರೆ. ಅಭಿಮಾನಿಗಳ ಕಮ್‌ಬ್ಯಾಕ್ ಪ್ರಶ್ನೆಗೆ ನಟಿ ವೀಡಿಯೋ ಮೂಲಕ ಗುಡ್ ನ್ಯೂಸ್ ಕೊಟಿದ್ದರು. ಮತ್ತೆ ಶೀಘ್ರದಲ್ಲೇ ಬಣ್ಣ ಹಚ್ಚುವ ಸಂದೇಶ ನೀಡಿದ್ದರು. ವೆಬ್‌ಸಿರೀಸ್‌ಗಳಲ್ಲಿ ಬ್ಯುಸಿ ಇದ್ದ ಸ್ಯಾಮ್ ಟಾಲಿವುಡ್‌ನಲ್ಲಿ ಹಲವು ಆಫರ್‌ಗಳಿಂದ ದೂರ ಉಳಿದಿದ್ದರು. ಇದೀಗ ಬಹಳ ಗ್ಯಾಪ್ ಆದ್ಮೇಲೆ ಬರುತ್ತಿರುವ ಸಮಂತಾ ರೀ ಎಂಟ್ರಿ ಹೇಗಿರುತ್ತೆ ಅನ್ನುವ ಬಗ್ಗೆ ಫ್ಯಾನ್ಸ್‌ಗೆ ಕುತೂಹಲವಿದೆ.

ಸದ್ಯ ಸಮಂತಾಗೆ ಟಾಲಿವುಡ್ ಮಾತ್ರವಲ್ಲ ಬಾಲಿವುಡ್ ನಿಂದಲೂ ಬಂಪರ್ ಅವಕಾಶಗಳು ಅರಸಿ ಬರುತ್ತಿವೆ. ಹಾಗಾಗಿ ಸಮಂತಾ ಸಿನಿಮಾ ಮತ್ತು ಲುಕ್ ಹೇಗಿರಲಿದೆ ಎಂಬದನ್ನು ಕಾದುನೋಡಬೇಕಿದೆ.

# 'ಡೆವಿಲ್' ಶೂಟಿಂಗ್ ಶುರುವಾಗೋದು ಯಾವಾಗ?

ದರ್ಶನ್ ಅಭಿನಯಿಸುತ್ತಿರೋ ಮುಂದಿನ ಚಿತ್ರ 'ಡೆವಿಲ್' ಫಸ್ಟ್ ಲುಕ್ ರಿಲೀಸ್ ಆಗಿ ಭರ್ಜರಿ ಸೌಂಡ್ ಮಾಡ್ತಿದೆ. ದಚ್ಚು ಹುಟ್ಟುಹಬ್ಬದ ದಿನ ಫ್ಯಾನ್ಸ್‌ಗೆ ಇದೊಂದು ಸರ್ಪ್ರೈಸ್ ಗಿಫ್ಟ್ ಕೊಟ್ಟಿದ್ದಾರೆ. ದರ್ಶನ್ 'ಡೆವಿಲ್'ನಲ್ಲಿ ವಿಭಿನ್ನ ಲುಕ್‌ನಲ್ಲಿ ಕಾಣಿಸ್ಕೊಂಡಿದ್ದಾರೆ. ಹಾಗಾದ್ರೆ ಈ ಸಿನಿಮಾದ ಬ್ಲಾಕ್‌ಬಸ್ಟರ್ ಅಪ್‌ಡೇಟ್ ಏನು? ಶೂಟಿಂಗ್ ಶುರುವಾಗೋದು ಯಾವಾಗ? ಆ ಬಗ್ಗೆ ಖುದ್ದು ದರ್ಶನ್ ಬಿಚ್ಚಿಟ್ಟ ಮಾಹಿತಿ ಇಲ್ಲಿದೆ.

ದರ್ಶನ್ ಹುಟ್ಟುಹಬ್ಬದ ದಿನವೇ 'ಡೆವಿಲ್' ಚಿತ್ರದ ಫಸ್ಟ್ ಲುಕ್ ರಿವೀಲ್ ಆಯ್ತು. ಅಬ್ಬರಿಸುವ ಡೈಲಾಗ್ ಮೂಲಕ ದಚ್ಚು ಎಂಟ್ರಿ ಬಹಳ ಕುತೂಹಲಕಾರಿಯಾಗಿತ್ತು. 'ನಮ್ಮ ಮನೆಯಲೊಂದು ಪುಟ್ಟ ಪಾಪು ಇರುವುದು' ಎಂಬ ವಿಭಿನ್ನ ಡೈಲಾಗ್ ಹೇಳುವ ಮೂಲಕ ದರ್ಶನ್ ಉಗ್ರವಾಗಿ ಕಾಣಿಸಿಕೊಂಡಿದ್ದಾರೆ. ಹೀಗಾಗಿ ನಿರೀಕ್ಷೆ ದುಪ್ಪಟ್ಟಾಗಿದೆ. ಮಾರ್ಚ್‌ನಿಂದ ಚಿತ್ರೀಕರಣ ಪ್ರಾರಂಭವಾಗುವ ವದಂತಿ ಇತ್ತು. ಆದರೆ ಆಗಸ್ಟ್‌ನಿಂದ ಚಿತ್ರೀಕರಣ ಪ್ರಾರಂಭ ಎಂದಿದ್ದಾರೆ ದರ್ಶನ್.

ಆಗಸ್ಟ್ ತಿಂಗಳು ಚಿತ್ರೀಕರಣ ಅಂದರೆ ಇನ್ನೂ 5 ತಿಂಗಳು ಉಳಿಯುತ್ತೆ. ಅಷ್ಟು ತಡವಾಗಿ ಚಿತ್ರೀಕರಣ ಶುರುವಾಗ್ತಿರೋದು ಯಾಕೆ ಅನ್ನೋದೇ ಕುತೂಹಲ. ಮೂಲಗಳ ಪ್ರಕಾರ, 'ಡೆವಿಲ್' ಈಗ ಪ್ರೀ ಪ್ರೊಡಕ್ಷನ್




ಹಂತದಲ್ಲಿದೆ ಎನ್ನಲಾಗ್ತಿದೆ. ಹಿಂದೆ ಡೆವಿಲ್ ನಿರ್ದೇಶಕ ಮಿಲನ ಪ್ರಕಾಶ್ ಜೊತೆ 'ತಾರಕ್' ಮಾಡುವಾಗ ಪ್ರಕಾಶ್‌ರ ಶೂಟಿಂಗ್ ಪರಿಪೂರ್ಣತೆ ಬಗ್ಗೆ ದರ್ಶನ್ ಹಾಡಿ ಹೊಗಳಿದ್ದರು.

ಹೀಗಾಗಿ ಪ್ರಕಾಶ್ ಚಿತ್ರೀಕರಣದ ವಿಚಾರದಲ್ಲಿ ಪಕ್ಕಾ ಇರುತ್ತಾರೆ ಅನ್ನೋದಂತೂ ಸಾಬೀತಾಗಿದೆ. ಹೀಗಾಗಿ ಆಗಸ್ಟ್‌ನಲ್ಲಿ ಅಷ್ಟು ತಡವಾಗಿ ಚಿತ್ರೀಕರಣ ಶುರುವಾಗ್ತಿರೋದು ಯಾಕೆ ಅನ್ನೋದೇ ಸದ್ಯದ ಕುತೂಹಲ. ಹಾಗಾದ್ರೆ ವರ್ಷಕ್ಕೆ 2 ಸಿನಿಮಾ ನಿರೀಕ್ಷೆಯಲ್ಲಿರೋ ಫ್ಯಾನ್ಸ್ ಕಥೆಯೇನು ಹಾಗಾದ್ರೆ? 'ಡೆವಿಲ್' ಅಪ್‌ಡೇಟ್‌ಗಾಗಿ ಅಭಿಮಾನಿಗಳು ಕಾಯಬೇಕು.

ಮಿಲನ ಪ್ರಕಾಶ್ ಈ ಸಿನಿಮಾವನ್ನು ನಿರ್ದೇಶನ ಮಾಡಲಿದ್ದು, ಅಜನೀಶ್ ಲೋಕನಾಥ್ ಅವರ ಸಂಗೀತ ಸಂಯೋಜನೆ ಚಿತ್ರಕ್ಕೆ ಇರಲಿದೆ, ವೈಷ್ಣೋ ಬ್ಯಾನರ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ.

ಡಿಬಾಸ್ ಕೈಯಲ್ಲಿ ಈಗ 9ಕ್ಕೂ ಹೆಚ್ಚು ಚಿತ್ರಗಳಿವೆ. ರಮೇಶ್ ಪಿಳ್ಳೈ, ಶೈಲಜಾ ನಾಗ್ ಮತ್ತು ಬಿ.ಸುರೇಶ, ಮೋಹನ್ ನಟರಾಜನ್, ಸೂರಪ್ಪ ಬಾಬು, ಸಚ್ಚಿದಾನಂದ ಇಂಡುವಾಳ, ಕೆ.ಮಂಜುನಾಥ್, ರಘುನಾಥ್ ಸೋಗಿ, ಮಹೇಶ್ ಸುಖಧರೆ, ರಾಘವೇಂದ್ರ ಹೆಗ್ಡೆ ಹೀಗೆ ಸಾಲು ಸಾಲು ನಿರ್ಮಾಪಕರು ದರ್ಶನ್‌ಗಾಗಿ ಸಿನಿಮಾ ಮಾಡಲು ಮುಂದೆ ಬಂದಿದ್ದಾರೆ. ದರ್ಶನ್ ಹುಟ್ಟುಹಬ್ಬದಂದು (ಫೆ.16) ಸಿನಿಮಾಗಳನ್ನು ಘೋಷಣೆ ಕೂಡ ಮಾಡಿದ್ದಾರೆ.

# ಫೋಟೋ ಶೂಟ್‌ನಲ್ಲಿ ಮಿಂಚಿದ ಸ್ಟಾರ್ಸ್

ಇದೇ ಫೆಬ್ರವರಿ 23 ರಿಂದ 2ನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್ ಆರಂಭವಾಗುತ್ತಿದ್ದು, ಬಿಸಿಸಿಐ ಸಕಲ ಸಿದ್ದತೆ ಮಾಡಿಕೊಂಡಿದೆ. ಈಗಾಗಲೇ ಐದು ತಂಡಗಳು ತಮ್ಮ ತವರು ಕ್ರೀಡಾಂಗಣಗಳಲ್ಲಿ ಅಭ್ಯಾಸ ಆರಂಭಿಸಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡ ಫೋಟೋಶೂಟ್ ಮಾಡಿಸಿದ್ದು, ತನ್ನ ಸೋಶಿಯಲ್ ಮೀಡಿಯಾ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ.

ಆರ್‌ಸಿಬಿ ತಂಡದ ನಾಯಕಿ ಸ್ಮೃತಿ ಮಂದಾನಾ, ಕನ್ನಡತಿ ಶ್ರೇಯಾಂಕ ಪಾಟೀಲ್, ಸ್ಫೋಟಕ ಆಟಗಾರ್ತಿ ಸೋಫಿ ಡಿವೈನ್ ಸೇರಿದಂತೆ ಅನೇಕರು ಫೋಟೋ ಶೂಟ್‌ನಲ್ಲಿ ಮಿಂಚಿದ್ದಾರೆ. ಇದರಿಂದ ಫುಲ್ ಖುಷ್ ಆಗಿರುವ ಆರ್‌ಸಿಬಿ ಅಭಿಮಾನಿಗಳು ಜಾಲತಾಣದಲ್ಲಿ ?ಈ ಸಲ ಕಪ್ ನಮ್ದೆ? ಟ್ರೆಂಡ್ ಶುರು ಮಾಡಿದ್ದಾರೆ.




**ಯಾವಾಗಿನಿಂದ ಪಂದ್ಯ ಆರಂಭ?:** 2ನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಹಾಲಿ ಚಾಂಪಿಯನ್‌ಗಳಾದ ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ಡೆಲ್ಲಿ ಕ್ಯಾಪಿಟಲ್ಸ್, ಯುಪಿ ವಾರಿಯರ್ಸ್ ಹಾಗೂ ಗುಜರಾತ್ ಜೈಂಟ್ಸ್ ತಂಡಗಳು ಕಣಕ್ಕಿಳಿಯುತ್ತಿವೆ. ಫೆಬ್ರವರಿ 23 ರಿಂದ ಮಾರ್ಚ್ 13ರ ವರೆಗೆ ಒಟ್ಟು 20 ಲೀಗ್ ಸುತ್ತಿನ ಪಂದ್ಯಗಳು ನಡೆಯಲಿವೆ. ಮಾರ್ಚ್ 15 ರಂದು ಎಲಿಮಿನೇಟರ್ ಪಂದ್ಯ ನಡೆಯಲಿದ್ದು, ಮಾರ್ಚ್ 17 ರಂದು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿದೆ.

**ಎಲ್ಲೆಲ್ಲಿ ಪಂದ್ಯ ನಡೆಯಲಿದೆ?:** ಕಳೆದ ವರ್ಷ ಮುಂಬೈನ ಬ್ರಬೋರ್ನ್ ಮತ್ತು ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ನಡೆಸಲಾಗುತ್ತಿತ್ತು. ಆದ್ರೆ ಈ ಬಾರಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣಗಳಲ್ಲಿ ಆಯೋಜಿಸಲಾಗಿದೆ. ಲೀಗ್ ಸುತ್ತಿನ ಬಹುತೇಕ ಪಂದ್ಯಗಳು ಬೆಂಗಳೂರಿನ ಕ್ರೀಡಾಂಗಣದಲ್ಲಿ ನಡೆಯಲಿದೆ. ಡಬ್ಲ್ಯೂಪಿಎಲ್‌ನಲ್ಲಿ 5 ಮಹಿಳಾ ತಂಡಗಳು ಇರಲಿದ್ದು, ಅಗ್ರಸ್ಥಾನ ಪಡೆದ ತಂಡ ನೇರವಾಗಿ ಫೈನಲ್‌ಗೆ ಅರ್ಹತೆ ಪಡೆದುಕೊಳ್ಳಲಿದೆ. ಇನ್ನೂ 2 ಮತ್ತು 3ನೇ ಸ್ಥಾನಗಳಲ್ಲಿರುವ ತಂಡಗಳು ಎಲಿಮಿನೇಟರ್ ಪಂದ್ಯದಲ್ಲಿ ಸೆಣಸಲಿದ್ದು, ಗೆದ್ದ ತಂಡ ಫೈನಲ್‌ನಲ್ಲಿ ಸೆಣಸಲಿದೆ.

**ಚೊಚ್ಚಲ ಆವೃತ್ತಿಯಲ್ಲಿ ಮುಂಬೈ ಚಾಂಪಿಯನ್:** 2023ರಲ್ಲಿ ಆರಂಭಗೊಂಡ ಮಹಿಳಾ ಪ್ರೀಮಿಯರ್ ಲೀಗ್ ಚೊಚ್ಚಲ ಆವೃತ್ತಿಯಲ್ಲಿ ಹರ್ಮನ್ ಪ್ರೀತ್ ಕೌರ್ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

# ಕಿಂಗ್ ಕೊಹ್ಲಿಯ ಅಪರೂಪದ ದಾಖಲೆ ಮುರಿಯುವ ಸನಿಹದಲ್ಲಿ ಯಶಸ್ವಿ!

ಕ್ರಿಕೆಟ್ ಲೋಕದಲ್ಲೀಗ ಟೀಂ ಇಂಡಿಯಾ ಯುವ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಅವರದ್ದೇ ಸುದ್ದಿ. ಭಾರತ ಹಾಗೂ ಇಂಗ್ಲೆಂಡ್ ನಡುವಿನ ಟೆಸ್ಟ್ ಪಂದ್ಯಗಳಲ್ಲಿ ಬ್ಯಾಕ್ ಟು ಬ್ಯಾಕ್ ದ್ವಿಶತಕ ಸಿಡಿಸಿ ಮಿಂಚುತ್ತಿರುವ ಜೈಸ್ವಾಲ್ ಸದ್ಯದಲ್ಲೇ ವಿರಾಟ್ ಕೊಹ್ಲಿ ಅವರ ಅಪರೂಪದ ದಾಖಲೆಯೊಂದನ್ನು ಮುರಿಯುವ ಸನಿಹದಲ್ಲಿದ್ದಾರೆ.

ಟೆಸ್ಟ್ ಸರಣಿಯೊಂದರಲ್ಲಿ ಅತಿಹೆಚ್ಚು ರನ್ ಗಳಿಸಿದ ಟೀಂ ಇಂಡಿಯಾ 3ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಸನಿಹದಲ್ಲಿ ಜೈಸ್ವಾಲ್. ಟೆಸ್ಟ್ ಕ್ರಿಕೆಟ್‌ನ ಸರಣಿಯೊಂದರಲ್ಲಿ ವೈಯಕ್ತಿಕವಾಗಿ ಗರಿಷ್ಠ ರನ್ ಗಳಿಸಿದ ಬ್ಯಾಟರ್‌ಗಳ ಪೈಕಿ 774 ರನ್ ಗಳಿಸಿರುವ ಸುನೀಲ್ ಗವಾಸ್ಕರ್ ಮೊದಲ ಸ್ಥಾನದಲ್ಲಿದ್ದರೆ, ವಿರಾಟ್ ಕೊಹ್ಲಿ 2ನೇ



ಸ್ಥಾನದಲ್ಲಿದ್ದಾರೆ. ಈಗಾಗಲೇ 3 ಪಂದ್ಯಗಳಲ್ಲಿ 545 ರನ್ ಗಳಿಸಿರುವ ಯುವ ಆಟಗಾರ ಯಶಸ್ವಿ ಜೈಸ್ವಾಲ್‌ಗೆ ಕೊಹ್ಲಿ ದಾಖಲೆ ಮುರಿಯಲು ಇನ್ನೂ 147 ರನ್‌ಗಳ ಅಗತ್ಯವಿದೆ.

ಸದ್ಯ ಯಶಸ್ವಿ ಜೈಸ್ವಾಲ್ ಇಂಗ್ಲೆಂಡ್ ವಿರುದ್ಧ ಆಡಿರುವ 3 ಪಂದ್ಯಗಳಲ್ಲಿ (6 ಇನ್ನಿಂಗ್ಸ್) 109 ಸರಾಸರಿಯಲ್ಲಿ ಒಟ್ಟು 545 ರನ್ ಗಳಿಸಿದ್ದಾರೆ. ಇದರಲ್ಲಿ ಎರಡು ದ್ವಿಶತಕ, 1 ಅರ್ಧಶತಕ, 50 ಬೌಂಡರಿ, 22 ಸಿಕ್ಸರ್‌ಗಳೂ ಸೇರಿವೆ.

2023-25ರ ಫಖಿಅನಲ್ಲಿ ಯಶಸ್ವಿ ಸಾಧನೆ:

ಬ್ಯಾಟಿಂಗ್‌ನಲ್ಲಿ ಮಿಂಚುತ್ತಿರುವ ಯಶಸ್ವಿ ಜೈಸ್ವಾಲ್ ಸದ್ಯ 2023-25ರ ವಿಶ್ವಟೆಸ್ಟ್ ಚಾಂಪಿಯನ್ ಶಿಪ್ ಅಂಕಪಟ್ಟಿಲ್ಲಿ ಟಾಪ್‌ನಲ್ಲಿದ್ದಾರೆ. ಅತಿಹೆಚ್ಚು ಸ್ಕೋರರ್, ಉತ್ತಮ ಸರಾಸರಿ, ಅತಿಹೆಚ್ಚು ರನ್, ಅತಿಹೆಚ್ಚು ಸ್ಟ್ರೈಕ್ ರೇಟ್, ಹೆಚ್ಚು ಬಾರಿ 50+ ರನ್ ಗಳಿಸಿದವರು, ಹೆಚ್ಚು ಬಾರಿ ಶತಕ ಸಿಡಿಸಿದವರು, ಹೆಚ್ಚು ಬೌಂಡರಿ, ಸಿಕ್ಸರ್ ಬಾರಿಸಿದವರ ಪಟ್ಟಿಯಲ್ಲೂ ಯಶಸ್ವಿ ಜೈಸ್ವಾಲ್ ಅಗ್ರಸ್ಥಾನದಲ್ಲಿರುವುದು ವಿಶೇಷ.

ಕುವೆಂಪು ಘೋಷವಾಕ್ಯ

# ತೆಗೆದುಹಾಕಲು ಸರ್ಕಾರ ಆದೇಶಿಸಿಲ್ಲ

**ಬೆಂಗಳೂರು:** 'ಜ್ಞಾನದೇಗುಲವಿದು ಕೈಮುಗಿದು ಒಳಗೆ ಬನ್ನಿ' ಘೋಷವಾಕ್ಯವನ್ನು ತೆಗೆದುಹಾಕುವ ಯಾವುದೇ ಆದೇಶವನ್ನು ಸರ್ಕಾರ ಹೊರಡಿಸಿಲ್ಲ. ಆದ್ರೆ, ಮಕ್ಕಳಲ್ಲಿ ಪ್ರಶ್ನಿಸುವ ಸಾಮರ್ಥ ಬೆಳೆಸುವ ನಿಟ್ಟಿನಲ್ಲಿ ಇಂತಹ ಆಲೋಚನೆಗಳನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕು. ನನ್ನ ಪ್ರಕಾರ ಇದೊಂದು ವಿವಾದದ ಅಂಶವೇ ಅಲ್ಲ ಎಂದು ಸಚಿವ ಹೆಚ್.ಸಿ ಮಹದೇವಪ ತಿಳಿಸಿದ್ದಾರೆ.

'ಜ್ಞಾನದೇಗುಲವಿದು ಕೈಮುಗಿದು ಒಳಗೆ ಬನ್ನಿ' ವಸತಿ ಶಾಲೆಗಳ ದ್ವಾರದಲ್ಲಿದ್ದ ಬರಹ ಬದಲಾವಣೆಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ ಸಚಿವರು ಪ್ರಕಟಣೆ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ.

ಸಚಿವರ ಪ್ರಕಟಣೆಯಲ್ಲಿ ಏನಿದೆ?

ಇನ್ನೂ ಈ ಬಗ್ಗೆ ಅಧಿಕೃತ ಪ್ರಕಟಣೆಯನ್ನೂ ಹೊರಡಿಸಿರುವ ಸಚಿವರು, ಸರ್ಕಾರದ ವತಿಯಿಂದ ಈಗ ಪ್ರಸ್ತುತ ಇರುವ ಘೋಷವಾಕ್ಯವನ್ನು ತೆಗೆದುಹಾಕುವ ಯಾವುದೇ ಆದೇಶವನ್ನು ಹೊರಡಿಸಲಾಗಿಲ್ಲ, ಆದರೆ ಸೃಜನಾತ್ಮಕ ಕಲಿಕೆಯ ದೃಷ್ಟಿಯಿಂದ, ಮಕ್ಕಳಲ್ಲಿ ವೈಜ್ಞಾನಿಕತೆ ಹಾಗೂ ವೈಚಾರಿಕತೆಯನ್ನು ಮೂಡಿಸಿ ಅವರಲ್ಲಿ ಯೋಚನಾ ಶಕ್ತಿಯನ್ನು ಹರಡುವ ದೃಷ್ಟಿಯಿಂದ ಸಾಮಾಜಿಕ ಜಾಲತಾಣದ ಗುಂಪಿನಲ್ಲಿ ಚರ್ಚೆಯನ್ನು ನಡೆಸಿದ್ದು, 'ಜ್ಞಾನ ದೇಗುಲವಿದು ? ಧೈರ್ಯವಾಗಿ ಪ್ರಶ್ನಿಸಿ' ಎಂದು ಶಾಲೆಗಳಲ್ಲಿ ಹಾಕಿದರೆ ಹೇಗೆ? ಎಂಬ ಆಲೋಚನೆಯನ್ನು ಕೆಲವರು ಮುಂದಿಟ್ಟಾಗ, ಅದಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದಿದ್ದಾರೆ.

ಉತ್ತಮ ಆಲೋಚನೆಯನ್ನು ಹೊಂದಿದ ಈ ಸಾಲನ್ನು ಕೆಲವರು ಶಾಲೆಗಳಲ್ಲೂ ಬಳಸಿರುತ್ತಾರೆ. ಅಂದಹಾಗೆ ಜ್ಞಾನ ದೇಗುಲವಿದು ? ಧೈರ್ಯವಾಗಿ ಪ್ರಶ್ನಿಸಿ ಎಂದರೆ ಅದು ಕುವೆಂಪು ಅವರು ಹೇಳುವ ವಿಚಾರ ಕ್ರಾಂತಿಗೆ ಆಹ್ವಾನ ಪ್ರಬಂಧದ ಆಶಯವೇ






ಆಗಿದ್ದು, ಕುವೆಂಪು ಅವರಿಗೆ ಅವಮಾನ ಎಸಗುವ ಯಾವುದೇ ಪ್ರಮಾದವು ಇಲ್ಲಿ ಜರುಗಿರುವುದಿಲ್ಲ. ಶಿಕ್ಷಣದ ಉದ್ದೇಶವೇ ಮಕ್ಕಳಲ್ಲಿ ವೈಚಾರಿಕತೆಯ ಜೊತೆಗೆ, ಪ್ರಶ್ನಿಸುವ ಸಾಮರ್ಥ್ಯ ಬೆಳೆಸುವುದಾಗಿದೆ. ಐಸಾಕ್ ನ್ಯೂಟನ್, ಆಲ್ಬರ್ಟ್ ಐನ್ ಸ್ಟೀನ್ ನಿಂದ ಹಿಡಿದು ಬಹಳಷ್ಟು ವಿಜ್ಞಾನಿಗಳು ಇದನ್ನೇ ಪ್ರತಿಪಾದಿಸಿದ್ದು ಕಲಿಯುವ ಮಕ್ಕಳಲ್ಲಿ ಪ್ರಶ್ನಿಸುವ ಸಾಮರ್ಥವನ್ನು ಬೆಳೆಸುವ ನಿಟ್ಟಿನಲ್ಲಿ ಇಂತಹ ಆಲೋಚನೆಗಳನ್ನು ನಾವು ಮುಕ್ತ ಮನಸ್ಸಿನಿಂದ ಸ್ವಾಗತಿಸಬೇಕು. ನನ್ನ ಪ್ರಕಾರ ಇದೊಂದು ವಿವಾದದ ಅಂಶವೇ ಅಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದಕ್ಕೂ ಮುನ್ನ ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಮಕ್ಕಳು ಅನ್ಯಾಯ ಆದಾಗ ಪ್ರಶ್ನೆ ಮಾಡ್ಬೇಕು, ದೌರ್ಜನ್ಯ ಆದಾಗ ಪ್ರತಿಭಟನೆ ಮಾಡಬೇಕು. ಅನ್ಯಾಯ ಆದವರ ಪರ ದನಿ ಎತ್ತಬೇಕು. ಆ ಸಾಲಿನಲ್ಲಿ ಏನು ಧೈರ್ಯ ತುಂಬಬೇಕು? ಅದನ್ನು ಮಾಡುತ್ತೇವೆ. ಕುವೆಂಪು ಜಾಗೃತಿ ಮೂಡಿಸಿದ್ದಾರೆ, ಸಂವಿಧಾನ ಕಾನೂನು ಮಾತನಾಡುವ ಹಕ್ಕು ಕೊಟ್ಟಿದೆ. ಸುಮ್ಮ-ಸುಮ್ಮನೆ ಇದನ್ನೆಲ್ಲ ಕಾಂಟ್ರವರ್ಸಿ ಮಾಡೋದು ಬೇಡ ಎಂದು ಮನವಿ ಮಾಡಿದ್ರು.

ಬಿಜೆಪಿಯವರು ಕಾಂಟ್ರವರ್ಸಿ ಮಾಡ್ತಿದ್ದಾರಾ ಅನ್ನೋ ಪ್ರಶ್ನೆಗೆ ಉತ್ತರಿಸಿ, ಬಿಜೆಪಿಯವರು ಕಾಂಟ್ರವರ್ಸಿ ಮಾಡದ ವಿಷಯ ಯಾವುದಿದೆ? ಅಭಿವೃದ್ಧಿ ಬಿಟ್ಟು, ಸಂವಿಧಾನದ ಆಶಯ ಬಿಟ್ಟು, ಕುವೆಂಪು ಅವರ ವೈಚಾರಿಕತೆ ನಿಲುವುಗಳನ್ನ ಬಿಟ್ಟು, ಬಸವಣ್ಣನ ಜಾತಿ ವಿನಾಶ ಬಿಟ್ಟು, ಸುಖಿ ರಾಜ್ಯ ಬಿಟ್ಟು ಮಾಡೋಕೆ ಇನ್ನೇನಿದೆ ಎಂದು ಕಿಡಿಕಾರಿದ್ದಾರೆ.

# ಬೆಂಗಳೂರಲ್ಲಿ ಹೆಚ್ಚು ವಾಯು ಮಾಲಿನ್ಯ: ಬೋಸರಾಜು

**ಬೆಂಗಳೂರು:** ರಸ್ತೆ ಧೂಳು, ಕಟ್ಟಡ ನಿರ್ಮಾಣದಿಂದ ಬೆಂಗಳೂರಿನಲ್ಲಿ ವಾಯು ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ಸರ್ಕಾರ ಮಾಹಿತಿ ನೀಡಿದ್ದು, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ವಿವಿಧ ಕಾರಣಗಳಿಂದ ಹೆಚ್ಚಾಗುತ್ತಿದೆ ಎಂದು ತಿಳಿಸಿದೆ ಎಂದು ಸಚಿವ ಬೋಸರಾಜು ಹೇಳಿದ್ದಾರೆ.



ಸದನದಲ್ಲಿ ಜೆಡಿಎಸ್‌ನ ಗೋವಿಂದರಾಜು ಪ್ರಶ್ನೆಗೆ ಈಶ್ವರ್ ಖಂಡ್ರೆ ಬದಲಾಗಿ ಸಚಿವ ಬೋಸರಾಜು ಉತ್ತರ ನೀಡಿದರು. ವಾಹನಗಳ ಸಂಚಾರ, ಹೊರಸೂಸುವಿಕೆ, ರಸ್ತೆ ಧೂಳಿನ ಮರು ತೇಲಾಡುವಿಕೆ, ಹೆಚ್ಚಾದ ಕಟ್ಟಡ ಕಾಮಗಾರಿಯಿಂದ ಬೆಂಗಳೂರಿನಲ್ಲಿ ವಾಯು ಮಾಲಿನ್ಯ ಉಂಟಾಗಿದೆ. 2022-23ನೇ ಸಾಲಿನಲ್ಲಿ 7 ನಿರಂತರ ಪರಿವೇಷ್ಠಕ ವಾಯು ಮಾಪನ ಕೇಂದ್ರದ ವರದಿ ಪ್ರಕಾರ ಪಿಎಂ10 ಮತ್ತು ಪಿಎಂ2.5 ಗಳನ್ನ ಹೊರತುಪಡಿಸಿ ಉಳಿದ ಮಾನಕಗಳು ರಾಷ್ಟ್ರೀಯ ಮಿತಿಯನ್ನು ಮೀರಿರುವುದಿಲ್ಲ. ಬೆಂಗಳೂರು ನಗರದ ಸ್ಥಳಗಳಲ್ಲಿ ಗಂಧಕದ ಡೈಆಕ್ಸೈಡ್, ಸಾರಜನಕದ ಡೈಆಕ್ಸೈಡ್, ಅಮೋನಿಯಾ ಮೌಲ್ಯಗಳು ರಾಷ್ಟ್ರೀಯ ಮಿತಿಗಿಂತ ಮತ್ತು ಸಾಕಷ್ಟು ಕಡಿಮೆ ಇದೆ ಎಂದರು.

ಬೆಂಗಳೂರು ನಗರದ ವಾಯು ಮಾಲಿನ್ಯ ಮೂಲ ತಿಳಿಯಲು ಕರ್ನಾಟಕ ರಾಜ್ಯ ವಾಯುಮಾಲಿನ್ಯ ನಿಯಂತ್ರಣ ಮಂಡಳಿಯು ಸೆಂಟರ್ ಫಾರ್ ಸ್ಟಡಿ ಫಾರ್ ಸೈನ್ಸ್, ಟೆಕ್ನಾಲಜಿ ಮತ್ತು ಪಾಲಿಸಿ (ಸಿಎಸ್‌ಟಿಇಪಿ) ಬೆಂಗಳೂರು ಇವರಿಂದ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಪಿಎಂ10 ವಾಯು ಮಾಲಿನ್ಯ ಪ್ರಮಾಣ ರಸ್ತೆ ಧೂಳು- 51.1%, ಸಾರಿಗೆ- 18.6%, ಕಟ್ಟಡ ನಿರ್ಮಾಣ-6.0%, ತ್ಯಾಜ್ಯ ಸುಡುವುದು- 7.8%, ಸೆಕೆಂಡರಿ ಸಲ್ಫೇಟ್ -5.2%, ಸೆಕೆಂಡರಿ ನೈಟ್ರೇಟ್- 2.3%, ಡಿ.ಜಿ.ಸೆಟ್- 0.6%, ಇತರೆ- 8.2% ಇದೆ ಎಂದು ತಿಳಿಸಿದರು.

ಇನ್ನು ಪಿಎಂ 2.5 ವಾಯು ಮಾಲಿನ್ಯದ ಪ್ರಮಾಣ, ರಸ್ತೆ ಧೂಳು- 25.3%, ಸಾರಿಗೆ- 39.9, ಕಟ್ಟಡ ನಿರ್ಮಾಣ-0.4, ತ್ಯಾಜ್ಯ ಸುಡುವುದು-10.3, ಸೆಕೆಂಡರಿ ಸಲ್ಫೇಟ್ -13.2, ಸೆಕೆಂಡರಿ ನೈಟ್ರೇಟ್- 0.3, ಡಿ.ಜಿ.ಸೆಟ್- 0.3%, ಇತರೆ- 7.6% ಇದೆ ಎಂದು ಸರ್ಕಾರ ಮಾಹಿತಿ ನೀಡಿದೆ ಎಂದು ಹೇಳಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com